# 1

## ಪ್ರಜಾಪ್ರಭುತ್ವದ ತತ್ತ್ವಗಳು ಮತ್ತು ಮೂಲಭೂತ ಕಲ್ಪನೆಗಳು

ಈ ಅಧ್ಯಾಯದಲ್ಲಿ ನಾನು, ಯಾವುದೇ ಸಮಾಜದಲ್ಲಿನ ಪ್ರಜಾಪ್ರಭುತ್ವದ ' ಮೂಲತತ್ವಗಳು ಮತ್ತು ಕಲ್ಪನೆಗಳನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ವಾಸ್ತವವಾಗಿ ಪ್ರಜಾಪ್ರಭುತ್ವ ಸರ್ಕಾರಗಳು ಮತ್ತು ಸಂಸ್ಥೆಗಳು ನಿರ್ದಿಷ್ಟ ಚಾರಿತ್ರಿಕ ಸಮಾಜಗಳಲ್ಲಿ ನೆಲೆಗೊಂಡಿರುತ್ತವೆಯಾದರೂ; ಮುಂದಿನ ಮೊದಲನೆ ಅಧ್ಯಾಯದಲ್ಲಿ ನಾನು, ಇಪ್ಪತ್ತನೆಯ ಶತಮಾನದ ಅಂತಿಮ ಘಟ್ಟದ ಔದ್ಯೋಗಿಕ ಸಮಾಜಗಳಲ್ಲಿನ ಪ್ರಜಾಪ್ರಭುತ್ವದ ತತ್ವಗಳನ್ನು ಅರಿತುಕೊಳ್ಳುವ ನಿಟ್ಟಿನಲ್ಲಿ; ಅದಕ್ಕೆ ಸೂಕ್ತವೆನಿಸುವ ಸಂಸ್ಥೆಗಳು ಮತ್ತು ಆಚರಣೆಗಳನ್ನು ಪರಿಶೋಧಿಸಲು ಇಚ್ಛಿಸುತ್ತೇನೆ. ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿರುವ ಸಂಸ್ಥೆಗಳನ್ನು; ಈ ಅಧ್ಯಾಯದಲ್ಲಿ ಸೂಚಿತವಾದ ಪ್ರಜಾಪ್ರಭುತ್ವದ ಸಾಮಾನ್ಯ ತತ್ವಗಳೊಡನೆ ತುಲನೆಮಾಡಲು ಅಧ್ಯಾಯ ಒಂದರಿಂದ ಐದರವರೆಗೆ ನಾನು ನಡೆಸಿದ ಪ್ರಯತ್ನವು, ನಿಯಮಗಳ ರಚನೆ ಮತ್ತು ಪರಿಷ್ಕರಣೆಯ ಮೂಲ ಪ್ರಯತ್ನದಷ್ಟೇ ಮಹತ್ವದ್ದೆಂದು ನನಗೆ ತೋರುತ್ತದೆ. ಇಪ್ಪತ್ತನೆಯ ಶತಮಾನದ ರಾಜಕೀಯ ತತ್ವಶಾಸ್ತ್ರಜ್ಞರು ಈ ಕೆಲಸವನ್ನು ನಿಭಾಯಿಸುವುದರಲ್ಲಿ ಸತತವಾಗಿ ನಿರತರಾಗಿದ್ದು, 1970ರ ದಶಕದಲ್ಲಿ ಈ ನಿಟ್ಟಿನ ವಿಶೇಷಪ್ರಕಟಣೆಗಳ ಮಹಾಪೂರದೊಂದಿಗೆ ಸಾಂಪ್ರದಾಯಿಕ ರಾಜಕೀಯ–ತತ್ವಶಾಸ್ತ್ರಜ್ಞರೂ ಸಹ ಇದನ್ನು ನಿರ್ವಹಿಸಿದ್ದಾರೆ. ಸಂಯುಕ್ತ ಸಂಸ್ಥಾನದ ಚಟುವಟಿಕೆಗಳ ಬಗ್ಗೆ ನಾನು ನಿರ್ದಿಷ್ಟವಾಗಿ ಆಲೋಚಿಸುತ್ತಿದ್ದೇನೆ. ಉದಾಹರಣೆಗೆ ಫಿಲಾಸಫಿ ಆ್ಯಂಡ್ ಪಬ್ಲಿಕ್ ಅಫೇರ್ಸ್ ಎಂಬ ನಿಯತಕಾಲಿಕೆಯಲ್ಲಿ ಬಹುವಾಗಿ ಪ್ರತಿನಿಧಿಸಲ್ಪಟ್ಟ ನ್ಯಾಯಬದ್ಧ ಮತ್ತು ನ್ಯಾಯಬದ್ಧವಲ್ಲದ ಯುದ್ಧಗಳು, ನ್ಯಾಯಬದ್ಧ ವರಮಾನ ನಿಯಮಾವಳಿಗಳು, ಮಕ್ಕಳ ಹಕ್ಕುಗಳು, ಜನಾಂಗೀಯ ವಾದ, ಮಹಿಳಾವಾದ, ಧನಾತ್ಮಕ ತಾರತಮ್ಯ ಇವೇ ಮುಂತಾದ ವಿಷಯಗಳನ್ನು ದೃಷ್ಟಾಂತಕ್ಕಾಗಿ ತೆಗೆದುಕೊಳ್ಳಬಹುದು. ಏನೇ ಆದರೂ; ನಾನು ಪ್ರಸ್ತಾವನೆಯಲ್ಲಿ ಸೂಚಿಸಿದಂತೆ, ಈ ವಿಧದ ತಾತ್ವಿಕ ಕೆಲಸಗಳು ಇಲ್ಲಿಯವರೆಗೂ ಬ್ರಿಟನ್ನಿನ ಶೈಕ್ಷಣಿಕ ತತ್ವಶಾಸ್ತ್ರದಲ್ಲಿ ಹೆಚ್ಚಾಗಿ ಕಂಡುಬಂದಿರುವುದಿಲ್ಲ. ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಸಿದ್ಧಾಂತಗಳ ಕ್ಷೇತ್ರದಲ್ಲಿ ನಡೆದ ಕೆಲಸವು; ಪ್ರಜಾಪ್ರಭುತ್ವದ ಸಾಮಾನ್ಯ ನಿಯಮಗಳನ್ನು ಪರಿಚಯಿಸುವಲ್ಲಿಗೇ ಕೊನೆಗೊಂಡಿದೆ. ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ತತ್ವಗಳನ್ನು ಮೂರ್ತವಾಗಿ ಅಳವಡಿಸುವ ಬಗ್ಗೆ ಸಲಹೆಗಳನ್ನು ನೀಡುವ ಪ್ರಯತ್ನಗಳನ್ನು ನಡೆಸಲಾಗಿದ್ದು ಪಠ್ಯಕ್ರಮವನ್ನು ಪ್ರಜಾಸತ್ತಾತ್ಮಕ ನಿಯಂತ್ರಣಕ್ಕೆ ಒಳಪಡಿಸುವ ವಿಷಯಗಳನ್ನು ಕುರಿತ ಕ್ಷೇತ್ರವನ್ನು ಹೊರತುಪಡಿಸಿ, ಪ್ರಾಯಶಃ ಇತರೆ ಕ್ಷೇತ್ರಗಳಲ್ಲಿ, ಶೈಕ್ಷಣಿಕ ತತ್ವಶಾಸ್ತ್ರಜ್ಞರು ನಡೆಸಿದ ಪ್ರಯತ್ನಗಳು ಬಹಳ ಕಡಿಮೆ. (ನೋಡಿ: ಉದಾ. ಸಾಕೆಟ್ 1980) – ಇದಕ್ಕೆ ಸೂಕ್ತ ಕಾರಣವಿದೆಯೆಂದು ಯಾರಾದರೂ ಹೇಳಬಹುದು. ಸಾಮಾನ್ಯ ನಿಯಮಗಳು ಮತ್ತು ಪರಿಕಲ್ಪನೆಗಳ ರಚನೆ ಮತ್ತು ಪರಿಷ್ಕರಣೆಯೇ ತತ್ವಶಾಸ್ತ್ರ. ಇತರರು ಇವುಗಳನ್ನು ನಿಶ್ಚಿತ ಸಂದರ್ಭಗಳಿಗೆ ಅನ್ವಯಿಸತಕ್ಕದ್ದು. ಆದರೆ ಇದನ್ನು ನಿರ್ವಹಿಸುವವರಾರು? ಈ ಕೆಲಸವನ್ನು ನಾನು ವರ್ಗಾಯಿಬಹುದಾದ, ಶಿಕ್ಷಣ ಕ್ಷೇತ್ರದಲ್ಲಿ ತಿಳುವಳಿಕೆಯುಳ್ಳ ಯಾವುದೇ ವ್ಯಕ್ತಿಯೂ ನನಗೆ ಕಾಣುತ್ತಿಲ್ಲ. ಏನೇ ಆದರೂ, ಸಾಂಪ್ರದಾಯಿಕ ರಾಜಕೀಯ ತತ್ವಶಾಸ್ತ್ರಜ್ಞರು ಅದನ್ನು ನಿರ್ವಹಿಸಿದ್ದರು. (ಪ್ಲೇಟೋನ ಪೋಷಕರ ಗೃಹಸಂಬಂಧೀ ವ್ಯವಸ್ಥೆ, ಲೋಕನ ನಿರ್ಣಯಗಳ ಪ್ರಕ್ರಿಯೆ ಮತ್ತು ಹೆಗೆಲ್ಲನ ಕುಟುಂಬ ವ್ಯವಸ್ಥೆಗಳನ್ನು ಹೋಲಿಸಿ ನೋಡಿ.) ಅಮೆರಿಕದ ರಾಜಕೀಯ ತತ್ವಶಾಸ್ತ್ರಜ್ಞರು ಈ ಪ್ರಶ್ನೆಗಳನ್ನು

ನಿಭಾಯಿಸಿದ್ದಾರೆ. ಯುನೈಟೆಡ್ ಕಿಂಗ್‌ಡಂನಲ್ಲಿ ದ ಸ್ಕೆಪ್ಟಿಕಲ್ ಫೆಮಿನಿಸ್ಟ್‌ನಂತಹ ಕೃತಿಯು ರಚಿತಗೊಂಡಿದ್ದು, (ರಿಚರ್ಡ್ಸ್ 1980) ತತ್ವಶಾಸ್ತ್ರಜ್ಞರಿಗೆ ಸಾಮಾನ್ಯ ನಿಯಮಗಳನ್ನು ನಿರ್ದಿಷ್ಟ ಸಂದರ್ಭಗಳಲ್ಲಿ ಅನ್ವಯಿಸುವ ಪ್ರಮುಖ ಕಾರ್ಯಭಾರವಿದೆ ಎನ್ನುವ ವಾದವನ್ನಿದು ಬೆಂಬಲಿಸುತ್ತದೆ.ಒಬ್ಬ ವ್ಯಕ್ತಿಯು ಎಲ್ಲ ತರಹದ ಪ್ರಾಯೋಗಿಕ ಊಹೆಗಳನ್ನೂ ಮಾಡಬೇಕೆನ್ನುವುದು ಗೋಜಲಿನ ಕೆಲಸ. ಇದರಲ್ಲಿನ ಯಾವುದೇ ಒಂದು ತಪ್ಪು ಊಹೆಯು, ಆ ವಿಷಯವನ್ನೇ ಹಾಳುಗೆಡವಬಹುದು. ಯಾವುದೇ ವ್ಯಕ್ತಿಯು ತನ್ನ ಕೃತಿಯಲ್ಲಿನ ಪರಿಕಲ್ಪನೆಗಳು ತ್ವರಿತವಾಗಿ ಹಿಂದಿಕ್ಕಲ್ಪಟ್ಟಲ್ಲಿ; ಅಂತಹ ಪ್ರಯತ್ನಗಳು ನಮ್ಮನ್ನು ಪ್ರಭಾವಿಸಿದ ಪ್ರಜ್ಞಾಪ್ರವಾಹಗಳೆಂಬುದಾಗಿ ಭಾವಿಸತಕ್ಕದ್ದು. ಇವು ಮುಂದಿರಿಸಿದ ಪರಿಕಲ್ಪನೆಗಳ ಯಥಾರ್ಥತೆಯ ನಿಟ್ಟಿನಲ್ಲಿ; ಇದರಿಂದ ನೇರ ಹಾಗೂ ಪರೋಕ್ಷವಾಗಿ ಹೊರಹೊಮ್ಮಲ್ಪಟ್ಟ ವಿಚಾರಗಳ ಸಂಖ್ಯೆಗಳ ಆಧಾರದ ಹಿನ್ನೆಲೆಯಲ್ಲಿ ಇದರ ಮೌಲ್ಯವನ್ನು ಅಂದಾಜಿಸತಕ್ಕದ್ದು. ಈ ಹಿಂದಿನ ಪ್ರಸ್ತಾಪವನ್ನು ವಿಷಯಾಂತರವೆಂದಾಗಲಿ ಅಥವ ಎರಡನೆಯ ಅಧ್ಯಾಯದ ಶಿರೋಭಾಗದಲ್ಲಿರಿಸಬಹುದಾಗಿದ್ದ ವಿಷಯವೆಂದಾಗಲಿ ಪರಿಭಾವಿಸಬಾರದು. ಇದನ್ನು ಇಲ್ಲಿಯೇ ಪ್ರಸ್ತಾಪಿಸತಕ್ಕದ್ದು. ಏಕೆಂದರೆ, ಈ ಅಧ್ಯಾಯದ ವಸ್ತುವಾದ ಪ್ರಜಾಪ್ರಭುತ್ವದ ಸಾಮಾನ್ಯ ತತ್ವಗಳ ಹೇಳಿಕೆಗೆ ಅಲ್ಪತರ ಪ್ರಾಮುಖ್ಯತೆಯಿದೆಯೆಂಬುದು ಇದರ ಉಪಸಿದ್ಧಾಂತ. ಆದ್ದರಿಂದ ಈ ಪ್ರಬಂಧಕ್ಕೆ ಸಂಬಂಧಿಸಿದಂತೆ, ರಾಲ್ಸ್, ಡ್ವಾರ್ಕಿನ್ಸ್ ಆಕರ್‌ಮನ್ ಮುಂತಾದ ಪ್ರಜಾಪ್ರಭುತ್ವ ಸಿದ್ಧಾಂತದ ಪ್ರಮುಖ ಲೇಖಕರನ್ನು ವಿವರವಾಗಿ ಹೋಲಿಸುವ ಚಿಕ್ಕದೊಂದು ಪ್ರಯತ್ನವನ್ನು ನಡೆಸಲಾಗಿದೆ. ಆಗಾಗ ನಿರ್ದಿಷ್ಟ ಸೂಚನೆಗಳನ್ನು ನೀಡುವ ಮೂಲಕ,, ಇಲ್ಲಿ ಪ್ರಸ್ತಾಪಿಸಲ್ಪಟ್ಟ ಅಂಶಗಳನ್ನು; ಸದರಿ ಕ್ಷೇತ್ರದಲ್ಲಿನ ಈ ಲೇಖಕರ ಪರಿಣಾಮಕಾರಿಯಾದ ಕೃತಿಗಳೊಂದಿಗೆ ಸಂಪರ್ಕಿಸಲಾಗುತ್ತದೆ.

ನಾನೀಗ ಪ್ರಜಾಪ್ರಭುತ್ವದ ಮೂಲತತ್ವಗಳು ಮತ್ತು ಕಲ್ಪನೆಗಳನ್ನು ಪರಿಶೀಲಿಸುತ್ತೇನೆ. ಆರಂಭದಲ್ಲಿ, ಸಾಮಾನ್ಯ ವ್ಯಕ್ತಿಯೊಬ್ಬನನ್ನು, ನಿರ್ದಿಷ್ಟವಾಗಿ ಆಯ್ಕೆದಾರನೆಂಬುದಾಗಿ ಭಾವಿಸಲಾಗಿದೆ. (1) ಪ್ರಪಂಚದ ಎಲ್ಲೆಡೆ, ಎಲ್ಲಾ ಕಾಲದಲ್ಲೂ ವ್ಯಕ್ತಿಗಳು 'ಆಯ್ಕೆಯ' ಪ್ರಕ್ರಿಯೆಗಳಲ್ಲಿ ತೊಡಗುತ್ತಾರೆ: ಮಧ್ಯಾಹ್ನದ ಊಟಕ್ಕೇನು ಬೇಕು, ಸ್ನಾನ, ಕೂದಲನ್ನು ಗುಂಗುರು ಮಾಡಿಕೊಳ್ಳುವುದು,, ಯಾವಾಗ ತಮ್ಮ ಬೆಳೆಗಳಿಗೆ ನೀರುಣಿಸಬೇಕು ಇವೇ ಮುಂತಾದುವನ್ನು ಅವರು ನಿರ್ಧರಿಸುತ್ತಾರೆ. ಮತ್ತೊಬ್ಬರ ಆಯ್ಕೆಗೆ ಅಡ್ಡಿಬಂದಲ್ಲಿ, ಅದನ್ನು ಸಮರ್ಥಿಸಿಕೊಳ್ಳುವ ಜವಾಬ್ದಾರಿ ಅಡ್ಡಿಬರುವವರದ್ದೇ ಆಗಿರುತ್ತದೆಂಬುದು ಸಾಮಾನ್ಯ ಗ್ರಹಿಕೆ, ಅಡ್ಡಿಬರುವಿಕೆ ಸಮರ್ಥನೀಯವೇ ಆಗಿರಬಹುದಾದರೂ, (ಆಯ್ಕೆದಾರ ಮತಿಭ್ರಮಿತನಾಗಿರುವುದು, ಮಗುವು ತನ್ನ ಸುರಕ್ಷತೆಗೆ ಅಪಾಯವನ್ನು ತಂದುಕೊಳ್ಳುವುದು... ಇವೇ ಮುಂತಾದ ಸಂದರ್ಭಗಳಲ್ಲಿ) ಸಮರ್ಥನೆಯನ್ನು ತತ್ವಶಃ ಹಾಜರುಪಡಿಸತಕ್ಕದ್ದು. ಇದು, 'ಆಯ್ಕೆಗಳನ್ನು ಮಾಡುವ' ಪ್ರವೃತ್ತಿಯು ಸದ್ಯಕ್ಕೆ ಸಮಸ್ಯಾರಹಿತವೆಂದು ಹೇಳುವ ಸ್ವಾತಂತ್ರ್ಯ ತತ್ವದ ರಿಕ್ತ ಹೇಳಿಕೆ.

ಸಿದ್ಧಾಂತದ ಈ ರಿಕ್ತ ಹೇಳಿಕೆಯೂ ಸಹ ರಾಜಕೀಯ ಅಧಿಕಾರದ ಪ್ರಯೋಗವನ್ನು ಸಮರ್ಥಿಸಿಕೊಳ್ಳ ಬಯಸುವವನಿಗೆ ಅತ್ಯಂತ ಕಟ್ಟುನಿಟ್ಟಾದ ಕೋರಿಕೆಗಳನ್ನೊಡ್ಡುತ್ತದೆ. ರಾಜಕೀಯ ಅಧಿಕಾರವು ನನ್ನನ್ನು ನಮೂನೆಗಳನ್ನು ಭರ್ತಿಮಾಡುವಂತೆ, ರಸ್ತೆಯ ನಿರ್ದಿಷ್ಟ ಮಗ್ಗುಲಿನಲ್ಲಿಯೇ ವಾಹನ ಚಲಾಯಿಸುವಂತೆ, ವರಮಾನದ ಒಂದು ಭಾಗವನ್ನು ಪರಿತ್ಯಜಿಸುವಂತೆ, ಉದ್ಯೋಗವೊಂದರಲ್ಲಿ ತೊಡಗುವಂತೆ, ಚಿಂತನೆಗಳನ್ನು ಪ್ರಕಟಿಸದಂತೆ ಹಾಗೂ

ಜನರನ್ನು ಕೊಲ್ಲುವಂತೆ ಒತ್ತಾಯಿಸಬಹುದು. ಸಮಗ್ರ ರಾಜಕೀಯ ಅಧಿಕಾರದ ಪರಿಕಲ್ಪನೆಯನ್ನೇ ತಿರಸ್ಕರಿಸುವುದು, ಈ ಸ್ವಾತಂತ್ರ್ಯ ತತ್ವದೊಂದಿಗಿನ ಘರ್ಷಣೆಯನ್ನು ತಡೆಯುವ ಮಾರ್ಗ ಎಂದು ಯಾರಾದರೂ, ,ಎಂದಾದರೂ ಆಲೋಚಿಸಿದ್ದಲ್ಲಿ, ಈ ದೃಷ್ಟಿಕೋನವನ್ನು ನೋಝಿಕ್ (1974, ವಿಶೇಷವಾಗಿ ಭಾಗ 1) ತಳ್ಳಿಹಾಕುತ್ತಾರೆ. ನೋಝಿಕ್ ಬೇರೇನನ್ನೇ ಮನಗಾಣಿಸಿದ್ದಾಗ್ಯೂ, ರಾಜ್ಯಗಳ ಅಸ್ತಿತ್ವವಿಲ್ಲದಿದ್ದಲ್ಲಿ, ನಾವು ಅವುಗಳನ್ನು ಆವಿಷ್ಕರಿಸಬೇಕು ಅಥವ ಹಂತ ಹಂತವಾಗಿ ಅವುಗಳಿಗೆ ಮರಳಬೇಕೆಂಬುದನ್ನು ನಿಶ್ಚಿತವಾಗಿ ನಿರೂಪಿಸುತ್ತಾರೆ. ಅರಾಜಕತೆಯ ಪರ್ಯಾಯವನ್ನು ತಿರಸ್ಕರಿಸಿ, ಎಲ್ಲರ ಹಿತಾಸಕ್ತಿಗಾಗಿ ರಾಜಕೀಯ ಅಧಿಕಾರ ಹಾಗೂ ತತ್ಸಂಬಂಧಿತ ಸಾಧನಗಳಿರಬೇಕೆಂದು ಬಯಸಿದಲ್ಲಿ, ಅಂತಹ ಸರ್ಕಾರ ರಚನೆಗೆ ನೈತಿಕವಾಗಿ ಅಂಗೀಕಾರಾರ್ಹವಾದ ಯಾವುದಾದರೂ ಮಾರ್ಗಸೂಚಿಗಳನ್ನು ರೂಪಿಸಬಹುದೇ?

ಯುನೈಟೆಡ್ ಕಿಂಗ್‌ಡಂ ಅಥವ ಸಂಯುಕ್ತ ಸಂಸ್ಥಾನಗಳು ನೈತಿಕವಾಗಿ ಅಂಗೀಕಾರಾರ್ಹವಾದ ಇಂತಹ ಸರ್ಕಾರಗಳನ್ನು ಒಳಗೊಂಡಿವೆ ಎಂಬ ಅಂಶವನ್ನು ಆಲೋಚನಾರಹಿತವಾಗಿ ಸಾಧಿಸುವ ಪ್ರಲೋಭನೆಗೆ ಯಾರಾದರೂ ಒಳಗಾದಲ್ಲಿ; ಹೆಬರಮಸ್ ಅವರ ಪ್ರಕಾರ (1976), ಈ ಮುಂದುವರೆದ ಬಂಡವಾಳಶಾಹಿ ರಾಷ್ಟ್ರಗಳು ಕಾನೂನುಬದ್ಧ ಕ್ಷೋಭೆಯನ್ನು ಅನುಭವಿಸುತ್ತಿವೆ ಎನ್ನುವುದನ್ನು ಅದು ಪ್ರತಿಬಿಂಬಿಸಿದಂತಾಗುತ್ತದೆ. ಆಗ ಅವುಗಳನ್ನು ಸಮಸ್ಯಾರಹಿತವಾಗಿ ಸ್ವೀಕರಿಸಲಾಗುವುದಿಲ್ಲ. ಪ್ರಾಯಶಃ ಅವುಗಳ ತತ್ವ ಮತ್ತು ಆಚರಣೆಗಳನ್ನು ಕುರಿತಂತೆ ನಿರೀಕ್ಷಿತ ಸಮರ್ಥನೆಗಳನ್ನು ಒದಗಿಸಬಹುದಾದರೂ, ಅಂತಹ ಸಮರ್ಥನೆಗಳನ್ನು ತತ್ವಶಃ ಹಾಜರುಪಡಿಸತಕ್ಕದ್ದು. ಆ ಸಮರ್ಥನೆಗಳು ಸಮರ್ಪಕವೆನಿಸದಿದ್ದಲ್ಲಿ, ರಾಜಕೀಯ ಅಧಿಕಾರದ ಸ್ವೀಕಾರಾರ್ಹ ಸ್ವರೂಪದ ಬಗ್ಗೆ ಮತ್ತೊಮ್ಮೆ ಪ್ರಶ್ನೆಯು ಉದ್ಭವಿಸುತ್ತದೆ.

ನಾವು ಅಮೂಲಾಗ್ರವಾಗಿ ವಿಭಿನ್ನವೆನ್ನಬಹುದಾದ ಪ್ರಪಂಚದಲ್ಲಿದ್ದರೆ, ರಾಜಕೀಯ ಅಧಿಕಾರವು ಯಾವ ಸ್ವರೂಪ ಪಡೆಯುತ್ತಿತ್ತೆಂಬುದು ಹೆಚ್ಚು ಸ್ಪಷ್ಟವಾಗಿರುತ್ತಿತ್ತು. ಯಾವುದೇ ಸಮಾಜದಲ್ಲಿನ ಅಲ್ಪಸಂಖ್ಯಾತರು ತಕ್ಕಮಟ್ಟಿನ ವಿವೇಚನೆ ಹಾಗೂ ಉದಾರ ಮನೋಭಾವದವರಾಗಿದ್ದು, ಮನೋದಾರ್ಢ್ಯಕ್ಕೆ ಸಂಬಂಧಿಸಿದಂತೆ ಗುರುತರವಾದ ಯಾವುದೇ ನ್ಯೂನತೆಗಳಿಲ್ಲದೆ ಇತರೆ ಜನಸಾಮಾನ್ಯರಂತೆಯೇ ಜೀವನ ಸಾಗಿಸುತ್ತಿದ್ದಲ್ಲಿ; (2) ಇನ್ನುಳಿದ ಜನರು ಅಶಕ್ತರೂ, ವಿಚಾರಹೀನರೂ, ಗ್ರಹಿಕಾ ಸಾಮರ್ಥ್ಯದಲ್ಲಿ ದುರ್ಬಲರೂ, ಇಚ್ಚಾಶಕ್ತಿಯ ಕೊರತೆಯುಳ್ಳವರೂ, ತೀವ್ರ ಸ್ವರೂಪದ ಮನೋವಿಕೃತ ಪ್ರವೃತ್ತಿಯವರೂ ಆಗಿದ್ದ ಸಂದರ್ಭಗಳಲ್ಲಿ, ಅಲ್ಲಿನ ರಾಜಕೀಯ ವ್ಯವಸ್ಥೆಯು ಪಿತೃಪ್ರಧಾನ ಸ್ವರೂಪದ್ದಾಗಿರಬೇಕೆಂಬುದಕ್ಕೆ ಆಧಾರಗಳಿವೆ. ದುರ್ಬಲಮನಸ್ಕ ಬಹುಸಂಖ್ಯಾತರ ಬಗ್ಗೆ ಕಾಳಜಿವಹಿಸತಕ್ಕ ಅಲ್ಪಸಂಖ್ಯಾತರ ನಿಷ್ಪಕ್ಷಪಾತ, ಜಾಗೃತ ಹಾಗೂ ಸಾಕಷ್ಟು ದಯಾಪರವಾದ ನಿರಂಕುಶ ರಾಜಕೀಯ ವ್ಯವಸ್ಥೆಯು ಅತ್ಯಂತ ಸಮರ್ಥನೀಯವೆನಿಸುತ್ತದೆ. ಆದರೆ, ನಮ್ಮ ಪ್ರಪಂಚವು ಆ ರೀತಿಯಲ್ಲಿಲ್ಲ. ನಾವೆಲ್ಲರೂ ಸಾಮಾನ್ಯ ಜನರು. ನಮ್ಮ ಸುತ್ತಮುತ್ತ; ನಮ್ಮ ಮೇಲೆ ಅಧಿಕಾರ ಚಲಾಯಿಸುವ ಹಕ್ಕು ಸಾಧಿಸಬಹುದಾದಷ್ಟು ಮನೋದಾರ್ಢ್ಯ, ವೈಚಾರಿಕತೆ ಮತ್ತು ನಿರಂತರ ಬುದ್ಧಿಮತ್ತೆಯಿರುವ ಅತಿಮಾನುಷರಾರೂ ಇಲ್ಲ. ನಾನು 'ಹಕ್ಕು ಸಾಧಿಸಬಹುದಾದಷ್ಟು' ಎಂದು ಹೇಳುತ್ತಿದ್ದೇನೆ. ಏಕೆಂದರೆ, ಇಂತಹ ಅತಿಮಾನುಷ ವ್ಯಕ್ತಿಗಳಿದ್ದಲ್ಲಿ, ತಮ್ಮ ಉತ್ಕೃಷ್ಟಮಟ್ಟದ ಜಾಣ್ಮೆ, ವೈಚಾರಿಕತೆ ಇತ್ಯಾದಿಗಳಿಂದಾಗಿ; ಸಾಮಾನ್ಯರ ಯೋಜನೆ, ಧ್ಯೇಯ ಹಾಗೂ ಉದ್ದೇಶಗಳಲ್ಲಿ ಅವರು ಮಧ್ಯಪ್ರವೇಶಿಸುವುದು

ಸಮರ್ಥನೀಯ ಎನ್ನುವ ಸಂಗತಿ ಇನ್ನೂ ನಿರ್ಧಾರಿತವಾಗಿಲ್ಲ. ಅನ್ಯ ಗ್ರಹಗಳಿಂದ ಉನ್ನತ ಮಟ್ಟದ ಬುದ್ಧಿಸಾಮರ್ಥ್ಯದ ಆಗಮನಾಗಿ, ಇದ್ದಕ್ಕಿದ್ದಂತೆ ನಮ್ಮ ರಾಜಕೀಯ ವ್ಯವಸ್ಥೆ, ರಾಷ್ಟ್ರೀಯ ಸರ್ಕಾರಗಳು, ವಿಶ್ವಸಂಸ್ಥೆ ಮುಂತಾದುವನ್ನು ತಮ್ಮ ಸುಪರ್ದಿಗೆ ಪಡೆದು, ಅವುಗಳನ್ನು ಪುನರ್ರಚಿಸಿ, ನಮ್ಮ ಪರವಾಗಿ ಅವನ್ನು ನಿರ್ವಹಿಸತೊಡಗಿದಲ್ಲಿ, ಇದನ್ನು ಸಮರ್ಥಿಸಬಹುದೆ? ನಮ್ಮ ಸ್ವಂತ ಬದುಕನ್ನು ನಿರ್ವಹಿಸಲು ನಾವು ಅಸಮರ್ಥರೆಂಬುದನ್ನು ನಮಗೆ ತೋರ್ಪಡಿಸುವ ಮೂಲಕ ಇಂತಹ ಮಧ್ಯಪ್ರವೇಶವನ್ನು ಸಮರ್ಥಿಸಬೇಕಲ್ಲವೆ? (ಉದಾಹರಣೆಗೆ, ಗ್ರಹಿಕೆಯಲ್ಲಿನ ದೌರ್ಬಲ್ಯ ಇತ್ಯಾದಿ.) ಅತಿಮಾನುಷರು ಇದನ್ನು ಉತ್ತಮವಾಗಿ ನಿರ್ವಹಿಸುತ್ತಾರೆಂದು ಸಲೀಸಾಗಿ ವಾದಮಾಡಿದಂತಾಗುವುದಿಲ್ಲವೇ? 'ಉತ್ತಮ ನಿರ್ವಹಣೆ' ಎಂಬುದರ ಅರ್ಥವೇನಿರಬಹುದು? 'ಈಗಾಗಲೇ ನಮ್ಮ ದೃಷ್ಟಿಯಲ್ಲಿರುವ ಗುರಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಾಧಿಸಲು ನಮಗೆ ನೀಡುವ ಸಹಾಯ' ಎಂಬುದೇ ಇದರ ಅರ್ಥವೆಂದಾದಲ್ಲಿ, ಇದು ಸಲಹೆಗಳ ಪೂರೈಕೆಯೇ ಹೊರತು, 'ನಮಗಾಗಿ ವಿಷಯಗಳ ನಿರ್ವಹಣೆ' ಎಂದಾಗುವುದಿಲ್ಲ. 'ಉತ್ತಮ ಗುರಿಗಳತ್ತ ನಮ್ಮನ್ನು ನಿರ್ದೇಶಿಸುವುದು' ಎಂಬುದೇ ಇದರ ಅರ್ಥವಾಗಿದ್ದಲ್ಲಿ, ಅವು ಉತ್ತಮವಾದವೆಂದು ನಾವು ಗುರುತಿಸದಿದ್ದರೆ, ಅವು ನಮಗೆ ಉತ್ತಮವಾದವೆಂದು ಯಾರು ಹೇಳಬೇಕು?

ಈ ರಂಜಕ ಉದಾಹರಣೆಯು; ಅತಿಮಾನುಷ ಜಾಣ್ಮೆಗಳಿಲ್ಲದ ಸಾಮಾನ್ಯ ಜಗತ್ತಿಗೆ ನಮ್ಮನ್ನು ವಾಪಸ್ಸು ಕರೆತರುತ್ತದೆ. ಅತಿಮಾನುಷರು ನಮ್ಮ ರಾಜಕೀಯ ವ್ಯವಹಾರಗಳನ್ನು ನಡೆಸುವ ಹಕ್ಕು ಸಾಧಿಸಬಹುದಾದರೂ, ಅಂತಹವರು ಸಿಗುವುದಿಲ್ಲ. ಜೀವನದ ಗುರಿಗಳನ್ನು ಕುರಿತ ತಮ್ಮ ಉನ್ನತಮಟ್ಟದ ಒಳನೋಟಗಳ ಕಾರಣದಿಂದಾಗಿ; ಯಾರೊಬ್ಬರಿಗೂ ನಮ್ಮ ಮೇಲೆ ವೈಯಕ್ತಿಕವಾಗಿಯಾಗಲೀ, ಸಾಮೂಹಿಕವಾಗಿಯಾಗಲೀ ರಾಜಕೀಯ ಅಧಿಕಾರದ ಹಕ್ಕನ್ನು ಚಲಾಯಿಸಲಾಗುವುದಿಲ್ಲ. ಆದ್ದರಿಂದ ಪ್ರತಿ ವ್ಯಕ್ತಿಗೂ ಅಧಿಕಾರದ ಚಲಾವಣೆ ಮತ್ತು ನಿಯಂತ್ರಣಗಳಲ್ಲಿ ಸಮಪಾಲು ಪಡೆಯುವ ಅವಕಾಶವನ್ನು ಒದಗಿಸುವುದು; ರಾಜಕೀಯಅಧಿಕಾರವನ್ನು ಹಂಚುವ ಏಕೈಕ ನೈತಿಕ ಹಾಗೂ ಅಂಗೀಕಾರಾರ್ಹ ಮಾರ್ಗವಾಗಿದೆ. ಇದು ಪ್ರಜಾಪ್ರಭುತ್ವದ ಮೂಲಭೂತ ವಿಷಯವೂ ಹೌದು. ಪ್ರಜಾಪ್ರಭುತ್ವವು, ಸ್ವಾತಂತ್ರ್ಯ ಮತ್ತು ನ್ಯಾಯವೆಂಬ ಅವಳಿ ತತ್ವಗಳ ಮೇಲೆ ನಿಂತಿದೆಯೆಂಬ ಮೂಲಭೂತ ಸೂತ್ರೀಕರಣದಲ್ಲಿಯೂ ಇದನ್ನೇ ಸಂಸ್ಥಾಪಿತಗೊಳಿಸಲಾಗಿದೆ. ಉತ್ತಮ ಬದುಕಿನ ಯಾವುದೇ ಪರಿಕಲ್ಪನೆಯನ್ನು ಸ್ವೇಚ್ಛಾನುಸಾರ ಯಾರೊಬ್ಬರ ಮೇಲೂ ಹೇರದಂತೆ ಮತ್ತು ಯಾರೊಬ್ಬರೂ ಮತ್ತೊಬ್ಬರ ಸ್ವೇಚ್ಛಾಚಾರದ ಮಧ್ಯಪ್ರವೇಶಕ್ಕೆ ಈಡಾಗದಂತೆ ಪ್ರತಿಯೊಬ್ಬ ವ್ಯಕ್ತಿಗೂ ಅಧಿಕಾರದ ನಿಯಂತ್ರಣ ಮತ್ತು ಚಲಾವಣೆಗೆ ಅವಕಾಶವಿರತಕ್ಕದ್ದು. ಪ್ರಜಾಪ್ರಭುತ್ವದ ಸಂಗತಿಯನ್ನು ಹೀಗೆ ಸೂತ್ರೀಕರಿಸುವ ಪ್ರಕ್ರಿಯೆಯಲ್ಲಿ: ಕೆಲವು ಪ್ರಶಂಸನೀಯರ (ಬಹುಶಃ ಸಹಕಾರಿ ಅಥವ ಭ್ರಾತೃತ್ವದ ಭಾವವನ್ನುಳ್ಳ) ಪ್ರಗತಿಗೆಂದು ನೀಡಲಾದ ಭವ್ಯ ಪ್ರೋತ್ಸಾಹವೇ ಪ್ರಜಾಪ್ರಭುತ್ವವೆಂಬ ನಿಲುವು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಇದಕ್ಕೆ ವ್ಯತಿರಿಕ್ತವೆಂಬಂತೆ; ಯಾವುದೇ ವ್ಯಕ್ತಿ, ಅಲ್ಪಸಂಖ್ಯಾತ ಅಥವ ಬಹುಸಂಖ್ಯಾತನ ಅಧಿಕಾರ ದುರುಪಯೋಗದಿಂದ ವ್ಯಕ್ತಿಯನ್ನು ರಕ್ಷಿಸುವಂತಹ ವ್ಯವಸ್ಥೆಯನ್ನುಳ್ಳ ಸರ್ಕಾರವು ನೈತಿಕವಾಗಿಯೂ ಅಂಗೀಕಾರಾರ್ಹವಾದುದು. ಪ್ರಜಾಸತ್ತಾತ್ಮಕ ಸರ್ಕಾರಗಳು ತಮ್ಮ ನಾಗರಿಕರ ಯೋಗಕ್ಷೇಮವನ್ನು ನಿಷ್ಪಕ್ಷಪಾತವಾಗಿ ಪ್ರೋತ್ಸಾಹಿಸುವ ಕಳಕಳಿಯನ್ನು ತೋರುತ್ತವೆ. ಒಬ್ಬ ಉದಾರಿ ಸರ್ವಾಧಿಕಾರಿಯೂ ಇದನ್ನು ಮಾಡಬಹುದು. ವ್ಯಕ್ತಿಯು, ಅಧಿಕಾರದ ಚಲಾವಣೆ ಅಥವ ನಿಯಂತ್ರಣದಲ್ಲಿ ಸಮಪಾಲು ಪಡೆಯಬೇಕೆಂಬ ಒತ್ತಾಯವೇ

ಪ್ರಜಾಪ್ರಭುತ್ವದ ವಿಶಿಷ್ಟ ಗುಣವಾಗಿದೆ. ಯಾವುದೇ ವ್ಯಕ್ತಿ ಅಥವಾ ಸಮೂಹಕ್ಕೆ ನಿರ್ದಿಷ್ಟ ಜೀವನಶೈಲಿಯ ತಮ್ಮ ಆದ್ಯತೆಗಳನ್ನು ಅನ್ಯರ ಮೇಲೆ ಹೇರುವ ಅಧಿಕಾರವಿರಬಾರದೆಂಬುದನ್ನು ಮಾನ್ಯಮಾಡತಕ್ಕದ್ದು. ಈ ಪರಿಕಲ್ಪನೆಯು; ಮೂರು ಮೂಲಭೂತ ಕಲ್ಪನೆಗಳನ್ನು ಆಧರಿಸಿದೆಯೆಂಬುದನ್ನು ಈ ಹಂತದಲ್ಲಿ ವಿಶದೀಕರಿಸಬೇಕಿದೆ.

## ಮೂರು ಮೂಲಭೂತ ಕಲ್ಪನೆಗಳು

ವ್ಯಕ್ತಿಗಳ ಉತ್ತಮ ಬದುಕನ್ನು ವಿಶದವಾಗಿ ನಿರೂಪಿಸಬಲ್ಲ ನೈತಿಕತಜ್ಞರಿಲ್ಲವೆನ್ನುವುದು ಮೊಟ್ಟಮೊದಲನೆಯ ಮತ್ತು ಪ್ರಮುಖವಾದ ಮೂಲಭೂತ ಕಲ್ಪನೆ. ನೈತಿಕ ಸಿದ್ಧಾಂತಗಳ ಸುಧೀರ್ಘ ಚರಿತ್ರೆಯಲ್ಲಿ; ನಿರಂತರ ಪ್ರಯತ್ನಗಳ ಹೊರತಾಗಿಯೂ, ವಿಶಾಲ ಮನೋಭಾವದ ಜೀವನಶೈಲಿಗಳಿಗೆ ಇತರೆ ಜೀವನಶೈಲಿಗಳಿಗಿಂತಲೂ ಹೆಚ್ಚಿನ ಆದ್ಯತೆ ನೀಡಬೇಕೆಂದು ನಿರ್ಣಾಯಕವಾಗಿ ತೋರ್ಪಡಿಸಲು ಯಾರೊಬ್ಬರಿಗೂ ಸಾಧ್ಯವಾಗಿಲ್ಲ. ಉದಾಹರಣೆಗೆ, ಚಿಂತನಾಶೀಲ ಬದುಕಿಗಿಂತಲೂ ಕಾರ್ಯಶೀಲ ಬದುಕಿಗೆ ನೀಡುವ ಆದ್ಯತೆ ಮತ್ತು ಇದಕ್ಕೆ ಪ್ರತಿಯಾಗಿ ಕಾರ್ಯಶೀಲ ಬದುಕಿಗಿಂತಲೂ ಚಿಂತನಾಶೀಲ ಬದುಕಿನ ಆದ್ಯತೆ, ಸಭ್ಯ ಸವ್ಯಸಾಚಿಗಿಂತಲೂ ಉತ್ಸಾಹಶೀಲ ವಿಶೇಷಜ್ಞನಿಗೆ ನೀಡುವ ಆದ್ಯತೆ ಮತ್ತು ಉತ್ಸಾಹಶೀಲ ವಿಶೇಷಜ್ಞನಿಗಿಂತಲೂ ಸಭ್ಯ ಸವ್ಯಸಾಚಿಗೆ ನೀಡಲಾದ ಆದ್ಯತೆ ಇತ್ಯಾದಿ. (3) ಹೀಗಾಗಿ, ಬದುಕಿನ ಸಾಧ್ಯತೆಗಳನ್ನು ಪರ್ಯಾಲೋಚಿಸುವ ಅವಕಾಶ ದೊರೆತ ಆಕೆ ಅಥವ ಆತನು ಮಾತ್ರವೇ ಉತ್ತಮ ಬದುಕನ್ನು ಕುರಿತ ಏಕೈಕ ಪರಿಣತರೆನಿಸುತ್ತಾರೆ. ಯಾವುದೇ ವ್ಯಕ್ತಿಯು ಇಂತಹ ಸಾಧ್ಯತೆಗಳನ್ನು ನಿಗದಿಪಡಿಸಲು ಶಕ್ತನಾದಲ್ಲಿ; ಪರಿಗಣಿಸಲ್ಪಟ್ಟ ಈ ಪರ್ಯಾಲೋಚಿತ ಆಯ್ಕೆಗಳನ್ನು ಯಾವುದೇ ನೈತಿಕ ತಜ್ಞನೂ ತಿದ್ದುಪಡಿಗೊಳಿಸಲಾಗದು. ಉತ್ತಮ ಬದುಕಿನ ಯಾವುದೇ ಒಂದು ಪರಿಕಲ್ಪನೆಯು ಬೇರೆಲ್ಲವುಗಳಿಗಿಂತಲೂ ಆಂತರಂಗಿಕವಾಗಿ ಉನ್ನತಮಟ್ಟದ್ದೆಂದು ದೃಢೀಕರಿಸುವ ನಿಯಮಾವಳಿಗಳನ್ನು ಪ್ರಜಾಸತ್ತಾತ್ಮಕ ಸರ್ಕಾರವು ಅನುಸರಿಸಲಾಗದು. ಇದು, ಡ್ವಾರ್ಕಿನ್ (1978ಬಿ) ಮತ್ತು ಆಕರ್ಮನ್ (1980) ಅವರಂತಹ ಅತ್ಯಂತ ಉದಾರವಾದಿ ಪ್ರಜಾಸತ್ತಾತ್ಮಕ ಸಿದ್ಧಾಂತಿಗಳ ಪರಿಕಲ್ಪನೆಯೂ ಹೌದು. ಡ್ವಾರ್ಕಿನ್ ಈ ಪರಿಕಲ್ಪನೆಯನ್ನು ಪ್ರಜಾಸತ್ತಾತ್ಮಕ ತತ್ವಗಳು ಮತ್ತು ಮೂಲಭೂತ ಕಲ್ಪನೆಗಳ ಉದಾರ ನೆಲೆಯ ಒಂದು ಘಟಕಾಂಶವಾಗಿ ಅವಲೋಕಿಸಿದ್ದಾರೆ. ಮಾರ್ಕ್ಸ್ ಮತ್ತು ಸಿ. ಬಿ. ಮೆಕ್‌ಫರ್ಸನ್ (1977) ಅವರಂತಹ ಸಮಕಾಲೀನ ಮಾರ್ಕ್ಸವಾದಿಗಳ ಇಂತಹುದೇ ಪರಿಕಲ್ಪನೆಯೊಂದಿಗೆ ಇದು ನಿಕಟ ಸಾದೃಶ್ಯವನ್ನು ಹೊಂದಿದೆ. ಭವಿಷ್ಯದ ಸಮತಾವಾದಿ ಸಮಾಜದಲ್ಲಿನ ವ್ಯಕ್ತಿಗಳ ಉತ್ತಮ ಬದುಕಿನ ಸ್ವರೂಪವನ್ನು ನಿರ್ದಿಷ್ಟವಾಗಿ ತಿಳಿಸಲು ಅವರು ಸಿದ್ಧರಾಗಿಲ್ಲ, ಏಕೆಂದರೆ, ಭವಿಷ್ಯದ ವ್ಯಕ್ತಿಗಳೇ ತಮ್ಮ ಸ್ವಭಾವಗಳಿಗೆ ಅನುಗುಣವಾಗಿ ತಮ್ಮ ಅವಶ್ಯಕತೆಯನ್ನು ಸೂಕ್ತವಾಗಿ ಪೂರೈಸಿಕೊಳ್ಳತಕ್ಕದ್ದು ಎಂಬುದಾಗಿ ಅವರು ಭಾವಿಸುತ್ತಾರೆ. ಮಾನವೀಯ ಆಸಕ್ತಿ ಮತ್ತು ಅಗತ್ಯಗಳು ಚಾರಿತ್ರಿಕವಾಗಿ ವಿಕಸಿತಗೊಳ್ಳುವುದರಿಂದ,, ಬದಲಾದ ಸಾಮಾಜಿಕ ಸಂದರ್ಭಗಳಲ್ಲಿನ ವ್ಯಕ್ತಿಗಳ ಆಯ್ಕೆಗಳನ್ನು ಕುರಿತಂತೆ ಆಜ್ಞೇಯತಾವಾದಿಯಾಗಿ ಇರಲಷ್ಟೇ ಸಾಧ್ಯ, ಮಾರ್ಕ್ಸ್ ಮತ್ತು ಉದಾರವಾದಿಗಳ ಈ ಸೈದ್ಧಾಂತಿಕ ಸಾದೃಶ್ಯವು ಮಹತ್ವದ ವಿಷಯವಾಗಿದೆ. ಮಾನವನ ಒಳಿತನ್ನು ಕುರಿತ ಅವರ ಆಜ್ಞೇಯತಾವಾದಿ ದೃಷ್ಟಿಕೋನಗಳು; ಪ್ರತಿಯೊಂದು ಸಿದ್ಧಾಂತಗಳ ಆಚರಣೆಗಳನ್ನು ವಾಸ್ತವೀಕರಿಸಿದಾಗ, ಮಾರ್ಕ್ಸ ಮತ್ತು ಉದಾರವಾದಿ ರಾಜಕೀಯ ವ್ಯವಸ್ಥೆಗಳಲ್ಲಿನ ಹೊಂದಾಣಿಕೆಯ ಕೆಲವು ನೈಜ ಸಾಧ್ಯತೆಯನ್ನು ಸೂಚಿಸುತ್ತವೆ.

ತಜ್ಞರಿಂದ ವ್ಯಕ್ತಿಗಳ ಉತ್ತಮ  ಬದುಕಿನ ನಿಷ್ಕರ್ಷೆಯನ್ನು ಕುರಿತಂತೆ ಮಹತ್ತರ ಸಂಶೋಧನೆಯನ್ನು ಕೈಗೊಳ್ಳುವವರೆಗೆ ( ಈ ಯೋಜನೆಯ ಕಾರ್ಯಸಾಧ್ಯತೆಯ ಬಗ್ಗೆ ನನಗೆ ಖಾತರಿಯಿಲ್ಲ.) ಸರ್ಕಾರ ಮತ್ತು ಇತರೆ ಸಾಮಾಜಿಕ ಸಂಸ್ಥೆಗಳು ನೇರವಾಗಿ ಅಥವ ಪರೋಕ್ಷವಾಗಿ ಉತ್ತಮ ಬದುಕಿನ ಒಂದು ಪರಿಕಲ್ಪನೆಗೆ ಮತ್ತೊಂದಕ್ಕಿಂತಲೂ ಹೆಚ್ಚಿನ ಒಲವನ್ನು ತೋರಿಸಬಾರದೆಂಬುದು  ನಿರ್ವಿವಾದವಾಗಿಯೇ ಉಳಿಯುತ್ತದೆ.

ಎರಡನೆಯದಾಗಿ, ಉತ್ತಮ ಬದುಕನ್ನು ಕುರಿತ ಈ ಆಜ್ಞೇಯತಾವಾದವು; ಸರ್ಕಾರವು ಈ ನಿಲುವನ್ನು ನಿಶ್ಚಿತವಾಗಿಯೂ ಅನುಸರಿಸುವ ನಿಟ್ಟಿನ ತನ್ನ ಕಾರ್ಯನೀತಿಯಲ್ಲಿ ಅತ್ಯಗತ್ಯವಾಗಿ ಅಳವಡಿಸಿಕೊಳ್ಳತಕ್ಕ ಮುಂದಿನ ಅನೇಕ ಮೂಲಭೂತ ಕಲ್ಪನೆಗಳಿಗೆ ದೃಢವಾದ ಮಾರ್ಗಸೂಚಿಗಳನ್ನು ನೀಡುತ್ತದೆ. ಈ ನಿರ್ದಿಷ್ಟ ಒಳಿತುಗಳ ಬಗೆಗೆ ನಾಗರಿಕರಿಗೆ ಭರವಸೆ ನೀಡತಕ್ಕ ಸರ್ಕಾರದ ಈ ಕಲ್ಪನೆಗಳು ಪ್ರಜಾಸತ್ತಾತ್ಮಕ ಸಿದ್ಧಾಂತಿಗಳ ನಡುವೆ ಸರ್ವೇಸಾಮಾನ್ಯ. ಇಂತಹ ಒಳಿತುಗಳ ಪಟ್ಟಿಯನ್ನು ಕುರಿತ ಸಹಮತಿಯು ಗಮನಾರ್ಹವಾದುದು. ಕೆಲವು ಒಳಿತುಗಳು ಹಾಗೂ ಹಕ್ಕುಗಳು, ಉತ್ತಮ ಬದುಕನ್ನು ಕುರಿತಾದ ವ್ಯಾಪಕ ಸಂಖ್ಯೆಯ ವಿವಿಧ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವ ಅತ್ಯವಶ್ಯಕ ಸಾಧನಗಳೆಂಬುದು ಇಲ್ಲಿನ ಮೂಲಭೂತ ವಿಚಾರವಾಗಿದೆ.  ಸಾಂಪ್ರದಾಯಿಕ ನಾಗರಿಕ ಹಕ್ಕುಗಳಾದ: ಆಲೋಚನೆ ಮತ್ತು ಆತ್ಮಸಾಕ್ಷಿಯ ಸ್ವಾತಂತ್ರ್ಯ, ಕಾನೂನುಬದ್ಧ ಆಡಳಿತ ಅಧಿಕಾರ ಚಲಾವಣೆಯಲ್ಲಿ ಪಾಲ್ಗೊಳ್ಳುವ ಹಕ್ಕು ಅಥವ ಅಧಿಕಾರ ನಿಯಂತ್ರಣ, ಸದವಕಾಶ ಮತ್ತು ಸಂಪತ್ತು ನನ್ನ ಆಲೋಚನೆಯಲ್ಲಿನ  ಒಳಿತಿನ ವಿಧಗಳು. ರಾಲನ 'ಪ್ರಾಥಮಿಕ ಒಳಿತುಗಳು' ಎಂಬ ಪಟ್ಟಿಗೆ ನಿಕಟವಾಗಿರುವ ಈ ರಿಕ್ತ ಮತ್ತು ಸಂಕ್ಷಿಪ್ತ ಪಟ್ಟಿ ವಿವಾದಾಸ್ಪದವಾಗಲಾರದು (ರಾಲ್ಸ್, 1972, ಭಾಗ 15). ಜನರಿಗೆ ಈ ಒಳಿತುಗಳ ಭರವಸೆ ನೀಡುವ ಈ ನಿಯಮಾವಳಿಗಳನ್ನು ಮನವರಿಕೆಮಾಡುವ ಮಾರ್ಗಗಳೆಂಬುದಾಗಿ  ಅಧ್ಯಾಯ ಎರಡರಲ್ಲಿ ಸೂಚಿಸಲ್ಪಡುವ ಸಂಸ್ಥೆ ಹಾಗೂ ಆಚರಣೆಗಳ  ಪ್ರಕಾರಗಳಿಗೆ ಈ ಸಾಧ್ಯತೆಯಿದೆ. ಈ ಪ್ರಬಂಧಕ್ಕೆ ಪ್ರಸ್ತುತವಾದ ಒಂದು ಸಂಗತಿಯನ್ನು ಉಲ್ಲೇಖಿಸುವುದಾದರೆ; ರಾಲ್ಸ್ ಅವರು ತನ್ನ ಪ್ರಾಥಮಿಕ ಒಳಿತುಗಳ ಪಟ್ಟಿಯಲ್ಲಿ 'ಸದವಕಾಶಗಳು ಮತ್ತು ಅಧಿಕಾರವನ್ನು' ಸೇರಿಸಿದ್ದಾರಾದರೂ, ಜನರಿಗೆ 'ಸದವಕಾಶಗಳನ್ನು' ಖಾತರಿಪಡಿಸಬಹುದಾದ ಸಾಂಸ್ಥಿಕ ವ್ಯವಸ್ಥೆಯನ್ನು ಅನ್ವೇಷಿಸುವುದಿಲ್ಲ. ಶಿಕ್ಷಣವೇ ಇಂತಹ ವ್ಯವಸ್ಥೆಯ ಮೂಲಭೂತ ಅಂಶವೆಂದು ನನಗೆ ತೋರುತ್ತದೆ. ಆದರೆ ರಾಜಕೀಯ ಸಿದ್ಧಾಂತಗಳ ಪರಿಣಾಮವನ್ನು ಶಿಕ್ಷಣವನ್ನು ಕುರಿತ ಸಿದ್ಧಾಂತಗಳನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸದಸಮಕಾಲೀನ ರಾಜಕೀಯ ವಿದ್ವಾಂಸರು ಕೇವಲ ರಾಲ್ಸ್ ಒಬ್ಬರೇ ಅಲ್ಲ.

ಈ ಹಂತದಲ್ಲಿ ಉದಾರವಾದವು ದುರ್ಬಲವಾಗಿದ್ದು, ಅದಕ್ಕೆ  ಶಿಕ್ಷಣ ಸಿದ್ದಾಂತ ಮತ್ತು ಸಾಂಸ್ಕೃತಿಕ ಬೆಂಬಲದ ಸಿದ್ಧಾಂತದ ಅಗತ್ಯವಿದೆ  ಎಂದು ಡ್ವಾರ್ಕಿನ್ (1978 ಎ) ತಿಳಿಸುತ್ತಾರೆ. 'ರಾಜಕೀಯ ಸಿದ್ಧಾಂತವು ಎತ್ತ ತೆರಳಬೇಕು' ಎಂಬ ಪ್ರಶ್ನೆಗೆ ಇದು ಭಾಗಶಃ ಉತ್ತರವೆಂಬುದಾಗಿ ನಾನು ಭಾವಿಸುತ್ತೇನೆ.

ನಾಗರಿಕರಿಗೆ ಈ ಪ್ರಾಥಮಿಕ ಒಳಿತುಗಳನ್ನು ಖಾತರಿಪಡಿಸುವ ವ್ಯವಸ್ಥೆಗೆ ಅವಶ್ಯವಿರುವ ಸಲಹೆಗಳನ್ನು ಎರಡನೆಯ ಅಧ್ಯಾಯದಲ್ಲಿ ನೀಡಲಾಗಿದೆ. ಇದು, ಈ ಪ್ರಬಂಧದ ವಿಷಯಕ್ಕೆ ಪ್ರಸ್ತುತವೂ ಹೌದು. ಉದಾಹರಣೆಗೆ;ಸದವಕಾಶಗಳು,

ಆಲೋಚನೆ ಮತ್ತು ಆತ್ಮಸಾಕ್ಷಿಯ ಸ್ವಾತಂತ್ರ್ಯ, ಅಧಿಕಾರ ಚಲಾವಣೆಯಲ್ಲಿ ಪಾಲ್ಗೊಳ್ಳುವಿಕೆ ಅಥವ ರಾಜಕೀಯ ಅಧಿಕಾರದ ನಿಯಂತ್ರಣ ಇತ್ಯಾದಿ.

ಮೂರನೆಯದಾಗಿ, ಚರ್ಚಿತ ಸಮುದಾಯದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳ ಸ್ವಭಾವವನ್ನು ಕುರಿತ ಕಲ್ಪನೆಗಳ ಬಗ್ಗೆ ಗಮನಹರಿಸಲಾಗಿದ್ದು, ಸದರಿ ಕಲ್ಪನೆಗಳನ್ನು ಎರಡು ಗುಂಪುಗಳಾಗಿ ವಿಭಾಗಿಸಲಾಗಿದೆ. ಮೊದಲನೆಯ ವಿಭಾಗವು, ಎಲ್ಲ ಸಾಮಾನ್ಯ ಜನರಲ್ಲೂ ಸ್ವಭಾವದತ್ತವಾಗಿದೆಯೆಂದು ಭಾವಿಸಲಾದ ಸಾಮರ್ಥ್ಯ ಮತ್ತು ಕ್ಷಮತೆಗಳನ್ನೊಳಗೊಂಡಿದೆ. ಇದನ್ನು ಹೆಚ್.ಎಲ್.ಎ. ಹರ್ಟ್ ಅವರು ನಮ್ಮ ಅವಗಾಹನೆಗೆ ತಂದಿರುತ್ತಾರೆ (ಹರ್ಟ್, 1961, ಪು. 189–95). ಉದಾಹರಣೆಗೆ, ನಮ್ಮ ನಡವಳಿಕೆಗಳನ್ನು ನಿಯಮಬದ್ಧಗೊಳಿಸುವ ಸಾಧ್ಯತೆಯಿರುವ ಸೀಮಿತ ಗ್ರಹಿಕೆ ಮತ್ತು ಮನಶ್ಶಕ್ತಿಗಳ ಬಗ್ಗೆ ನಾನು ಆಲೋಚಿಸುತ್ತಿದ್ದೇನೆ. ನಾವು ಹಿಮ್ಮೆಟ್ಟಿಸಲಾಗದ ದೆವ್ವಗಳೂ ಅಲ್ಲ. ದೇವತೆಗಳೂ ಅಲ್ಲ. ಹೀಗಾಗಿ, ನಮ್ಮ ಪರಹಿತಾಸಕ್ತಿಯ ಸಾಮರ್ಥ್ಯವೂ ಸಹ ಇದೇ ಗುಂಪಿಗೆ ಸೇರುತ್ತದೆ. ಯಾವುದೇ ಸರ್ಕಾರದ ಸಾಧ್ಯತೆ ಹಾಗೂ ಅಗತ್ಯಗಳು ಈ ಗುಣವಿಶೇಷಣಗಳನ್ನು ಅವಲಂಬಿಸಿವೆ.

ಕಲ್ಪನೆಗಳ ಎರಡನೆಯ ಗುಂಪು ಪ್ರಜಾಸತ್ತಾತ್ಮಕ ನಾಗರಿಕರ ಗುಣವಿಶೇಷಣಗಳಿಗೆ ನಿರ್ದಿಷ್ಟವಾಗಿ ಸಂಬಂಧಿಸಿದೆ. ಪ್ರಜಾಸತ್ತಾತ್ಮಕ ಸರ್ಕಾರದ ಮುಂದಾಲೋಚಿತ 'ಪ್ರಜಾಸತ್ತಾತ್ಮಕ ಲಕ್ಷಣಗಳನ್ನು' ಕುರಿತ ಬರಹಗಳು ಧಾರಳವಾಗಿವೆ. ರಾಲ್ಸ್ ಸೂಚಿಸಿದ 'ಆತ್ಮ–ಗೌರವದ' ಪ್ರಾಥಮಿಕ ಪರಿಕಲ್ಪನೆಯು ಈ ಸಂಪ್ರದಾಯಕ್ಕೆ ಸರಿಹೊಂದುತ್ತದೆಂದು ಭಾವಿಸುತ್ತೇನೆ. ಪ್ರಜಾಸತ್ತಾತ್ಮಕ ಆದರ್ಶಗಳೊಡನೆ ನೇರವಾಗಿ ಸಂಘರ್ಷಕ್ಕೊಳಪಡದ ಪ್ರಜಾಸತ್ತಾತ್ಮಕ ಗುಣಗಳ ವಿವರಗಳನ್ನು ಪರಿಶೀಲಿಸಿ, ಪ್ರಜಾಸತ್ತಾತ್ಮಕ ರಾಜ್ಯದ ನಾಗರಿಕರಿಗೆ ಏನು ಬೇಕಾಗಿದೆ, ಯಾವುದು ಅನುಜ್ಞಾರ್ಹ ಎನ್ನುವುದನ್ನು ಶೋಧಿಸುವ ಗಮನಾರ್ಹ ಕಾರ್ಯವನ್ನು ಕೈಗೊಳ್ಳಬೇಕಿದೆ. ಇಲ್ಲಿ ಆ ಕೆಲಸಕ್ಕೆ ಪ್ರಯತ್ನಿಸುವುದು ಉಚಿತವಲ್ಲ. ಸಮುದಾಯವು ತನ್ನ ಸದಸ್ಯರಲ್ಲಿ ವಿಕಸನಗೊಳ್ಳತಕ್ಕದ್ದೆಂದು ನಿರೀಕ್ಷಿಸುವ ಹಾಗೂ ನನ್ನ ಹಕ್ಕೊತ್ತಾಯದ ಪ್ರಜಾಸತ್ತಾತ್ಮಕ ನಾಗರಿಕನ ಕೆಲವು ಅತ್ಯಗತ್ಯ ಗುಣವಿಶೇಷಗಳಿಗೆ ನನ್ನನ್ನು ಸೀಮಿತಗೊಳಿಸುತ್ತೇನೆ.

ಉತ್ತಮ ಬದುಕಿನ ಮೂಲಾಧಾರ ಕಲ್ಪನೆಯಾದ ಮೂಲಭೂತ ಆಜ್ಞೇಯತಾವಾದದ ನಿಟ್ಟಿನಲ್ಲಿ; ಬದುಕಿನ ಆದರ್ಶಗಳನ್ನು ಮೆಚ್ಚಿಕೊಳ್ಳುವ ಸಾಮರ್ಥ್ಯವುಳ್ಳ ನಾಗರಿಕರು ಅದರ ಪ್ರತಿಫಲಿತವೆಂಬಂತೆ ಸದರಿ ಆದರ್ಶಗಳನ್ನು ತಮ್ಮ ಆಯ್ಕೆಯ ಸಾಧ್ಯತೆಗಳೆಂಬುದಾಗಿ ಪರಿಗಣಿಸಿ, ಅವನ್ನು ರೂಢಿಸಿಕೊಳ್ಳುವಂತೆ ಸಮುದಾಯವು ಲಕ್ಷ್ಯವಹಿಸತಕ್ಕದ್ದು. (ಎ) ಅವರು ಆಯ್ಕೆಗಳನ್ನು ಮಾಡಲು ಶಕ್ತರಿರಬೇಕೆಂಬುದು ಈ ಮಾತಿನ ಅರ್ಥ. ಅವರ ಆಯ್ಕೆಗಳನ್ನು ಅನುಮತಿಸಿ, ಅವನ್ನು ಉತ್ಕೃಷ್ಟಗೊಳಿಸುವಂತಹ ಸಂಸ್ಥೆಗಳ ಅಗತ್ಯವಿದೆಯಾದರೂ, ಅವರಿಗೆ ಒತ್ತಾಯವನ್ನು ಹೇರುವಂತಿಲ್ಲ. (ಹೋಲಿಸಿ ನೋಡಿ: ಅಧ್ಯಾಯ 2). ಈ ಗುಣವಿಶೇಷಣಗಳ ಜೊತೆಗೆ, ದಾಸ್ಯ ಮನೋಭಾವ ಮತ್ತು ಗುಂಪನ್ನು ಅನುಸರಿಸುವ ವಾಂಛೆಯ ಸ್ವಭಾವ ಲಕ್ಷಣಗಳಿಲ್ಲದಿರುವುದೂ ಮುಖ್ಯ. ರೂಢಿಗತವಲ್ಲದ ನಡಾವಳಿಗಳು ತಮಗೆ ಸರಿಯೆನಿಸಿದಲ್ಲಿ ಹಾಗೂ ಅದನ್ನು ಅನುಸರಿಸುವ ಇಚ್ಛೆಯುಳ್ಳವರನ್ನು ಬೆಂಬಲಿಸುವ ಉದ್ದೇಶವಿದ್ದಲ್ಲಿ, ಅವನ್ನು ಸ್ವೀಕರಿಸುವ ವಿಶ್ವಾಸ ಮತ್ತು ತಾಳ್ಮೆಯ ಅಗತ್ಯವಿದೆ. ಈ ಎರಡನೆಯ ಅಂಶವು (ಎ) ಮತ್ತು (ಬಿ)ಗಳಡಿಯಲ್ಲಿ ಗುರುತಿಸಲ್ಪಟ್ಟ ಸ್ವಂತಕ್ಕೆ ಅತೀತವಾದ ಗುಣವಿಶೇಷಗಳತ್ತ ನಮ್ಮ ಗಮನಸೆಳೆಯುತ್ತದೆ: ಪ್ರಜಾಸತ್ತಾತ್ಮಕ ನಾಗರಿಕನು ಇತರರು ಹಾಗೂ ಅವರು ಆರಿಸಿಕೊಂಡ ಜೀವನಮಾರ್ಗದ ಬಗ್ಗೆ ಪೂರ್ವಗ್ರಹವಿಲ್ಲದ ತಾಳ್ಮೆಯನ್ನು ಪ್ರದರ್ಶಿಸತಕ್ಕದ್ದು.

ಇದು; ಸರ್ಕಾರದ ಅಥವಾ ಸಂಸ್ಥೆಗಳ, ಇತರ ವ್ಯಕ್ತಿಗಳ ಅಧಿಕಾರದ ಸಮ್ಮುಖದಲ್ಲಿ, ಸ್ವಾಯತ್ತ ನಾಗರಿಕನು ತನ್ನ ಹಕ್ಕುಗಳಿಗೆ ಎದ್ದು ನಿಲ್ಲುವ ತರ್ಕಾಧಾರಿತ ಪ್ರಜಾಸತ್ತೆಯ ವೈಯಕ್ತಿಕ ಪರಿಕಲ್ಪನೆಯಲ್ಲವೆಂಬುದು ಪ್ರಾಯಶಃ ಈ ಸಂದರ್ಭದಲ್ಲಿ ಪ್ರಾಧಾನ್ಯವನ್ನು ಕೊಡತಕ್ಕ ವಿಷಯವಾಗಿದೆ. ನಾವು ನೋಡಿದಂತೆ; ಸರ್ಕಾರದಿಂದ ಆದ್ಯತೆ ನೀಡಲ್ಪಟ್ಟ ಅಥವ ಕಡೆಗಣಿಸಲ್ಪಟ್ಟ ಜೀವನ ವಿಧಾನವನ್ನು ಕಂಡುಕೊಂಡಲ್ಲಿ; ಸರ್ಕಾರವು (ಅಥವ ಯಾವುದೇ ಇತರ ಸಂಸ್ಥೆ) ಯಾವುದೇ ಉತ್ತಮಬದುಕಿನ ಪರಿಕಲ್ಪನೆಗೆ ಇನ್ನಿತರೆ ಪರಿಕಲ್ಪನೆಗಿಂತಲೂ ಹೆಚ್ಚಿನ ಆದ್ಯತೆ ನೀಡಲು ಕಾರಣವಿಲ್ಲ. ಅಲ್ಲದೆ ಅಕ್ಷರಶಃ ಅದನ್ನು ದೃಢೀಕರಿಸಲು ಯಾವುದೇ ಕಾರಣವಿಲ್ಲ. ಇದಕ್ಕೆ ವಿರೋಧವನ್ನು ಸೂಚಿಸಿ, ಸರ್ಕಾರದ ವ್ಯವಸ್ಥೆಗಳನ್ನು ಸರಿಪಡಿಸುವ ಪ್ರಯತ್ನಗಳನ್ನು ನಡೆಸಬಹುದಾಗಿದೆ. ಯಾವುದೋ ವಿನ್ಯಾಸದಿಂದ, ಅಥವಾ ಅದೃಷ್ಟವಶಾತ್, ನಾನು ಆಯ್ಕೆಮಾಡಿದ ಜೀವನ ವಿಧಾನವು ಸರ್ಕಾರದ ನಿಯಮಾವಳಿಗಳಿಗೆ ಸಮ್ಮತವಾದರೆ, ನಾವು ನಿರ್ವಹಿಸುತ್ತಿರುವ ಉತ್ತಮ ಬದುಕನ್ನು ಕುರಿತಂತೆ ನಮ್ಮಲ್ಲಿನ ಅಜ್ಞೇಯತಾವಾದದ ಹಿನ್ನೆಲೆಯಲ್ಲಿ, ಇದನ್ನು ವಿರೋಧಿಸದಿರಲು ನನಗೆ ಕಾರಣಗಳಿಲ್ಲವಷ್ಟೇ ಅಲ್ಲ, ಅದು ಅತಾರ್ಕಿಕವೂ ಹೌದು. ಉತ್ತಮ ಬದುಕನ್ನು ಕುರಿತ ಅಜ್ಞಾತವಾದವು, ಇತರರು ಆಯ್ದುಕೊಂಡ ಜೀವನ ವಿಧಾನವನ್ನು ಕುರಿತಂತೆ ಇತರರು ಆಯ್ದುಕೊಂಡ ಜೀವನ ವಿಧಾನವನ್ನು ಕುರಿತಂತೆ ನಮ್ಮ ನಡತೆಯು ನ್ಯಾಯಯುತವಾಗಿರುವಂತೆ ಮಾಡುವುದಲ್ಲದೆ, ಆ ಬಗ್ಗೆ ತಾಳ್ಮೆಯನ್ನು ಸಹ ಮೂಡಿಸುತ್ತದೆ. ಆದ್ದರಿಂದ ನನಗೆ ಅಥವಾ ಇನ್ನಾರೋ ಒಬ್ಬರಿಗೆ ವಿಶೇಷ ಸೌಲಭ್ಯವನ್ನು ಒದಗಿಸುವ ಕಾರ್ಯನೀತಿಯನ್ನು ಒಪ್ಪಿಕೊಳ್ಳುವ ಕಾರಣಗಳಿರುವುದಿಲ್ಲ.

(ಎ) ಮತ್ತು (ಬಿ)ಗಳಲ್ಲಿ ತಿಳಿಸಲ್ಪಟ್ಟಿರುವ ಗುಣವಿಶೇಷಗಳು ಸಮಗ್ರವಾಗಿಲ್ಲ, ಪ್ರಜಾಸತ್ತಾತ್ಮಕ ನಾಗರಿಕನ ಪ್ರಧಾನ ಲಕ್ಷಣಗಳ ಬಗ್ಗೆಯೂ ಇದೇ ಮಾತನ್ನು ಹೇಳಬಹುದಾದರೂ, ನಾಲ್ಕನೆಯ ಅಧ್ಯಾಯದಲ್ಲಿ ಇದನ್ನು ಪೂರಕ ವಿಷಯವಾಗಿ ನಿರ್ವಹಿಸಲಾಗಿದ್ದು, ಇದು, ಈ ಕ್ಷೇತ್ರದಲ್ಲಿನ ಪ್ರಾರಂಭದ ಪ್ರಯತ್ನವಾಗಿದೆ. ಶಿಕ್ಷಣವನ್ನು ಅದರ ವ್ಯಾಪಕ ನೆಲೆಯಲ್ಲಿ ನಿಭಾಯಿಸುವ ಪ್ರಕ್ರಿಯೆಯಲ್ಲಿ ಈ ಎಲ್ಲ ಸಂಗತಿಗಳೂ ದೂರಗಾಮಿ ಪರಿಣಾಮವನ್ನು ಉಂಟುಮಾಡುತ್ತವೆ. ವಾಸ್ತವಿಕ ಚಾರಿತ್ರಿಕ ಸಮಾಜಗಳಲ್ಲಿನ ಮೂಲಭೂತ ಪ್ರಜಾಪ್ರಭುತ್ವದ ತತ್ವಗಳನ್ನು ಎರಡನೇ ಅಧ್ಯಾಯದಲ್ಲಿ ಅನ್ವಯಿಸುವ ಮೊದಲು, ಯಾವುದೇ ಸಮಾಜದಲ್ಲಿನ ಪ್ರಜಾಸತ್ತಾತ್ಮಕ ಅಧಿಕಾರದ ಚಲಾವಣೆ ಅಥವ ನಿಯಂತ್ರಣದ ಬಗೆಗಿನ ನಾಲ್ಕು ಸಾಮಾನ್ಯ ವಿಷಯಗಳನ್ನು ಮುಂದಿಡುತ್ತೇನೆ.

## ಸಹಭಾಗಿ ಪ್ರಜಾಪ್ರಭುತ್ವ

ಮೊದಲನೆಯದಾಗಿ, ಅಧಿಕಾರದ ನಿರ್ವಹಣೆ ಅಥವ ನಿಯಂತ್ರಣದಲ್ಲಿ; ಸಮಾನತೆಯೇ ಮೂಲಭೂತ ತತ್ವವಾಗಿದೆ. ಸಹಭಾಗಿ ಪ್ರಜಾಪ್ರಭುತ್ವವೆಂದು ಇದನ್ನು ಅರ್ಥೈಸಿಕೊಳ್ಳತಕ್ಕದ್ದು. ಪ್ರಸಕ್ತದಲ್ಲಿನ ಪ್ರಜಾಪ್ರಭುತ್ವ ಸಿದ್ಧಾಂತವನ್ನು ಕುರಿತ ಸಾಹಿತ್ಯವನ್ನು ಗಮನಿಸಿದ ಓದುಗನಿಗೆ ಪ್ರಜಾಪ್ರಭುತ್ವವನ್ನು ಪಡೆಯಬಹುದಾದ ಅನೇಕ ಸ್ವರೂಪಗಳಲ್ಲಿ ಸಹಭಾಗೀ ಪ್ರಜಾಪ್ರಭುತ್ವವೂ ಒಂದು ಎಂದು ಅನಿಸಬಹುದು. ಪ್ರಜಾಪ್ರಭುತ್ವದ ಎಲ್ಲ ಸ್ವರೂಪಗಳೂ ಹಂಚಿಕೊಳ್ಳುವಂತಹ ಪ್ರಜಾಸತ್ತಾತ್ಮಕ ಮೌಲ್ಯಗಳ ಒಂದು ತಿರುಳಿನ ಭಾಗವೊಂದಿದೆ ಎಂದು ಭಾವಿಸಬಹುದಾದರೂ, ಪ್ರಜಾಪ್ರಭುತ್ವದ ತಿರುಳಿನ ಯಾವುದೋ ಒಂದು ಭಾಗಕ್ಕೆ ವಿಶೇಷ ಒತ್ತನ್ನು ನೀಡಿ ಅಥವ ಹೆಚ್ಚುವರಿ ಮೌಲ್ಯಗಳನ್ನು ಸೇರಿಸಿ, ಒಂದು ನಿರ್ದಿಷ್ಟ ಮೌಲ್ಯಗಳ ಸಮೂಹವನ್ನು ಹೊಂದಿರುವವರಿಗೆ; (ಉದಾಹರಣೆಗೆ ಸರ್ವಸಮಾನತಾ ಭಾವದ ಕಡೆಗೆ

ಒಲಿದವರು ಅಥವ ಸಕ್ರಿಯ ನಾಗರಿಕತೆಯ ಆದರ್ಶ ಬೆಳೆಸಲು ಬಯಸುವವರು) ಸಹಭಾಗಿ ಪ್ರಜಾಪ್ರಭುತ್ವದಲ್ಲಿ ಆಯ್ಕೆಯಿದೆ. ಪ್ರಜಾಪ್ರಭುತ್ವಕ್ಕೆ ಈ ನಿರ್ದಿಷ್ಟ ತಿರುವು ಕೊಡಲು ಬಯಸುವವರು ಅವರ ವಾದಕ್ಕೆ ಸಮರ್ಥನೆಗಳನ್ನು ಮಂಡಿಸತಕ್ಕದ್ದು. ಆದರೆ ಅದು ಹಾಗಿಲ್ಲ. ಆ ಸಂಗತಿ ಸಂಪೂರ್ಣ ತಿರುವುಮುರುವಾಗಿದೆ. ಅಧಿಕಾರದ ನಿರ್ವಹಣೆಯಲ್ಲಿನ ಸಮಾನತೆಯೇ ಸಹಭಾಗಿ ಪ್ರಜಾಪ್ರಭುತ್ವದ ಮುನ್ಸೂಚಿತ ಕಲ್ಪನೆಯಾಗಿರುವುದರಿಂದ; ಅದರಿಂದ ದೂರಸರಿಯುವಿಕೆಗಳನ್ನು ಸಮರ್ಥಿಸಬೇಕಾಗುತ್ತದೆ. ಆದುದರಿಂದ ನಾನು ಈ ವರೆಗೆ ಅಧಿಕಾರದ ನಿರ್ವಹಣೆ ಅಥವಾ ನಿಯಂತ್ರಣದಲ್ಲಿನ ಸಮಾನತೆಯ ಕುರಿತಂತೆ ಮಾತನ್ನಾಡಿದ್ದೇನೆ. ಏಕೆಂದರೆ ಅಧಿಕಾರ ನಿರ್ವಹಣೆಯಲ್ಲಿ ಸಮಾನತೆಯು ಸಂಪೂರ್ಣವಾಗಿ ಕಾರ್ಯಸಾಧುವಲ್ಲದಿದ್ದಲ್ಲಿ ಅಥವ ನ್ಯಾಯದ ಸಾಕ್ಷಾತ್ಕಾರ, ಸ್ವಾತಂತ್ರ್ಯ ಮತ್ತಿತರ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಧಕ್ಕೆ ಅಥವ ಸೋಲನ್ನುಂಟುಮಾಡುತ್ತಿದ್ದಲ್ಲಿ; ಅಂತಹ ಸಂದರ್ಭಗಳಲ್ಲಿ ಅಧಿಕಾರ ನಿರ್ವಹಣೆಯ ಬದಲಿಗೆ ಅಧಿಕಾರ ನಿಯಂತ್ರಣದ ಎರಡನೆಯ ಅತ್ಯುತ್ತಮ ಅವಸ್ಥೆಯತ್ತ ಚಲಿಸುವುದು ಅಗತ್ಯವಾಗುತ್ತದೆ. ಅಧಿಕಾರದ ನಿರ್ವಹಣೆಯಲ್ಲಿ ಸಮಾನತೆಯ ಪರವಾಗಿರುವ ಪೂರ್ವಕಲ್ಪನೆಯನ್ನು ಸೋಲಿಸಬೇಕಾದರೆ; ಸಂಗತಿಗಳ ಅಪ್ರಾಯೋಗಿಕತೆ, ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಧಕ್ಕೆಯನ್ನುಂಟುಮಾಡುವ ಹಾಗೂ ಅವನ್ನು ಕಾರ್ಯಸಾಧುವಲ್ಲವೆಂದು ತಿಳಿಸುವ ಸಂಗತಿಗಳು ಸಬಲವಾಗಿರಬೇಕು ಎಂಬುದನ್ನು ಹೇಳುವ ಅಗತ್ಯವಿಲ್ಲ. ಸಹಭಾಗಿ ಪ್ರಜಾಪ್ರಭುತ್ವದಲ್ಲಿ ನಾವು ನೋಡಿದಂತೆ, ಸಹಭಾಗಿ ಪ್ರಜಾಪ್ರಭುತ್ವದಲ್ಲಿನ ಪ್ರಜಾಪ್ರಭುತ್ವವಾದಿ ಅಧಿಕಾರ ನಿರ್ವಹಣೆಯ ಪೂರ್ವಕಲ್ಪನೆಯು 'ನಿಷ್ಪಕ್ಷಪಾತ' ಎನ್ನುವ ನ್ಯಾಯ ತತ್ವವನ್ನು ಆಧರಿಸಿರುವುದರಿಂದ ಅದನ್ನು ಸೋಲಿಸುವುದು ಮತ್ತು ಬದಿಗಿಡುವುದು ಲಘುವಾದ ಕೆಲಸವಲ್ಲ. ಈ ಅಂಶಕ್ಕೆ  ಇಲ್ಲಿ ಒತ್ತು ಕೊಡುವುದು ಮೌಲಿಕ. ಏಕೆಂದರೆ ಸಹಭಾಗಿ ಪ್ರಜಾಪ್ರಭುತ್ವದ ಕುರಿತ ಕೆಲ ಸಂಗತಿಗಳು; [(ಅಮಿ ಗುಟ್ಮನ್ ಅವರು ಲಿಬರಲ್ ಇಕ್ವಾಲಿಟಿಯಲ್ಲಿ ಇದನ್ನು ಒಪ್ಪವಾಗಿ ಸಾರಾಂಶಿಕರಿಸಿದ್ದಾರೆ. (ಗುಟ್ಮನ್, 1980, ಪುಟಗಳು. 178–83)] ನಿಯಮಾವಳಿಗಳ ಪರಿಣಾಮಗಳ ಬಗೆಗೆ ಮಾಹಿತಿ ಸಂಗ್ರಹಿಸುವ ಅತ್ಯುತ್ತಮ ಮಾರ್ಗ, ಅಥವಾ ಮಾನವ ಅಭಿಪ್ರೇರಣೆ ಮುಂತಾದ ಉದಾಹರಣೆಗಳಲ್ಲಿರುವಂತೆ ಪ್ರಾಯೋಗಿಕ ಊಹೆಗಳನ್ನು ಆಧರಿಸಿವೆ. ಇವುಗಳು ತಪ್ಪೆಂದು ಸ್ಪಷ್ಟವಾಗಿ ಸಾಧಿಸಲ್ಪಟ್ಟಲ್ಲಿ, ಸಹಭಾಗಿ ಪ್ರಜಾಪ್ರಭುತ್ವವೂ ಅವುಗಳ ಜೊತೆ ನಿರ್ಗಮಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಪ್ರಸಕ್ತ ಸಹಭಾಗೀ ಪ್ರಜಾಪ್ರಭುತ್ವವು ಎಲ್ಲ ಸಾಮಾನ್ಯ ಜನರು ಆಯ್ಕೆದಾರರಾಗಿ ಸಮಾನರು ಎನ್ನುವ ಮೂಲಭೂತವಾದ ನೈತಿಕ ಪೂರ್ವಕಲ್ಪನೆಯನ್ನು ಆಧರಿಸುತ್ತದೆ. ಈ ಸಂಗತಿಯು ಹೊಸ ಪ್ರಾಯೋಗಿಕ ಸಂಶೋಧನಾ ಮಾಹಿತಿಗಳಿಂದ ಸೋಲಿಸಲ್ಪಡುವುದಿಲ್ಲ. ಈ ರೀತಿಯ ಸಾಮಾನ್ಯರಲ್ಲದವರ ಬಗೆಗೆ ಉದಾಹರಣೆಗಳನ್ನು ಕೊಡುವುದು ಈ ಪೂರ್ವಕಲ್ಪನೆಗೆ ಅಪ್ರಸ್ತುತವಾಗುತ್ತದೆ (ಉದಾ. ಮೆದುಳಿನ ಹಾನಿಗೊಳಗಾದವರು). ಏಕೆಂದರೆ, ಪ್ರಜಾಪ್ರಭುತ್ವ ಸರ್ಕಾರವು ಕಲ್ಪಿಸಬೇಕಾದ ಯಾವುದೇ ಸೌಲಭ್ಯಗಳು ಸರ್ವಶ್ರೇಷ್ಠವಾದ ಆಯ್ಕೆಯನ್ನು ಒಳಗೊಂಡಿರುವ ಕಾರಣದಿಂದ ಇಂತಹವರನ್ನು ಅಧಿಕಾರದ ನಿರ್ವಹಣೆ ಮತ್ತು ನಿಯಂತ್ರಣಗಳಿಂದ ಹೊರತುಪಡಿಸಲಾಗಿದೆ.

ಸಹಭಾಗಿ ಪ್ರಜಾಸತ್ತೆಯ ಸಂಗತಿಯು ಅತ್ಯಂತ ಸಬಲವಾಗಿದೆಯಷ್ಟೇ ಅಲ್ಲದೆ, ಅದು ಔದ್ಯೋಗಿಕ ಬಂಡವಾಳಶಾಹಿ ಪ್ರಜಾಪ್ರಭುತ್ವಗಳ ಮೂರು ಪ್ರಸಕ್ತ ಕಲ್ಪನೆಗಳಿಗೆ ಸವಾಲೊಡ್ಡುತ್ತದೆ.

(i) ಪ್ರಜಾಪ್ರಭುತ್ವವನ್ನು ರಾಜಕೀಯ ನಿರ್ಧಾರಗಳತ್ತ ಕೊಂಡೊಯ್ಯುವ ಒಂದು ವಿಧಾನವಾಗಿ ಕಾಣಬೇಕೆಂಬುದು ಮೊದಲನೆಯ ಕಲ್ಪನೆ. ಪ್ರಾಯಶಃ ಈಗಲೂ ಈ ದೃಷ್ಟಿಕೋನದ ಹೆಸರಾಂತ ಪ್ರತಿಪಾದಕರಾದ ಶುಂಪೀಟರ್, 'ಜನ ಮತಕ್ಕಾಗಿ ನಡೆಸುವ ಸ್ಪರ್ಧಾತ್ಮಕ ಹೋರಾಟದಲ್ಲಿ ಜನರು ನಿರ್ಧರಿಸುವ ಅಧಿಕಾರವನ್ನು ಪಡೆಯುವಂತಹ ಸಾಂಸ್ಥಿಕ ವ್ಯವಸ್ಥೆಯೇ ಪ್ರಜಾಪ್ರಭುತ್ವದ ವಿಧಾನ'ವೆಂದು ಹೇಳುತ್ತಾರೆ (ಶುಂಪೀಟರ್, 1976, ಪು. 269). ಈ ದೃಷ್ಟಿಕೋನದಲ್ಲಿ, ನಾಯಕತ್ವಕ್ಕಾಗಿ ನಡೆಸುವ ಸ್ಪರ್ಧೆಯೇ ಪ್ರಜಾಪ್ರಭುತ್ವದ ಗುಣಲಕ್ಷಣವಾಗಿ ತೋರುತ್ತದೆ. ಯಾವುದೇ ಮಟ್ಟದ ನಿರ್ಣಯವನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ಜನರು ಅಧಿಕಾರ ನಿರ್ವಹಣೆಯಲ್ಲಿ ಭಾಗವಹಿಸುವ ಪ್ರಶ್ನೆಯೇ ಇಲ್ಲ. ಏಕೆಂದರೆ, 'ಮತದಾರ ಜನತೆ ದಿಕ್ಕೆಟ್ಟ ಓಟ–ಕಾಲ್ತುಳಿತದ ವಿನಹ ಬೇರಾವ ಕೆಲಸಕ್ಕೂ ಸಮರ್ಥರಲ್ಲ' ಎಂಬುದು ಶುಂಪೀಟರ್ ಅವರ ಅಭಿಪ್ರಾಯ (ಶುಂಪೀಟರ್, 1976, ಪು. 283). ಜನರಿಗೆ ಇರುವ ಏಕೈಕ ಪಾತ್ರವೆಂದರೆ; ಅಗತ್ಯ ಬಿದ್ದಾಗ ಮತವನ್ನು ಚಲಾಯಿಸಿ, ತನ್ಮೂಲಕ ಸ್ಪರ್ಧೆಯನ್ನು ಚಾಲ್ತಿಯಲ್ಲಿಡುವುದು.

ನಿರ್ದಿಷ್ಟ ಸಮಾಜಗಳಲ್ಲಿ ನಾಗರಿಕರ ಮೌಲ್ಯ ನಿರ್ಧಾರಣಾ ಸಾಮರ್ಥ್ಯಗಳು ಮತ್ತು ರಾಜಕೀಯ ಆಸಕ್ತಿಗಳು ಆಪಾದಿತವಾಗಿವೆ ಎನ್ನುವುದರ ಬಗ್ಗೆ ನಡೆದ ವಾದದಿಂದ; ಈ ದುರ್ಬಲ ಜೀವಿಗಳು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವಾಗುವಂತಹ ಯಾವುದಾದರೊಂದು ರೀತಿಯ ವ್ಯವಸ್ಥೆಯಾಗಬೇಕೆನ್ನುವ ಮೌಲಿಕ ತೀರ್ಮಾನದ ಚಿಂತನೆಯಿಂದ ಪ್ರಜಾಪ್ರಭುತ್ವದ ಈ ಪರಿಕಲ್ಪನೆಯ ಉಗಮವಾಗಿದೆ ಎನ್ನುವುದು ಕುತೂಹಲಕಾರಿ ವಿಷಯ. ಇದು, ಪ್ರಜಾಪ್ರಭುತ್ವದ ಉತ್ತಮ ಸಿದ್ಧಾಂತಿಗಳೆಂದು ಕರೆಸಿಕೊಂಡವರ ಸಾಮಾನ್ಯ ಗುಣಲಕ್ಷಣವಾಗಿದ್ದು; ಕೆರೋಲ್ ಪ್ಯಾಟ್ಮನ್ ಈ ನಿಲುವುಗಳನ್ನು ಸಾಕಷ್ಟು ವಿವರವಾಗಿ ದಾಖಲಿಸಿದ್ದಾರೆ (ಪ್ಯಾಟ್ಮನ್, 1970, ಅಧ್ಯಾಯ 1). ನಾನು ವಾದಿಸಿದಂತೆ, ಈ ಪ್ರಕ್ರಿಯೆಗಳನ್ನು ಅಧೋಮುಖಿಗೊಳಿಸಬೇಕು (ತಲೆಕೆಳಗು). ಅಧಿಕಾರದ ನಿರ್ವಹಣೆಯಲ್ಲಿ ಸಮಾನತೆ ಎನ್ನುವ ಪೂರ್ವಕಲ್ಪನೆಯಿಂದ ಪ್ರಾರಂಭಿಸಿ, ಅದನ್ನು ಸೋಲಿಸುವ ಸಾಧ್ಯತೆಯಿದೆಯೇ ಎಂಬುದನ್ನು ಪರಿಶೀಲಿಸಬೇಕು. ಇದೆಲ್ಲವೂ ಸರಿಯೇ, ಆದರೆ ಆಕ್ಷೇಪಣೆ ಮಾಡುವವರು ಇದನ್ನು ಕುತರ್ಕವೆಂಬುದಾಗಿ ದೂರಬಹುದು. ಅಧಿಕಾರ ನಿರ್ವಹಣೆಯಲ್ಲಿ ಸಮಾನತೆಯ ಪರವಾಗಿ ಪೂರ್ವಕಲ್ಪನೆ ಮಾಡಿದಾಗ ಅದನ್ನು ಶುಂಪೀಟರ್ ಮತ್ತು ಅವರ ನಂತರದ ಸಿದ್ಧಾಂತಿಗಳು ಉದ್ಧರಿಸಿದ ಸಂಗತಿಗಳನ್ನು ಉಲ್ಲೇಖಿಸಿ, ಸೋಲಿಸಬಹುದೆಂದು ಹೇಳಬಹುದು. ಸ್ಥಳೀಯ ಮತ್ತು ರಾಷ್ಟ್ರೀಯ ಚುನಾವಣೆಗಳಲ್ಲಿ ಕಡಿಮೆ ಹಾಜರಾತಿ, ಸ್ಥಳೀಯ ಸಾಮುದಾಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯಲ್ಲಿ ಕೂಡಾ ಕನಿಷ್ಠ ಆಸಕ್ತಿ, ಮಾಧ್ಯಮ ಮತ್ತು ರಾಜಕೀಯ ಪ್ರಚಾರದ ಅಭಿಯಾನಗಳಲ್ಲಿ ರಾಜಕೀಯದ ಬಗೆಗೆ ಹೀನವಾದ ವ್ಯಕ್ತಿ ನಿಷ್ಠ ನಿರೂಪಣೆಗಳು; ಬೃಹತ್ ಜನಸಂಖ್ಯೆಯ ಬಹುತೇಕ ಜನರ ರಾಜಕೀಯ ನಿರಾಸಕ್ತಿ ಮತ್ತು ರಾಜಕೀಯ ಚರ್ಚೆಗಳ ಸೂಕ್ಷ್ಮತೆಗಳನ್ನು ಗ್ರಹಿಸುವ ಸಾಮರ್ಥ್ಯದ ಕೊರತೆಯನ್ನೂ ತೋರುತ್ತವೆ. ಹಾಗಿದ್ದರೂ, ಈ ಅಂಶಗಳು ಈ ಸಂಗತಿಯನ್ನು ಸೋಲಿಸುವುದಿಲ್ಲ. ಮೊದಲಿಗೆ ಮಾಧ್ಯಮಗಳ ವಿಷಯವನ್ನು ತೆಗೆದುಕೊಂಡಲ್ಲಿ; ಮಾಧ್ಯಮಗಳ ರಾಜಕೀಯ ವ್ಯವಹಾರಗಳನ್ನು ನಿರೂಪಿಸುವ ಪ್ರಸಕ್ತ ಕಾರ್ಯನೀತಿಗಳಿಂದಾಗಲೀ ಮತ್ತು ರಾಜಕೀಯ ಪಕ್ಷಗಳಿಗಾಗಿ ಪ್ರಚಾರ ಸಂಸ್ಥೆಗಳು ಕಲ್ಪಿಸಿದ ಅರ್ಥಶೂನ್ಯ ಘೋಷಣೆಗಳು ಮತ್ತು ಅಭಿಯಾನಗಳಿಂದಾಗಲೀ ಜನರು ಏನನ್ನು ಗ್ರಹಿಸುತ್ತಾರೆ, ಏನನ್ನು ಗ್ರಹಿಸಲು ಸಮರ್ಥರಾಗಲಾರರು ಅಥವ ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ಆಸಕ್ತಿ ವಹಿಸುವರೆ ಎಂಬುದನ್ನು ನಾವು ತರ್ಕಿಸಲು ಸಾಧ್ಯವಿಲ್ಲ.

ಇವತ್ತಿನ ನಮ್ಮ ಪ್ರಸ್ತುತ ಸಮಾಜಗಳಲ್ಲಿ, ತಮ್ಮ ಸಂಪೂರ್ಣ ಶ್ರಮವನ್ನು ವಿನಿಯೋಗಿಸುವ ಮೂಲಕ ಜನರ ಆಸಕ್ತಿಯನ್ನು ಪ್ರೋತ್ಸಾಹಿಸಿ, ಅವರ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವತ್ತ ಹಾಗೂ ಸಮಾಜದ ಪ್ರಭಾವೀ ಸಂಸ್ಥೆಗಳು, ಅವುಗಳ ಕಾರ್ಯನೀತಿ ಹಾಗೂ ನಿರ್ವಹಣೆಯ ಸತ್ವಶಾಲೀ ಪರಿಶೀಲನೆ ಮತ್ತು ವಿಮರ್ಶೆಯ ನಿಟ್ಟಿನಲ್ಲಿ ಮಾಧ್ಯಮಗಳು ಮತ್ತು ರಾಜಕೀಯ ಪಕ್ಷಗಳು ತಮ್ಮ ಅರ್ಧದಷ್ಟು ಸಮಯವನ್ನು ಕೂಡಾ ವ್ಯಯಿಸುತ್ತಿಲ್ಲವೆಂದು ಆಲೋಚಿಸಲು ಬಲವಾದ ಕಾರಣಗಳಿವೆ. ಹಾಗಾಗಿ, ಮಾಧ್ಯಮಗಳು ಮತ್ತು ಪಕ್ಷದ ಪ್ರಚಾರ ಕಾರ್ಯತಂತ್ರಗಳಿಂದ, ಪ್ರಸಕ್ತದಲ್ಲಿ ನಿರೂಪಿತವಾದ ರಾಜಕೀಯ ಪ್ರಕರಣಗಳಿಂದ ಸಾಧಿಸಬಹುದಾದ ರಾಜಕೀಯ ಗ್ರಹಿಕೆಯ ಮಟ್ಟವನ್ನು ನಾವು ತೀರ್ಮಾನಿಸಲಾಗುವುದಿಲ್ಲ. ನಾವು ಆ ಸಮಸ್ಯೆಯನ್ನು ನಿರ್ವಹಿಸುವ ಮೊದಲು, ಕಡೆಯ ಪಕ್ಷ ಅಧ್ಯಾಯ ಮೂರರಲ್ಲಿನ ರಾಜಕೀಯ ಶಿಕ್ಷಣದ ಕಾರ್ಯನೀತಿಯ ವಿಧಾನವನ್ನು ಗಮನಿಸುವುದು ಅಗತ್ಯ.

ಭಾಗವಹಿಸುವಿಕೆಯ ಮಟ್ಟವನ್ನು ಕುರಿತಂತೆ ನಾನು ತಿಳಿಸಲಿಚ್ಛಿಸುವ ವಿಷಯಗಳು, ಮಾಧ್ಯಮಗಳ ಕುರಿತು ಪ್ರಸ್ತಾಪಿಸುತ್ತಿರುವ ವಿಷಯಗಳಿಗೆ ಸಂಪರ್ಕವಲ್ಲದ್ದೇನೂ ಅಲ್ಲ. ಮೊದಲನೆಯದಾಗಿ ಎರಡು ಸಂಗತಿಗಳಲ್ಲೂ ರಾಚನಿಕ ಸಾಮ್ಯತೆಯಿದೆ. ಶುಂಪೀಟರ್ ಮೊದಲಾದ ಪ್ರಧಾನ ಸಿದ್ಧಾಂತಿಗಳು ವಿವರಿಸುವಂತಹ ವಿಧದ ಪ್ರಜಾಪ್ರಭುತ್ವಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿರುವುದರಿಂದ, ಸಹಭಾಗಿ ಪ್ರಜಾಪ್ರಭುತ್ವದಲ್ಲಿ ಯಾವ ಮಟ್ಟದ ಭಾಗವಹಿಸುವಿಕೆಯನ್ನು ನಿರೀಕ್ಷಿಸಬಹುದೆಂಬ ಬಗ್ಗೆ ನಾವು ಯಾವುದೇ ದೃಢವಾದ ನಿರ್ಣಯಗಳನ್ನು ಮಾಡಲಾಗುವುದಿಲ್ಲವೆಂದು ಹೇಳುವುದರ ಮೂಲಕ ಮತದಾರರ ಕಡಿಮೆ ಹಾಜರಾತಿ ಮುಂತಾದ ಉದಾಹರಣೆಯ ಹಿನ್ನೆಲೆಯಲ್ಲಿ; ಭಾಗವಹಿಸುವಿಕೆಯ ದರದ ದತ್ತಾಂಶಗಳಿಗೆ ನಾವು ಪ್ರತಿಕ್ರಿಯಿಸಬಹುದು. ಜನರು ತಮ್ಮ ಭಾಗವಹಿಸುವಿಕೆಯು ಫಲಿತಾಂಶದ ಮೇಲೆ ಮಹತ್ವದ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ವಿಶ್ವಾಸವಿರಿಸಿದಲ್ಲಿ, ರಾಜಕೀಯವಾಗಿ ಭಾಗವಹಿಸುತ್ತಾರೆ ಎನ್ನುವುದು ವಿವಿಧ ಅಧ್ಯಯನಗಳಿಂದ ಸ್ಪಷ್ಟವಾಗಿದೆ (ವರ್ಬಾ ಮತ್ತು ನೀ 1972). ಸಮಕಾಲೀನ ಪ್ರಜಾಸತ್ತೆಗಳಲ್ಲಿ ಅನೇಕ ಜನರು ವಾಸ್ತವಿಕವಾಗಿ ತಮಗೆ ಮತದಾನಕ್ಕಿಂತಲೂ ಅಕ್ಷರಶಃ ಉತ್ತಮ ಕೆಲಸಗಳಿವೆ ಎಂದು ತೀರ್ಮಾನಿಸುತ್ತಾರೆ. ಎರಡನೆಯದಾಗಿ, ಭಾಗವಹಿಸುವಿಕೆಯ ಮಟ್ಟ, ಶಿಕ್ಷಣದ ಮಟ್ಟ ಮತ್ತು ಸಾಮಾಜಿಕ ಆರ್ಥಿಕತೆಯ ಸ್ಥಾನಮಾನಗಳ ನಡುವೆ ಮಿಶ್ರ–ಸಾಂಸ್ಕೃತಿಕ ಸಹಸಂಬಂಧಗಳಿವೆಯೆಂದು ಹಕ್ಕು ಸಾಧಿಸಲಾಗುತ್ತದೆ (ವರ್ಬಾ, ನೀ, ಮತ್ತು ಕಿಮ್, 1971). ವ್ಯಕ್ತಿಯ ಸಾಮಾಜಿಕ ಆರ್ಥಿಕತೆಯ ಸ್ಥಿತಿ ಮತ್ತು ಶಿಕ್ಷಣವು ಉನ್ನತ ಮಟ್ಟದಲ್ಲಿದ್ದಲ್ಲಿ, ಆಕೆಯ ಭಾಗವಹಿಸುವಿಕೆಯ ಸಾಧ್ಯತೆಗಳೂ ಹೆಚ್ಚಬಹುದು. ವ್ಯಕ್ತಿಯೊಬ್ಬನ ರಾಜಕೀಯ ವಿಷಯ ಜ್ಞಾನ, ಸಂಪತ್ತು, ಸುಸಂಬದ್ಧ ಜೀವನ ಶೈಲಿ, ಲಭ್ಯವಿರುವ ಒಟ್ಟು ವಿರಾಮ ಹಾಗೂ ಅದರ ಸಮಯಕ್ಕೂ ಆತನ ರಾಜಕೀಯ ವಿಷಯಗಳಲ್ಲಿ ಭಾಗವಹಿಸುವ ಇಚ್ಛೆ ಮತ್ತು ಸಾಮರ್ಥ್ಯಗಳಿಗೂ ಬಹುಶಃ ಸಂಬಂಧವಿದೆ.

ಈಗಿನ ಪರಿಸ್ಥಿತಿಯಲ್ಲಿ, ರಾಜಕೀಯ ಭಾಗವಹಿಸುವಿಕೆಯ ದರ ಮತ್ತು ಪ್ರಜಾಪ್ರಭುತ್ವವನ್ನು ಕುರಿತಂತೆ ಮಾಧ್ಯಮಗಳ ನಿರೂಪಣೆಗಳನ್ನು ಆಧರಿಸಿ ಅಧಿಕಾರ ನಿರ್ವಹಣೆಯಲ್ಲಿ ಸಮಾನತೆಯ ಪರವಾಗಿರುವ ಪೂರ್ವಕಲ್ಪನೆಯು ಸೋತಿದೆ ಎಂದು ನಿರ್ಣಯಿಸುವವನು ಪಳಗಿರದ ಅವಿವೇಕಿಯೇ ಹೌದು. ಸಂಶೋಧನೆಗಳು; ಸಮಕಾಲೀನ ಬಂಡವಾಳಶಾಹಿ ಗಣ್ಯ ಪ್ರಜಾಪ್ರಭುತ್ವಗಳಲ್ಲಿ ಉನ್ನತ ಮಟ್ಟದ ರಾಜಕೀಯ ಭಾಗವಹಿಸುವಿಕೆಯನ್ನು ಗುರುತಿಸಿದಲ್ಲಿ, ನಿಶ್ಚಿತವಾಗಿಯೂ ಅದು ವಿಲಕ್ಷಣ ಸಂಗತಿಯೇ ಹೌದು. ಏಕೆಂದರೆ ಹೇಬರಮಸ್ ಸೂಚಿಸುವಂತೆ, ಇಂತಹ ಸಮಾಜಗಳ ಸಾರ್ವಜನಿಕ

ಕ್ಷೇತ್ರಗಳು ಅವುಗಳ ನಿಯತಕಾಲಿಕ ಜನಾಭಿಪ್ರಾಯದೊಂದಿಗೆ “ರಚನಾತ್ಮಕವಾಗಿ ರಾಜಕೀಯ ಮುಕ್ತವಾಗಿರುತ್ತವೆ’. (ಹೇಬರ್ಮಸ್, 1976, ಪು. 37). ನಾಗರಿಕರ ಖಾಸಗಿತನ – ರಾಜಕೀಯ ಸಂಯಮಶೀಲತೆಯನ್ನೊಳಗೊಂಡ ಜೀವನ ವೃತ್ತಿಯೆಡೆಗಿನ ಒಲವು, ವಿರಾಮ ಮತ್ತು ಬಳಕೆಗಳು ಈ ವ್ಯವಸ್ಥೆಯ ನಿರ್ವಹಣೆಗೆ ಅಗತ್ಯ. ಹೇಬರ್ಮಸ್ ಅವರ ನಂತರದ ಪ್ರತಿಪಾದನೆಯಂತೆ; ನಾಗರಿಕರ ಭಾಗವಹಿಸುವಿಕೆ ಮತ್ತು ಉಪಕ್ರಮಗಳ ಪ್ರಯತ್ನವು ರಾಜಕೀಯಮುಕ್ತ ಕ್ಷೇತ್ರಕ್ಕೆ ಬೆದರಿಕೆಯನ್ನೊಡ್ಡುತ್ತವೆ.

ಸಹಭಾಗಿ ಪ್ರಜಾಪ್ರಭುತ್ವವು ಪ್ರಧಾನ ಸಿದ್ಧಾಂತಕಾರರು ಮತ್ತು ರಾಜಕೀಯ ಜಡತೆ ಮತ್ತು ಮೌಢ್ಯದ ಬಗೆಗಿನ ಅವರ ಮಾಹಿತಿಗಳಿಂದ ಉಂಟಾಗುವ ಮೊದಲ ಸವಾಲಿನೆದುರು ಅಚಲವಾಗಿ ನಿಲ್ಲುತ್ತದೆ. ಆ ಆಧಾರಗಳ ಮೇಲೆ ಸಹಭಾಗಿ ಪ್ರಜಾಪ್ರಭುತ್ವದ ವಿರುದ್ಧದ ಅಪವಾದವನ್ನು ಸಾಬೀತುಮಾಡಲಾಗದು. ಸಮಕಾಲೀನ ಸಮಾಜಗಳಲ್ಲಿ ಸಹಭಾಗಿ ಪ್ರಜಾಪ್ರಭುತ್ವದ ವಾಸ್ತವೀಕರಣಕ್ಕೆ ಅವಶ್ಯವಿರುವ ಸೂಕ್ತ ವ್ಯವಸ್ಥೆಯ ವಿಧಾನ(ಗಳ) ಬಗೆಗೆ ಅನೇಕ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ. ಇವುಗಳನ್ನು ಎರಡನೆಯ ಅಧ್ಯಾಯದಲ್ಲಿ ನಿರ್ವಹಿಸಲಾಗಿದೆ.

(ii) ರಾಜಕೀಯ ಅಧಿಕಾರವನ್ನು ಕೇವಲ ಪ್ರಬಲರಿಗೆ ಸೀಮಿತಗೊಳಿಸಬೇಕೆಂಬ ನಿಲುವಿನಿಂದಾಗಿ ಸಹಭಾಗಿ ಪ್ರಜಾಪ್ರಭುತ್ವಕ್ಕೆ ಮೊದಲ ಸವಾಲು ಎದುರಾಯಿತು. ಇದು ಕಟ್ಟಳೆಯಿಲ್ಲದ ಮತ್ತು ಸಮರ್ಥಿಸಲಾಗದ ಕಟ್ಟುಪಾಡು ಎಂದು ತೋರಿಸಲಾಯಿತು. ಎರಡನೆಯ ಸವಾಲು ರಾಜಕೀಯ ಅಧಿಕಾರದ ಕ್ಷೇತ್ರವನ್ನೇ ಸೀಮಿತಗೊಳಿಸುವ ಪ್ರಸ್ತಾಪವನ್ನೊಳಗೊಂಡಿದೆ. ಅಧಿಕಾರವನ್ನು ಚಲಾಯಿಸುವ ಇತರ ಕ್ಷೇತ್ರಗಳು ರಾಜಕೀಯಕ್ಕೆ ಸಂಬಂಧಪಡದವು ಮತ್ತು ಅವು ರಾಜಕೀಯ “ಹಸ್ತಕ್ಷೇಪಕ್ಕೆ” ಒಳಗಾಗಬಾರದು ಎನ್ನುವ ವಾದಕ್ಕೆ ಇದು ಸಮಾಂತರವಾಗಿದೆ. ಕನಿಷ್ಠತಮ ಸರ್ಕಾರದ ಬೆಂಬಲಿಗರು, ಉದ್ಯೋಗ ಮತ್ತು ವ್ಯವಹಾರಗಳಲ್ಲಿ ‘ರಾಜಕೀಯ’ ಕಾರಣಗಳಿಗಾಗಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಮತ್ತು ಖಾಸಗೀ ಶಿಕ್ಷಣದಲ್ಲೂ ಕೇವಲ ರಾಜಕೀಯ ಕಾರಣಗಳಿಗಾಗಿ ವಿಚಾರಣೆ ನಡೆಸಬಾರದು ಮುಂತಾಗಿ ವಾದಿಸುತ್ತಾರೆ. “ಕನಿಷ್ಠತಮ” ಸರ್ಕಾರದ ಪ್ರಸ್ತಾವನೆಗಳು ತಮ್ಮ ವಿವರಗಳಲ್ಲಿ ವಿಭಿನ್ನವಾಗಿದ್ದರೂ ಅವುಗಳ ಸಾರಾಂಶವು, ಸಮಾಜದಲ್ಲಿನ ಅಧಿಕಾರದ ಸಮಗ್ರ ಹಂಚಿಕೆಯನ್ನು ಪ್ರಶ್ನಿಸಲು ಸರ್ಕಾರಕ್ಕೆ ಅನುಮತಿಯನ್ನು ತಿರಸ್ಕರಿಸುವುದಾಗಿರುತ್ತದೆ ಎಂದು ಆಕರ್ಮನ್ನನಂತೆ ನಾನೂ ಸಹ ತಿಳಿಸಲು ಬಯಸುತ್ತೇನೆ (ಆಕರ್ಮನ್, 1980, ಪು. 253). ಸಹಭಾಗಿ ಪ್ರಜಾಪ್ರಭುತ್ವವು ತದ್ವಿರುದ್ಧವಾದ ಪೂರ್ವಕಲ್ಪನೆಯನ್ನು ಆಧರಿಸಿದೆ. ನಾನು ಮೊದಲೇ ಹೇಳಿದಂತೆ, ಪ್ರಜಾಪ್ರಭುತ್ವದ ಮೌಲ್ಯಗಳು ವಾಸ್ತವೀಕರಣಕ್ಕೆ ಯಾವುದೋ ರೀತಿಯಲ್ಲಿ ಮಾರಕ ಅಥವ ಕಾರ್ಯಸಾಧ್ಯವಲ್ಲದ್ದೆಂದು ತೋರಿಸಲ್ಪಡುವವರೆಗೆ, ಯಾವುದೇ ಅಧಿಕಾರ ನಿರ್ವಹಣೆಯು ಅದನ್ನು ಒಳಗೊಂಡಿರುವವರ ನಡುವೆ ಸಮಾನವಾಗಿ ಹಂಚಲ್ಪಟ್ಟಿರತಕ್ಕದ್ದು.

ಕಾರ್ಯಸ್ಥಳಗಳು, ಶಾಲೆಗಳು, ಆಸ್ಪತ್ರೆಗಳು, ಗ್ರಂಥಾಲಯಗಳು, ಕ್ರೀಡಾ ಕೇಂದ್ರಗಳು, ರಂಗ ಸ್ಥಳಗಳು, ಮುಂತಾಗಿ ಯಾವುದೇ ಸಮಾಜದ ಎಲ್ಲ ಸಂಸ್ಥೆಗಳಲ್ಲೂ ಪ್ರಜಾಸತ್ತಾತ್ಮಕವಾಗಿ ಅಥವಾ ಪ್ರಜಾಸತ್ತಾತ್ಮಕ ನಿಯಂತ್ರಣದಡಿಯಲ್ಲಿ ಅಧಿಕಾರವು ನಿರ್ವಹಿಸಲ್ಪಡುತ್ತದೆ. ವಿಭಿನ್ನ ಸಂಸ್ಥೆಗಳ ಅಧಿಕಾರದ ನಿರ್ವಹಣೆ ಮತ್ತು ನಿಯಂತ್ರಣಗಳೂ ವಿಭಿನ್ನವಾಗಿರುತ್ತವೆ ಮತ್ತು ಇವುಗಳಿಗೆ ಸೂಕ್ತವೆನಿಸುವ ಸಮಂಜಸ ಆಡಳಿತ ವ್ಯವಸ್ಥೆಗಳೂ ಸಹ ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ಹೇಳುವ ಅಗತ್ಯವಿಲ್ಲ. ಕಾರ್ಯಸ್ಥಾನದಲ್ಲಿ ಸಮರ್ಪಕವಾದ ಆಡಳಿತ ವ್ಯವಸ್ಥೆಗಳ

ವಿಧವನ್ನು ಕುರಿತಂತೆ ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಅಧ್ಯಾಯ ಮೂರು, ನಾಲ್ಕು ಮತ್ತು ಐದರಲ್ಲಿ, ಶಿಕ್ಷಣದ ಕೆಲ ಔಪಚಾರಿಕ ಮತ್ತು ಅನೌಪಚಾರಿಕ ಅಂಶಗಳಲ್ಲಿ ಅಧಿಕಾರದ ನಿರ್ವಹಣೆ ಮತ್ತು ನಿಯಂತ್ರಣಗಳ ನಡೆಯನ್ನು ಪರಿಶೀಲಿಸಲಾಗುವುದು.

(iii) ಸಹಭಾಗಿ ಪ್ರಜಾಪ್ರಭುತ್ವದ ವ್ಯಾಪ್ತಿಯನ್ನು ಕುರಿತ ಈ ಕೊನೆಯ ಅಂಶಗಳು ವಾಸ್ತವವಾಗಿ, ವ್ಯಕ್ತಿಯ ಇಡೀ ಬದುಕನ್ನು "ರಾಜಕೀಯಗೊಳಿಸುತ್ತವೆ" ಎಂಬ ಆಕ್ಷೇಪಣೆಯನ್ನು ಉತ್ತೇಜಿಸಬಹುದು.

ಕೆಲವು ಜನರು ರಾಜಕೀಯದಲ್ಲಿ ಆಸಕ್ತರಲ್ಲ: ಅವರು ದಿನದ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಅಗತ್ಯವಿದ್ದಾಗ ಆಸ್ಪತ್ರೆಗಳಲ್ಲಿ ಶುಶ್ರೂಷೆ ಪಡೆದು, ತಮ್ಮ ವಿರಾಮ ವೇಳೆಯಲ್ಲಿ ಸಂತೋಷದಿಂದಿರುವುದು ಮುಂತಾದವುಗಳನ್ನು ಬಯಸುತ್ತಾರೆ ಎಂದು ವಾದಿಸಬಹುದು. ತಮ್ಮ ಕಾರ್ಖಾನೆ, ತಾವು ಶುಶ್ರೂಷೆಗೆ ತೆರಳುವ ಆಸ್ಪತ್ರೆ, ತಮ್ಮ ಸ್ಥಳೀಯ ಕ್ರೀಡಾ ಕೇಂದ್ರ, ಮುಂತಾದವುಗಳ ಪರಿಚಾಲನೆಯನ್ನು ಅವರು ಇಚ್ಛಿಸುವುದಿಲ್ಲ. ಇಂತಹ ಜನರಿಗೆ (ಬಹುಶಃ ನಮ್ಮಲ್ಲಿನ ಅನೇಕರು?) ಈ ವಿವಿಧ ಸಂಸ್ಥೆಗಳಲ್ಲಿ ಅಧಿಕಾರದ ನಿರ್ವಹಣೆ ಮತ್ತು ನಿಯಂತ್ರಣಗಳಲ್ಲಿ ಭಾಗವಹಿಸುವ ಕರ್ತವ್ಯವಿದೆಯೇ?

ಇಲ್ಲಿ ಮೂರು ಪ್ರಮುಖ ಅಂಶಗಳನ್ನು  ಮಂಡಿಸಬೇಕು.

ಮೊದಲಿಗೆ ನಾನು ವಾದಿಸಿದಂತೆ; ನ್ಯಾಯದ ಕಟ್ಟಲೆಗಳಿಂದ ಅಂತಿಮವಾಗಿ, ಯಾವುದೇ ಸಂಸ್ಥೆಯಲ್ಲಿನ ಅಧಿಕಾರವು ಪ್ರಜಾಸತ್ತಾತ್ಮಕ ನಿರ್ವಹಣೆ ಮತ್ತು ನಿಯಂತ್ರಣಕ್ಕೆ ಅಧೀನವಾಗಿರಬೇಕು ಎಂದು ಆಲೋಚಿಸಲು, ಆಧಾರಗಳಿವೆ. ರಾಜಕೀಯ ಕ್ಷೇತ್ರದ ನ್ಯಾಯಬದ್ಧವಲ್ಲದ ವಿಸ್ತರಣೆ ಎಂದು ಜನರಿಗೆ ಅನಿಸುವ ಸಂಗತಿಗಳ ಬಗೆಗಿನ ಅವರ ನಿರುತ್ಸಾಹ ಮತ್ತು ವೈಷಮ್ಯಗಳನ್ನು ಇದಕ್ಕೆ ವ್ಯತಿರಿಕ್ತವಾದ ವಾದವೆಂಬುದಾಗಿ ಪರಿಗಣಿಸಲಾಗದು. ಅದಕ್ಕಿಂತ ಮಿಗಿಲಾಗಿ ರಾಜಕೀಯ ಶಿಕ್ಷಣದ ಮೂಲಕ ಜನರನ್ನು ಅವರ ನೈತಿಕ ಹಕ್ಕುಗಳನ್ನು ಮತ್ತು ಇಲ್ಲಿ ಹೆಚ್ಚು ಯುಕ್ತವೆನಿಸುವ; ಅವರ ಮನಸ್ಸಿಗೆ ಹೊಳೆಯಲಿಲ್ಲವೆನಿಸಿದ ಅಥವಾ ಹೊಳೆದರೂ ಒಪ್ಪಿಕೊಳ್ಳಲು ವಿಮುಖರಾದ ನೈತಿಕ ಕರ್ತವ್ಯಗಳನ್ನು ಪ್ರಶಂಸಿಸುವಂತೆ ಮಾಡಬೇಕಾಗುತ್ತದೆ.

ನಿರೀಕ್ಷೆಯಂತೆ, ಎರಡನೆಯದಾಗಿ, ದ್ವಿತೀಯ ಅಧ್ಯಾಯದಲ್ಲಿ ಬರುವ ಚರ್ಚೆಯು ಹೀಗಿದೆ: ಅಧಿಕಾರದ ನಿರ್ವಹಣೆ ಮತ್ತು ನಿಯಂತ್ರಣವು ಎಲ್ಲ ಸಂಸ್ಥೆಗಳಲ್ಲೂ ಒಂದೇ ಸ್ವರೂಪ ಪಡೆದಿರುವುದಿಲ್ಲ. ತನ್ನ ಸದಸ್ಯರು ಮತ್ತು/ಅಥವ ಸಮುದಾಯದ ಆಸಕ್ತಿಗಳ ಮೇಲೆ ಪ್ರಭಾವವನ್ನು ಬೀರುವ ಸದೃಢ ಸಾಮರ್ಥ್ಯವುಳ್ಳ ಸಂಸ್ಥೆಗೆ ಅವಶ್ಯವಿರುವ ಆಡಳಿತ ವ್ಯವಸ್ಥೆಯು, ಸ್ಥಳೀಯ ಕ್ರೀಡಾ ಕೇಂದ್ರದಂತಹ ಕಡಿಮೆ ಅಧಿಕಾರವುಳ್ಳ ಸಂಸ್ಥೆಯನ್ನು ನಡೆಸಲು ಅವಶ್ಯವಿರುವ ಕಡಿಮೆ ಸಾಮರ್ಥ್ಯದ ಆಡಳಿತ ವ್ಯವಸ್ಥೆಗಿಂತಲೂ ಹೆಚ್ಚು ವಿಭಿನ್ನವಾಗಿರುತ್ತದೆ. ಆದ್ದರಿಂದ ಪ್ರತಿ ನಾಗರಿಕನೂ ತನಗೆ ಸಂಪರ್ಕವಿರುವ ಪ್ರತಿ ಸಂಸ್ಥೆಯ ಸಭೆಗಳಿಗೆ ಹಾಜರಾಗುವುದು ಮತ್ತು ಸಭಾಲೇಖನಗಳನ್ನು ಓದುವುದರಲ್ಲಿ ಮಗ್ನನಾಗಿರಬೇಕೆಂದು ಕಲ್ಪಿಸುವುದು ನಿಜಕ್ಕೂ ತಪ್ಪು ಹಾದಿಗೆಳೆಸಿದಂತೆ. ಈ ದೃಷ್ಟಿಯಲ್ಲಿ ಸಹಭಾಗಿ ಪ್ರಜಾಪ್ರಭುತ್ವವು ಒಂದು ಕೆಟ್ಟ ಒತ್ತಡಕ್ಕೊಳಗಾಗಿದೆ: ಆಡಳಿತ ವ್ಯವಸ್ಥೆಯ ನಿಶ್ಚಿತ ಪರಿಶೀಲನೆಗೆ ತೊಡಗಿಸಿಕೊಳ್ಳತಕ್ಕ ಪ್ರಕ್ರಿಯೆಗೆ, ಹೊಗೆ ತುಂಬಿದ ಕೋಣೆಗಳಲ್ಲಿ ಮುಗಿಯದ ಚರ್ಚೆಗಳ ಬಿಂಬವು ಪರ್ಯಾಯವಾಗಿದೆ. ಅದನ್ನು ಸಾಧ್ಯವಾಗಿಸಿದಾಗ, ನಾಗರಿಕ ವ್ಯಕ್ತಿಯ ಮೇಲೆ ನೌಕರಶಾಹಿಯ ಭಾರವು ದಬ್ಬಾಳಿಕೆಯಂತೆ ಕಾಣಲಾರದು.

ಮೂರನೆಯದಾಗಿ, ಹೊಣೆಗಾರಿಕೆಗಳು ಹಾಗೂ ಈ ಹೊಣೆಗಾರಿಕೆಗಳ ಹೊಣೆಗೆ ಪರಸ್ಪರ ಸಂಬಂಧವಿದೆ. ತನ್ನ ಸಕಲ ಸಾಮರ್ಥ್ಯವನ್ನೂ ನೈತಿಕ ಸಿದ್ಧಾಂತಗಳ ಕೆಲಸಗಳಿಗೆ ಸಮರ್ಪಿಸಬಯಸುವ ವ್ಯಕ್ತಿಗೆ, ತಾನು ಕೆಲಸ ಮಾಡುವ ಸ್ಥಳದ ನಿಭಾವಣೆ, ಸ್ಥಳೀಯ ವಾಸಿಗಳ ಸಂಘ ಮುಂತಾದುವುಗಳಲ್ಲಿನ ಅತ್ಯಂತ ಅಲ್ಪ ಪ್ರಮಾಣದ ತೊಡಗುವಿಕೆಯೂ ಕೂಡಾ, ದೈತ್ಯ ಪ್ರಮಾಣದ ಅತಿಕ್ರಮಣವೆಂಬಂತೆ ತೋರಬಹುದು. ಇಂತಹ ನಾಗರಿಕನ ಸ್ಥಾನವೇನು? ಇದು ಮೇಲ್ನೋಟಕ್ಕೆ, ಎರಡು ನೈತಿಕ ಕರ್ತವ್ಯಗಳ ನಡುವಿನ ಸಂಘರ್ಷವನ್ನು ಎದುರಿಸುವ ವ್ಯಕ್ತಿಯೊಬ್ಬನ ವಾಡಿಕೆಯ ಸಂಗತಿಯಾಗಿ ನನಗೆ ಕಾಣುತ್ತದೆ. ಯಾವುದೇ ನಿರ್ದಿಷ್ಟ ಸನ್ನಿವೇಶ ಅಥವ ನಿರ್ದಿಷ್ಟ ಕಾಲಾವಧಿಯಲ್ಲಿ, ಸಮಯ ಮತ್ತು ಸಾಮರ್ಥ್ಯಗಳ ಮೇಲೆ ಸ್ಪರ್ಧಾತ್ಮಕ ಹಕ್ಕುಸಾಧನೆಯ ಮೂಲಕ ತನ್ನ ಯಾವ ಕರ್ತವ್ಯಗಳು ಬೇರೆಯವುಗಳ ಮೇಲೆ ಪ್ರಾಧಾನ್ಯ ಹೊಂದುತ್ತವೆ ಎಂದು ನಿರ್ಧರಿಸುವುದು ಆಯಾ ನೈತಿಕ ವ್ಯಕ್ತಿಗಳಿಗೆ ಬಿಟ್ಟ ವಿಷಯವಾಗಿದೆ. ಹೀಗೆ ವ್ಯಕ್ತಿಯ ಯಾವುದೇ ನಿರ್ದಿಷ್ಟ ನಿರ್ಧಾರವು ಪರಿಚಿತ ನೈತಿಕ ವಿವೇಚನೆಗಳ ತಿಳುವಳಿಕೆಯಲ್ಲಿ ರೂಪುಗೊಂಡಿರುತ್ತದಲ್ಲದೆ, ಪರಿಚಿತ ಮಾರ್ಗಗಳಲ್ಲೇ ತೀವ್ರ ವಿಮರ್ಶೆಗೂ ಒಳಪಡಬಹುದಾಗಿರುತ್ತದೆ. ಉದಾಹರಣೆಗೆ; ವಿವೇಚನಾರಹಿತ, ಸ್ವಾರ್ಥಸಾಧಕ ಇತ್ಯಾದಿ. ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಯಾವುದೇ ವ್ಯಕ್ತಿಯು ತನ್ನ ನಿರ್ಧಾರಗಳನ್ನು ಕೈಗೊಳ್ಳುವ ನಿರ್ದಿಷ್ಟ ಮಾರ್ಗದ ಬಗ್ಗೆ ನನಗೆ ಆಸ್ಥೆಯಿಲ್ಲ. ಸಾಮಾನ್ಯವಾಗಿ, ನೈತಿಕ ಕಳಕಳಿಯು ಕಾರ್ಖಾನೆಯ ದ್ವಾರದ ಮತ್ತೊಂದು ಬದಿಯಲ್ಲಿ, ಕ್ರೀಡಾ ಕೇಂದ್ರದ ಹೊಸ್ತಿಲು ಇತ್ಯಾದಿಗಳಲ್ಲಿ ಕೊನೆಗೊಳ್ಳುತ್ತವೆ ಎಂದು ನೈತಿಕ ಮಧ್ಯವರ್ತಿಯಾದ ನಾಗರಿಕನು ನಿರ್ಧಾರಿಸಲಾಗದು ಎನ್ನುವುದನ್ನು ನಾನು ಒತ್ತಿಹೇಳಲು ಬಯಸುತ್ತೇನೆ. ವಿವೇಚನಾಶೀಲ ನೈತಿಕ ವ್ಯಕ್ತಿಯಾಗಿ ತಾನು ತೊಡಗಿರುವ ಸಂಸ್ಥೆಗಳ ಕುರಿತಾಗಿ ಕನಿಷ್ಠ ರಾಜಕೀಯ ಅರಿವನ್ನು ಹೊಂದಿರಬೇಕಲ್ಲದೆ, ಯೋಗ್ಯತೆಯನ್ನು ನಿರ್ಣಯಿಸಲು ಸಿದ್ಧನಿರಬೇಕು. ಉದಾಹರಣೆಗೆ, ತನ್ನ ಕಾರ್ಯಸ್ಥಳದಲ್ಲಿನ ಕರ್ತವ್ಯವು ಇತರೆಲ್ಲವುಗಳಿಗಿಂತಲೂ ಹೆಚ್ಚಿನ ಆದ್ಯತೆಯನ್ನು ಪಡೆಯಬಹುದೆನ್ನುವ ಸಾಧ್ಯತೆಯನ್ನು ಮೊದಲೇ ಅಲ್ಲಗಳೆಯಲಾಗದು. ಜನರು, ನಮ್ಮ 'ದಿನದ ಕೆಲಸದಲ್ಲಿ' ನಾವು ಪ್ರಾಮಾಣಿಕವಾಗಿ ತೊಡಗಿರುತ್ತೇವೆ, ಬೇರೆಯವರು ರಾಜಕೀಯದ ಜೊತೆ ಸಾಗಲಿ ಎಂಬ ಶಾಶ್ವತ ನಿರ್ಣಯವನ್ನು ಕೈಗೊಳ್ಳುವಂತಿಲ್ಲ. ಏಕೆಂದರೆ, ಗಂಭೀರವಾದ ಅನ್ಯಾಯವನ್ನು ತಡೆಯಲು ಮಾಡಲೇಬೇಕಾದದ್ದನ್ನು ಮಾಡದಿರುವ ಅಪಾಯವನ್ನು ಅವರು ಎದುರಿಸಬೇಕಾಗುತ್ತದೆ.

ಆದ್ದರಿಂದ ಸಾಮಾನ್ಯವಾಗಿ, ಪ್ರಸಂಗೋಚಿತ ಸಂಸ್ಥೆಗಳ ಅಧಿಕಾರದ ನಿರ್ವಹಣೆ ಮತ್ತು ನಿಯಂತ್ರಣದಲ್ಲಿ ಭಾಗವಹಿಸಬೇಕಾದ ಒಂದು ಕರ್ತವ್ಯವಿದೆ. ಅದು ನಿರುಪಾಧಿಕವಾದದ್ದೇನಲ್ಲ. ಏಕೆಂದರೆ, ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಅದು ಬೇರೊಂದು ಹೆಚ್ಚು ಒತ್ತಡದ ಪ್ರಸಂಗವನ್ನು ಅತಿಕ್ರಮಿಸುತ್ತಿದೆಯೇ ಎಂಬುದನ್ನು ನಿರ್ಧರಿಸಲು ನಾಗರಿಕರಿಗೆ ಮುಕ್ತ ಅವಕಾಶವಿದೆ. ಆದರೆ ಅದು ಮೇಲ್ನೋಟಕ್ಕೆ ಕಾಣುವ ಕರ್ತವ್ಯ.

## ಅಧಿಕಾರ

ಈ ಅಧ್ಯಾಯದಲ್ಲಿ ನಾನು ಅಧಿಕಾರದ ನಿರ್ವಹಣೆ ಅಥವಾ ನಿಯಂತ್ರಣದ ಬಗೆಗೆ ಮತ್ತೆ ಮತ್ತೆ ಉಲ್ಲೇಖಿಸಿದ್ದೇನೆ. ಇದು ಈ ಪ್ರಬಂಧದ ಪ್ರಮುಖ ವಿಚಾರವಾಗಿದ್ದು, ನಾನು ಇದರಿಂದ ಏನನ್ನು ಅರ್ಥಮಾಡಿಕೊಂಡಿದ್ದೇನೆ ಎಂಬುದನ್ನೀಗ ಬಹಿರಂಗಪಡಿಸುತ್ತೇನೆ. ನಾವು ಗಮನಿಸಿದಂತೆ, ಅಧಿಕಾರದ ವಿವಿಧ ಪರಿಕಲ್ಪನೆಗಳು; ವಿವಿಧ

ರಾಜಕೀಯ ವ್ಯವಸ್ಥೆಗಳ ಮತ್ತು ಅವುಗಳಿಗೆ ಸಂಬಂಧಿಸಿದ ಶಿಕ್ಷಣ ವ್ಯವಸ್ಥೆಗಳ ನೈತಿಕ ಸ್ವೀಕೃತಿಯ ಮೇಲೆ ವಿವಿಧ ಪರಿಣಾಮಗಳನ್ನು ಬೀರುವುದರಿಂದಾಗಿ, ಅಧಿಕಾರದ ಪರಿಕಲ್ಪನೆಯು ಪ್ರಮುಖವಾಗುತ್ತದೆ.

ಈ ವಿಭಾಗದಲ್ಲಿ ನಾನು, ಸ್ಟೀವನ್ ಲೂಕ್ಸ್ ಅವರ ಪವರ್: ಎ ರ್‍ಯಾಡಿಕಲ್ ವ್ಯೂ ಎಂಬ ಪುಸ್ತಕದಲ್ಲಿನ ಅಧಿಕಾರದ ವಿವಿಧ ಪರಿಕಲ್ಪನೆಗಳ ವಿವರಗಳನ್ನು ನಿಕಟವಾಗಿ ಅನುಸರಿಸುತ್ತೇನೆ. ಅವರ ಈ ಪುಸ್ತಕದಲ್ಲಿ '...ಗೆ ಅಧಿಕಾರ' ಎಂಬ ಅಧಿಕಾರದ ಸಾಮರ್ಥ್ಯ ಅಥವಾ ಶಕ್ತಿಯನ್ನು ಕುರಿತ ಪರಿಕಲ್ಪನೆಗೆ ಬದಲಾಗಿ, '...ಮೇಲಿನ ಅಧಿಕಾರ' ಎಂಬ ಅಧಿಕಾರದ ಸಂಬಂಧಗಳ ಬಗ್ಗೆ ಲೂಕ್ಸ್ ಅವರು ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಲೂಕ್ಸ್ ಅವರು, ಅಧಿಕಾರದ ಪರಿಕಲ್ಪನೆಯ ಮೂರು ಅಭಿಪ್ರಾಯಗಳನ್ನು ಚರ್ಚಿಸುತ್ತಾರೆ. ಅವರು, ಈ ಮೂರೂ ಅಭಿಪ್ರಾಯಗಳನ್ನೂ ಅಧಿಕಾರದ ಪರಿಕಲ್ಪನೆಯ ಒಂದೇ ತಳಪಾಯ ಹೊಂದಿರುವ ಪರ್ಯಾಯ ನೋಟಗಳಾಗಿ ಕಾಣುತ್ತಾರೆ. ತಳಪಾಯದಲ್ಲಿನ ಪರಿಕಲ್ಪನೆಯ ಪ್ರಕಾರ, 'ಬಿ' ಯ ಆಸಕ್ತಿಗಳಿಗೆ ವಿರೋಧವಾಗಿ 'ಬಿ' ಯ ಮೇಲೆ 'ಏ' ಯು ಪರಿಣಾಮ ಬೀರಿದರೆ, 'ಏ' ಯು 'ಬಿ' ಯ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾನೆ ಎಂದಾಗುತ್ತದೆ. ಎಲ್ಲಿಯವರೆಗೆ ಒಬ್ಬ ವ್ಯಕ್ತಿ ಮತ್ತೊಬ್ಬನ ಮೇಲೆ ಬೀರುವ ಪರಿಣಾಮಕಾರಿ ಪ್ರಭಾವವು, ಆಸಕ್ತಿಗಳ ಸಂಘರ್ಷವನ್ನು ಒಳಗೊಂಡಿರುವುದಿಲ್ಲವೋ ಅದು ಅಧಿಕಾರ ಚಲಾವಣೆಯ ದೃಷ್ಟಾಂತವಾಗುವುದಿಲ್ಲ, ಅದೊಂದು ರೀತಿಯ ಪ್ರಭಾವ ಬೀರುವಿಕೆಯಷ್ಟೇ.

ಲೂಕ್ಸ್ ಚರ್ಚಿಸುವ ಮೊದಲ ವ್ಯಾಖ್ಯಾನವು, ಅಮೆರಿಕದ ಬಹುತ್ವವಾದಿಗಳ ಅದರಲ್ಲೂ ಪ್ರಧಾನವಾಗಿ ಆರ್. ಎ. ರಾಲನ ಚಿಂತನೆಗಳಾಗಿವೆ. ಇದು, ವಿವಿಧ ಕಾರ್ಯನೀತಿಯ ಆದ್ಯತೆಗಳ ಆಸಕ್ತಿಗಳಲ್ಲಿ ಸಂಘರ್ಷವನ್ನೊಳಗೊಂಡಿರುವ ಪ್ರಕರಣಗಳನ್ನು ನಿರ್ಧಾರ ಮಾಡುವುದರ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಸರ್ಕಾರ ಮತ್ತು ಕಾರ್ಮಿಕ ಸಂಘಗಳ ನಡುವಿನ ಸಂಘರ್ಷವು ಅಧಿಕಾರದ ನಿರ್ವಹಣೆಯನ್ನು ಕುರಿತ ಈ ಅಭಿಪ್ರಾಯಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಇಲ್ಲಿನ ಪ್ರತಿಯೊಬ್ಬರೂ ವಿಭಿನ್ನ ಕಾರ್ಯನೀತಿಗಳ ಪರವಾಗಿದ್ದು, ಒಂದು ಪಕ್ಷದವರ ಮೇಲೆ ಮತ್ತೊಂದು ಪಕ್ಷದವರು ಹೇರುವ ನಿರ್ಬಂಧಗಳ ಬೆದರಿಕೆಯಿಂದಾಗಿ ಅವರು ಆಯ್ದುಕೊಂಡ ಕಾರ್ಯನೀತಿಗಳನ್ನು ಕೈಬಿಡುವಂತೆ ಪ್ರೇರೇಪಿಸಲಾಗುತ್ತದೆ.

ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೂ ಇದು ಚಾಲ್ತಿಯಲ್ಲಿರುತ್ತದೆಂಬುದೇನೋ ಸರಿಯೇ. ಇದು ವಾಸ್ತವ ಪ್ರಪಂಚದಲ್ಲಿ ಅಧಿಕಾರ ನಿರ್ವಹಣೆಯ ಎಲ್ಲ ಪ್ರಮುಖ ದೃಷ್ಟಾಂತಗಳನ್ನು ಗ್ರಹಿಸುವ ಕೆಲಸವನ್ನು ಕೂಡಾ ನಿರ್ವಹಿಸುವುದಿಲ್ಲ.

ಬ್ಯಾಚ್ರಾಕ್ ಮತ್ತು ಬರಾಟ್ಜ್ ಅವರಿಂದ ಪ್ರತಿನಿಧಿಸಲ್ಪಟ್ಟ ಎರಡನೆಯ ಅಭಿಪ್ರಾಯವು; ಮೊದಲನೆಯ ಅಭಿಪ್ರಾಯವನ್ನು ಸರಿಪಡಿಸುವಂಥದ್ದು. ನಿರ್ಧಾರವನ್ನು ತೆಗೆದುಕೊಳ್ಳುವಂತೆಯೇ ನಿರ್ಧಾರಗಳನ್ನು ತೆಗೆದುಕೊಳ್ಳದಿರುವುದರಲ್ಲೂ ಇವರು ಆಸಕ್ತರು. ನಿರ್ಧಾರವೆಂದರೆ "ಪರ್ಯಾಯ ರೀತಿಯ ಕ್ರಿಯೆಗಳಲ್ಲಿ ಒಂದರ ಆಯ್ಕೆ" (ಬ್ಯಾಚ್ರಾಕ್ ಮತ್ತು ಬರಾಟ್ಜ್, 1970, ಪು. 39); "ಯಾವ ನಿರ್ಧಾರಗಳು, ನಿರ್ಧಾರವನ್ನು ಮಾಡುವವನ ಆಸಕ್ತಿ ಮತ್ತು ಮೌಲ್ಯಗಳಿಗೆ ಒಡ್ಡುವ ಸುಪ್ತ ಅಥವ ವ್ಯಕ್ತ ಸವಾಲುಗಳನ್ನು ಹತ್ತಿಕ್ಕುತ್ತವೆಯೋ ಅಥವ ಭಂಗಪಡಿಸುತ್ತವೆಯೋ ಅಂತಹ ನಿರ್ಧಾರಗಳನ್ನು ಅನಿರ್ಧಾರಗಳೆನ್ನುತ್ತಾರೆ (ಬ್ಯಾಚ್ರಾಕ್ ಮತ್ತು ಬರಾಟ್ಜ್, 1970, ಪು. 44). ಅನಿರ್ಧಾರ ಕ್ರಿಯೆ ಎಂದರೆ,

ಸಮುದಾಯದಲ್ಲಿ ಅಸ್ತಿತ್ವದಲ್ಲಿರುವ ಲಾಭಗಳು ಮತ್ತು ವಿಶೇಷ ಸೌಲಭ್ಯಗಳ ಬದಲಾವಣೆಯ ಕೋರಿಕೆಗಳನ್ನು ಅವು ಧ್ವನಿತವಾಗುವ ಮೊದಲೇ; ಅಥವ ಆಂತರಂಗಿಕವಾಗಿರುವಾಗಲೇ; ಅಥವ ನಿರ್ಧಾರವನ್ನು ಕೈಗೊಳ್ಳುವ ಪ್ರಸಂಗೋಚಿತ ವೇದಿಕೆಗೆ ತಲುಪುವ ಮೊದಲೇ; ಅದರ ಉಸಿರುಗಟ್ಟಿಸುವ, ಅಥವ ಈ ಎಲ್ಲದರಲ್ಲೂ ಅಸಫಲವಾದರೆ ಕಾರ್ಯನೀತಿಯ ನಿರ್ವಹಣೆಯ ಹಂತದಲ್ಲಿ, ದುರ್ಬಲಗೊಳಿಸುವ ಅಥವಾ ನಾಶಮಾಡುವ ವಿಧಾನ (ಬ್ಯಾಚ್ರಾಕ್ ಮತ್ತು ಬರಾಟ್ಜ್,1970, ಪು. 44).

ಆದ್ದರಿಂದ ಬ್ಯಾಚ್ರಾಕ್ ಮತ್ತು ಬರಾಟ್ಜರಿಗೆ, ಅನಿರ್ಧಾರದ ಪ್ರಕ್ರಿಯೆಯು, ಯಾವ ಸಂಗತಿಗಳಿಗೆ ಅವು ಯಥಾರ್ಥಗೊಳ್ಳದಂತೆ ತಡೆಯೊಡ್ಡುತ್ತದೆಯೋ ಅಂತಹ ಸಂಭಾವ್ಯ ಸಂಗತಿಗಳನ್ನು ಗುರುತಿಸುವುದು ಪ್ರಮುಖವಾಗುತ್ತದೆ. ಈ ನಿಲುವಿನಿಂದಾಗಿ ಅವರು, ಒಂದು ರಾಜಕೀಯ ವಿವಾದಾಂಶವು, ರಾಜಕೀಯ ವರ್ಗದ ಪ್ರಮುಖ ವಿಭಾಗದ ಗಮನ ಸೆಳೆಯುವವರೆಗೆ ಅದು ಅಸ್ತಿತ್ವದಲ್ಲಿದೆ ಎಂದು ಹೇಳುವುದು ಕಠಿಣ ಎಂಬ ದಾಲನ ದೃಷ್ಟಿಕೋನವನ್ನು ದೃಢವಾಗಿ ತಿರಸ್ಕರಿಸುತ್ತಾರೆ. (ದಾಲ್, 1961, ಪು. 14). ಪ್ರಮುಖ ರಾಜಕೀಯ ವಿವಾದಾಂಶಗಳನ್ನು ಗುರುತಿಸುವ ಸಮಸ್ಯೆಯ ನಿರ್ವಹಣೆಯು ಅವರಿಗೇ ವಹಿಸಲ್ಪಟ್ಟಿದೆ. 'ಅಧಿಕಾರದ ಮೂಲ ಅಥವ ಪ್ರಸಕ್ತ ವ್ಯವಸ್ಥೆಯಲ್ಲಿ ಕಾರ್ಯನೀತಿಗಳ ಉತ್ಪನ್ನ ಪ್ರಕ್ರಿಯೆಗಳನ್ನು ನಿರ್ಣಯಿಸುವಲ್ಲಿ ಪ್ರಧಾನರಾದವರ ಪ್ರಾಧಿಕಾರಗಳಿಗೆ ಒಡ್ಡಲಾದ ನೈಜ ಸವಾಲನ್ನು ಒಳಗೊಂಡ ಸಂಗತಿ' ಎಂಬ ನಿಟ್ಟಿನಲ್ಲಿ, ಪ್ರಧಾನ ವಿವಾದಾಂಶವಾಗಿ ಪರಿಗಣಿಸಿ, ಅವರು ಇದನ್ನು ಬಗೆಹರಿಸುತ್ತಾರೆ. (ಬ್ಯಾಚ್ರಾಕ್ ಮತ್ತು ಬರಾಟ್ಜ್, 1970, ಪುಟಗಳು. 47–8). ಬ್ಯಾಚ್ರಾಕ್ ಮತ್ತು ಬರಾಟ್ಜ್, ನಿರ್ಧಾರ ಮತ್ತು ಅನಿರ್ಧಾರದ ಪ್ರಕ್ರಿಯೆಗಳೆರಡರ ಮೇಲೂ ತಮ್ಮ ಗಮನವನ್ನು ಕೇಂದ್ರೀಕರಿಸುತ್ತ, ಮೊದಲ ಅಭಿಪ್ರಾಯವನ್ನು ಕುರಿತಂತೆ ಮುನ್ನಡೆಯನ್ನು ಸಾಧಿಸುತ್ತಾರೆ. ಆದರೆ ಅವರೂ ಕೂಡಾ ಮೊದಲ ಅಭಿಪ್ರಾಯ ಸೂಚಕರಂತೆ, ಅನಿರ್ಧಾರದ ಪ್ರಕ್ರಿಯೆಯಲ್ಲಿನ ಅಧಿಕಾರ ನಿರ್ವಹಣೆಯ, ನೈಜ ಹಾಗೂ ಗೋಚರಿತ ಸಂಘರ್ಷಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಾರೆ. 'ಯಾವುದೇ ಪ್ರತ್ಯಕ್ಷ ಅಥವ ಅಪ್ರತ್ಯಕ್ಷ ಸಂಘರ್ಷಗಳಿಲ್ಲದಿದ್ದಲ್ಲಿ, ಮೌಲ್ಯವಿತರಣೆಯ ಬಗೆಗೆ ಬಹುಜನ ಸಮ್ಮತಿಯಿದೆ ಎಂಬ ಪೂರ್ವಕಲ್ಪನೆಯಿದ್ದು, ಆಗ ಅನಿರ್ಧಾರವನ್ನು ಕೈಗೊಳ್ಳುವುದು ಅಸಾಧ್ಯವಾಗುತ್ತದೆ ಎಂದು ಅವರು ಹೇಳುತ್ತಾರೆ (ಬ್ಯಾಚ್ರಾಕ್ ಮತ್ತು ಬರಾಟ್ಜ್, 1970, ಪು. 49). ಅವರು ಅಗತ್ಯವಾದ ಸಂಘರ್ಷ ಎಂದು ಪರಿಗಣಿಸುವುದು; ಒಂದು ರಾಜಕೀಯ ವ್ಯವಸ್ಥೆಯಲ್ಲಿ, ಅನಿರ್ಧಾರ ಕೈಗೊಳ್ಳುವುದರಲ್ಲಿ ನಿರತರಾದವರ ಆಸಕ್ತಿಗಳು ಮತ್ತು ಅವರು ಅಹವಾಲಿನ ಅವಕಾಶಗಳಿಂದ ಹೊರಗಿಡುವ ಜನರ ಆಸಕ್ತಿಗಳ ನಡುವಿನ ಸಂಘರ್ಷವನ್ನು. ನಂತರದ ಆಸಕ್ತಿಗಳು 'ಸಂಶೋಧಕನಿಗೆ ವಿಫಲ ಸ್ವರೂಪದಲ್ಲಿ ಕಾಣಸಿಗುತ್ತವೆ' ಎಂದು ಅವರು ಅಧಿಕಾರಯುತವಾಗಿ ಪ್ರತಿಪಾದಿಸುತ್ತಾರೆ (ಬ್ಯಾಚ್ರಾಕ್ ಮತ್ತು ಬರಾಟ್ಜ್, 1970, ಪು. 49). ಆದ್ದರಿಂದ ಎರಡನೆಯ ದೃಷ್ಟಿಕೋನವು; ವ್ಯಕ್ತ ಕಾರ್ಯನೀತಿಯ ಆದ್ಯತೆಗಳು ಮತ್ತು ಉಪ–ರಾಜಕೀಯ ಬೇಗುದಿಗಳನ್ನು ಒಳಗೊಂಡಂತೆ ವ್ಯಕ್ತವಾಗುವ ಆಸಕ್ತಿಗಳ ಸಂಘರ್ಷಗಳನ್ನು ಕುರಿತ, ರಾಜಕೀಯ ಸಂಗತಿಗಳ ಬಗೆಗೆ, ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ತಡೆಯುವ ಮಾರ್ಗಗಳ ಪರಿಶೀಲನೆಗೆ ಅವಕಾಶ ಮಾಡಿಕೊಡುತ್ತದೆ.

ಎರಡನೆಯ ಅಭಿಪ್ರಾಯವು; ಅಧಿಕಾರದ ಸಂಬಂಧಗಳ ವಿಶ್ಲೇಷಣೆಯನ್ನು ಒಳಗೊಳ್ಳುವಲ್ಲಿ, ರಾಜಕೀಯದ ಕಾರ್ಯಕ್ರಮ ಪಟ್ಟಿಯ ಮೇಲಿನ ನಿಯಂತ್ರಣದ ಪ್ರಶ್ನೆಯಲ್ಲಿ ಮತ್ತು ಸಬಲ ಸಂಗತಿಗಳನ್ನು ರಾಜಕೀಯ ಪ್ರಕ್ರಿಯೆಯಿಂದ ಹೊರಗಿಡುವಲ್ಲಿ, ನಿಶ್ಚಿತವಾಗಿಯೂ ಮೊದಲನೆಯ ಅಭಿಪ್ರಾಯಕ್ಕಿಂತಲೂ ಹೆಚ್ಚು ಉತ್ತಮವಾಗಿದ್ದರೂ,

ಅಧಿಕಾರದ ನಿರ್ವಹಣೆಯ ಪ್ರಮುಖ ಸಂಗತಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ಸೋತಿದೆ. ಲೂಕ್ಸನ ಪ್ರಕಾರ ಅದು ಮೂರು ರೀತಿಗಳಲ್ಲಿ ಅಸಮರ್ಪಕವಾಗಿದೆ. ಮೊದಲನೆಯದಾಗಿ, ನಿರ್ಧಾರಗಳ ಮೇಲೆ ಬೆಳಕು ಚೆಲ್ಲುವಲ್ಲಿ ಮತ್ತು ಸಬಲ ಸಂಗತಿಗಳನ್ನು ರಾಜಕೀಯ ಕಾರ್ಯಕ್ರಮಪಟ್ಟಿಯಿಂದ ಹೊರಗುಳಿಸುವುದರಿಂದ ಹಿಡಿದು, ಅವನ್ನು ನಿಗ್ರಹಿಸುವುದು ಮುಂತಾಗಿ, ಗುಂಪುಗಳು ಮತ್ತು ಸಂಸ್ಥೆಗಳು ಸಬಲ ಸಂಗತಿಗಳನ್ನು ಹೊರಗಿಡುವುದರಲ್ಲಿ ಹೇಗೆ ಯಶಸ್ವಿಯಾಗುತ್ತವೆಂಬ ಬಗ್ಗೆ, ಕೇವಲ ಭಾಗಶಃ ಚಿತ್ರಣವನ್ನಷ್ಟೇ ಅದು ಒದಗಿಸುತ್ತದೆ. ವಾಸ್ತವಿಕವಾಗಿ, 'ರಾಜಕೀಯ ಕಾರ್ಯಪಟ್ಟಿಯನ್ನು ನಿಯಂತ್ರಿಸುವ ಅಧಿಕಾರ ಮತ್ತು ಸಬಲ ಸಂಗತಿಗಳನ್ನು ಹೊರಗಿಡುವುದನ್ನು, ಸಮಷ್ಟಿ ಬಲಗಳ ಮತ್ತು ಸಾಮಾಜಿಕ ವ್ಯವಸ್ಥೆಗಳ ಕಾರ್ಯವೆಂದು ಪರಿಗಣಿಸದ ಹೊರತು, ಅವನ್ನು ಸಮರ್ಪಕವಾಗಿ ವಿಶ್ಲೇಷಿಸಲು ಸಾಧ್ಯವಿಲ್ಲ. (ಲೂಕ್ಸ್, 1974, ಪು. 22). "ಪೂರ್ವಗ್ರಹಗಳನ್ನು ಸಜ್ಜುಗೊಳಿಸುವಿಕೆ" ಎಂಬ ಶಾಟ್ಸ್ನೀಡರರ (Schattschneider) ಸುಪರಿಚಿತ ನುಡಿಗಟ್ಟು; ಸಂಘಟನೆಯ ಸ್ವರೂಪದಿಂದ, ವ್ಯಕ್ತಿಯ ನಿಷ್ಕ್ರಿಯತೆಯಲ್ಲಿ ಪ್ರದರ್ಶಿಸಲ್ಪಡಬಹುದಾದ, ಸಂಸ್ಥೆಗಳಲ್ಲಿ ಸಾಮಾಜಿಕವಾಗಿ ರಚಿಸಲ್ಪಟ್ಟ ಮತ್ತು ಸಾಂಸ್ಕೃತಿಕವಾಗಿ ವಿನ್ಯಾಸಗೊಂಡ ರೂಢಿಗಳಿಂದ ಫಲಿತವಾಗುತ್ತದೆ. ಸಂಸ್ಥೆಗಳು ವ್ಯಕ್ತಿಗಳಿಂದಲೇ ರಚಿತವಾಗಿವೆಯೆಂಬುದು ನಿಜವಾದರೂ, ಅವುಗಳು ನಿರ್ವಹಿಸುವ ಅಧಿಕಾರವನ್ನು ವ್ಯಕ್ತಿನಿರ್ಧಾರಗಳಾಗಿ ಪರಿಗಣಿಸುವುದು ಸಾಧ್ಯವಿಲ್ಲ. ಅಧ್ಯಾಯ ಮೂರರಲ್ಲಿ ಶೈಕ್ಷಣಿಕ ಸಂಸ್ಥೆಗಳ ಸಂಘಟನೆಯ ಬಗೆಗಿನ ವಿವರಗಳಿಗೆ ಸರಣಿಯಲ್ಲಿ ಬಂದಾಗ, ನಾವು ಅಧಿಕಾರದ ಈ ನಿರೂಪಣೆಯ ಪ್ರಾಮುಖ್ಯತೆಯನ್ನು ಪರಿಶೀಲಿಸುತ್ತೇವೆ.

ಎರಡನೆಯದಾಗಿ, ಗೋಚರ ಸಂಘರ್ಷಗಳಿಲ್ಲದಿರುವಲ್ಲಿಯೂ, ಸಂಘರ್ಷದ ನಿಷ್ಫಲ ಸ್ವರೂಪದಲ್ಲೂ, ಅಧಿಕಾರದ ನಿರ್ವಹಣೆ ಇರುವುದಿಲ್ಲ ಎಂದು ಊಹಿಸುವಲ್ಲಿ, ಬ್ಯಾಚ್ರಾಕ್ ಮತ್ತು ಬರಾಟ್ಜ್, ದೂರಗಾಮಿ ಪರಿಣಾಮಗಳ ಬಗೆಗೆ ದೊಡ್ಡ ತಪ್ಪೆಸಗಿದ್ದಾರೆ. ಸಂಘರ್ಷಗಳ ಅನುಪಸ್ಥಿತಿಯಲ್ಲೂ ಅಧಿಕಾರ ನಿರ್ವಹಿಸಬಹುದು ಎನ್ನುವುದು ಸ್ಪಷ್ಟ, ಇದು, ಬಹುಶಃ ಅತ್ಯಂತ ಯಶಸ್ವಿ ಅಧಿಕಾರ ನಿರ್ವಹಣೆಯೂ ಹೌದು. 'ಬಿ' ಮಾಡಲು ಇಚ್ಛಿಸದೇ ಇರುವುದನ್ನು 'ಬಿ' ಮಾಡುವಂತೆ, 'ಎ'ಯು 'ಬಿ'ಯ ಮೇಲೆ ಅಧಿಕಾರ ಚಲಾಯಿಸಬಹುದು, ಆದರೆ ಅವನು 'ಬಿ'ಯನ್ನು ನಿಯಂತ್ರಿಸಿ, ಆಕಾರನೀಡಿ, 'ಬಿ'ಯ ಇಚ್ಛೆಗಳನ್ನೇ ನಿರ್ಧರಿಸುವುದರಿಂದ, 'ಬಿ'ಯು ಏನನ್ನು ಇಚ್ಛಿಸಬೇಕೆಂದು 'ಎ' ಬಯಸುತ್ತಾನೋ ಅದನ್ನೇ ಆತನೂ ಇಚ್ಛಿಸುವಂತೆ, ಅಧಿಕಾರ ಚಲಾಯಿಸಬಹುದು. ಅತ್ಯಂತ ಸುರಕ್ಷಿತ ಆಳುವ ಗಣ್ಯರು; ಆಳ್ವಿಕೆಗೆ ಒಳಗಾದವರು, ಆಳುವ ಗಣ್ಯರ ಮತ್ತು ಸ್ವತಃ ಆಳಿಸಿಕೊಳ್ಳುವ ತಮ್ಮ ಪಾತ್ರವನ್ನು ನ್ಯಾಯಯುತ ವ್ಯವಸ್ಥೆ ಎಂದು ಒಪ್ಪಿಕೊಳ್ಳುವ ಸಂದರ್ಭಗಳಲ್ಲಿರುವವರಾಗಿರುತ್ತಾರೆ. ಆದ್ದರಿಂದ ಸರ್ಕಾರದ ನಿರ್ಬಂಧಗಳಿಗೆ, ಗುಪ್ತ ಕಾವಲು ಮತ್ತು ತತ್ಸಂಬಂಧಿತ ಸಾಧನ ಸಾಮಗ್ರಿಗಳು ಅನಗತ್ಯ. ಅಧಿಕಾರದ ಅತ್ಯಂತ ಜಯಶಾಲೀ ನಮೂನೆಗಳು ಸಂಘರ್ಷಗಳನ್ನು ಒಳಗೊಳ್ಳದಿರುವುದಕ್ಕಿಂತ, ಆ ಸಂಘರ್ಷಗಳು ಮೂಡದಂತೆ ತಡೆಯುವುದರ ಮೂಲಕ ಯಾವುದೇ ಪ್ರಮಾಣದ ಗಣನೀಯ ಅಧಿಕಾರವು ಸಾಧ್ಯವಾಗತಕ್ಕದ್ದು.

ಮೂರನೆಯ ತಪ್ಪು ಎರಡನೆಯ ತಪ್ಪಿಗೆ ನಿಕಟವಾಗಿ ಸಂಬಂಧಿಸಿದೆ. ಜನರಿಗೆ ಯಾವುದೇ ಅಸಮಾಧಾನವಿಲ್ಲದಿದ್ದಲ್ಲಿ, ಅವರ ಯಾವ ಹಿತಾಸಕ್ತಿಗಳೂ ಅಧಿಕಾರ ಚಲಾವಣೆಯಿಂದ ತೊಂದರೆಗೊಳಗಾಗಿರುವುದಿಲ್ಲ ಎಂಬುದು ಪೂರ್ವಕಲ್ಪನೆ. ಅಲ್ಲದೆ, ಅಧಿಕಾರದ ಸರ್ವೋಚ್ಚ ಅಧಿಕಾರದ ನಿರ್ವಹಣೆಯು; ಜನರ ಆಕಾಂಕ್ಷೆಗಳು, ಪ್ರಪಂಚದ ಬಗ್ಗೆ

ಮತ್ತು ಅದರಲ್ಲಿನ ಅವರ ಸ್ಥಾನದ ಬಗೆಗಿನ ಗ್ರಹಿಕೆಗಳನ್ನು ರೂಪುಗೊಳಿಸಿ, ಜನರು ಅಸಮಾಧಾನಗೊಳ್ಳುವುದನ್ನು ತಡೆಯುತ್ತದೆ. ಬೇಗುದಿಗಳ ಅನುಪಸ್ಥಿತಿಯನ್ನು; ಮೌಲ್ಯಗಳ ಮತ್ತು ಸಂಪತ್ತಿನ ಹಂಚಿಕೆಯ ಮೇಲಿನ ಅಸಲೀ ಒಮ್ಮತ ಎಂದು ಊಹಿಸುವುದು ಒಮ್ಮತದಲ್ಲಿನ ಕೈವಾಡದ ಸಾಧ್ಯತೆಯನ್ನು ಕಡೆಗಣಿಸಿದಂತೆ.

ಲೂಕ್ಸ್ ಅವರಿಂದ ವಿಕಾಸಗೊಂಡ ಅಧಿಕಾರದ ಮೂರನೆಯ ದೃಷ್ಟಿಕೋನವು ಎರಡನೆಯದರ ಆಧಾರದ ಮೇಲೆ ರೂಪುಗೊಂಡಿದ್ದು, ಅದನ್ನು ಗಮನಾರ್ಹವಾಗಿ ವಿಸ್ತರಿಸಲಾಗಿದೆ. ವ್ಯಕ್ತಿಯ ನಿರ್ಧಾರದಿಂದಲೇ ಆಗಲಿ ಅಥವಾ ಅದಕ್ಕಿಂತ ಹೆಚ್ಚಾಗಿ ರಾಜಕೀಯ ಸಂಘಟನೆ ಮತ್ತು ಸಾಂಸ್ಥಿಕ ರೂಢಿಗಳಿಂದಾಗಲೀ, ಅದು ಸಬಲ ಸಂಗತಿಗಳನ್ನು ರಾಜಕೀಯದಿಂದ ದೂರವಿಡುವ ಅನೇಕ ದಾರಿಗಳಿಗೆ ಅನುವು ಮಾಡಿಕೊಡುತ್ತದೆ. ಯಶಸ್ವಿಯಾಗಿ ತಪ್ಪಿಸಿರಬಹುದಾದ ಗೋಚರ ಸಂಘರ್ಷದ ಅನುಪಸ್ಥಿತಿಯಲ್ಲೂ ಇದು ಉಂಟಾಗಬಹುದೆಂಬುದಕ್ಕು ಸಹ ಇದು ಆಸ್ಪದವೀಯುತ್ತದೆ. ಹೇಗಿದ್ದರೂ, ಅಧಿಕಾರ ಚಲಾಯಿಸುವವರ ಆಸಕ್ತಿಗಳು ಮತ್ತು ಅವರು ಹೊರತುಪಡಿಸಿದವರ 'ನೈಜ ಆಸಕ್ತಿಗಳ' ನಡುವೆ ಯಾವಾಗಲೂ ವಾಸ್ತವೀಕರಿಸಲಾಗದ ಒಂದು ಪ್ರಬಲ ಸಂಘರ್ಷವಿರಬಹುದು.

ಅಧಿಕಾರದ ಪರಿಕಲ್ಪನೆಯ ಬಗೆಗೆ ನಿಸ್ಸಂದಿಗ್ಧ ಆಕ್ಷೇಪಣೆಗಳನ್ನು ಮಂಡಿಸಿ, ಅವನ್ನು ವಿಸ್ತರಿಸಿ, ಅವಕ್ಕೆ ಉತ್ತರಿಸುವ ಲೂಕ್ಸ್ ಅವರ ನಿರೂಪಣೆಯನ್ನು ಕುರಿತು ಮೂರು ಸಂಗತಿಗಳನ್ನು ಗಮನಿಸಬೇಕು.

(i) ಮೊದಲನೆಯದಾಗಿ, ಜನತೆ ಮತ್ತು ಅವರ ಇಚ್ಚೆಗಳನ್ನು ವಾಸ್ತವಿಕವಾಗಿ ಇರುವಂತೆಯೇ ಗ್ರಹಿಸುವ ಅಧಿಕಾರದ ವಿಶ್ಲೇಷಣೆಯನ್ನು ಲೂಕ್ಸ್ ತಿರಸ್ಕರಿಸುತ್ತಾರೆ. ನಾನು ಮೇಲೆ ಸೂಚಿಸಿದಂತೆ, 'ಇಚ್ಚೆ'ಗಳನ್ನು ರೂಪಿಸುವಲ್ಲಿ ಕೈವಾಡವಿರಬಹುದು. ಬಹುತೇಕ ಅಧಿಕಾರ ನಿರ್ವಹಣೆಯಲ್ಲಿ ನಡೆಯುತ್ತಿರುವುದೇ ಹೀಗೆ ಎಂದು ಕರಾರುವಾಕ್ಕಾಗಿ ಹೇಳಬಹುದು. ಅದೇನೇ ಇರಲಿ, 'ಎ' ಏನು ಮಾಡುತ್ತಿದ್ದಾನೋ ಅದು 'ಬಿ'ಯ ಇಚ್ಚೆಗಳಿಗೆ ವ್ಯತಿರಿಕ್ತವಲ್ಲದಿರಬಹುದು. ಆದರೆ ಅದು ಅಧಿಕಾರದ ಚಲಾವಣೆಯಾಗಿರಬಹುದು ಅಥವ ಮುಂಚಿನ ಅಧಿಕಾರ ಚಲಾವಣೆಯನ್ನು ಆಧರಿಸಿದ್ದೂ ಆಗಿರಬಹುದು. ಆದ್ದರಿಂದ ಲೂಕ್ಸ್ ಅವರು, 'ನೈಜ ಆಸಕ್ತಿಗಳ' ಕಲ್ಪನೆಯನ್ನು ಪರಿಚಯಿಸುತ್ತಾರೆ. 'ಎ'ಯು 'ಬಿ' ಯ ಮೇಲೆ ಅಧಿಕಾರವನ್ನು ಚಲಾಯಿಸಿದಾಗ; 'ಬಿ' ಯ ಇಚ್ಚೆಗಳಿಗೆ ವಿರುದ್ಧವಲ್ಲದಿದ್ದರೂ 'ಬಿ' ಯ ನೈಜ ಆಸಕ್ತಿಗಳಿಗೆ ವ್ಯತಿರಿಕ್ತವಾಗಿ ಪರಿಣಾಮವುಂತಾದಲ್ಲಿ, 'ಎ'ಯು 'ಬಿ'ಯ ಮೇಲೆ ಮೇಲೆ ಅಧಿಕಾರ ಚಲಾಯಿಸುತ್ತಾನೆ ಎಂದಾಗುತ್ತದೆ. ಆತನು ಸ್ವಾಯತ್ತ ಸ್ಥಿತಿಯಲ್ಲಿದ್ದು, ಆಯ್ಕೆಯ ಅವಕಾಶಗಳಿದ್ದಲ್ಲಿ, 'ಬಿ' ಯಾವುದನ್ನು ಆಯ್ಕೆಮಾಡಿಕೊಳ್ಳಲು ಅಥವ ಆದ್ಯತೆ ನೀಡಲು ಬಯಸುತ್ತಿದ್ದನೋ ಅದೇ ಆತನ 'ನೈಜ ಆಸಕ್ತಿ.' ಸ್ವಾಯತ್ತತೆಯ ಸ್ವರೂಪ ಮತ್ತು ಕರಾರುಗಳು ಸತ್ವಶಾಲಿಯಾದ ಚರ್ಚೆಯಿಂದ ಸಮರ್ಥಿಸಲ್ಪಡಬೇಕೆಂದು ತಿಳಿಸುವ ಲೂಕ್ಸ್, ತಮ್ಮ ಇಂಡಿವಿಜ್ಯುಅಲಿಸಂನಲ್ಲಿ (1973) ಈ ಚರ್ಚೆಯು ಪ್ರಾರಂಭಗೊಂಡಿರುವುದನ್ನು ಉಲ್ಲೇಖಿಸುತ್ತಾರೆ. ಈ ಪ್ರಸ್ತುತ ಪ್ರಬಂಧವು, ಸ್ವಾಯತ್ತತೆಯ ಕುರಿತು ಆಧಾರಭೂತ ಚರ್ಚೆ ಮಾಡದಿದ್ದರೂ, ಸಾಧ್ಯವಾದಷ್ಟು ಮಟ್ಟಿನ ಸ್ವಾಯತ್ತ ಬದುಕನ್ನು ನಡೆಸಲು ಅವಶ್ಯವಿರುವ ಸಾಮಾಜಿಕ ಸಂರಚನೆಯ (ಅಧ್ಯಾಯ 2) ಹಾಗೂ ಸ್ವಾಯತ್ತತೆಯ ಅಭಿವೃದ್ಧಿಗೆ ಅಗತ್ಯವಾದ ಶೈಕ್ಷಣಿಕ ಸ್ಥಿತಿಗಳ ರೂಪರೇಖೆಯನ್ನು ನೀಡಲು ಪ್ರಯತ್ನಿಸುತ್ತದೆ. (ಅಧ್ಯಾಯಗಳು 3, 4 ಮತ್ತು 5). ಈ ಚರ್ಚೆಗಳು; ಇಚ್ಚೆ ಮತ್ತು 'ನೈಜ ಆಸಕ್ತಿಗಳ' ನಡುವಿನ ಲೂಕ್ಸ್ ಅವರು ಬಯಸುವ ರೀತಿಯ ವ್ಯತ್ಯಾಸಗಳಿಗೆ ಸಮರ್ಥನೆಯನ್ನು ಕೊಡಬಹುದೆಂದು ನಾನು ನಂಬುತ್ತೇನೆ. ಏಕೆಂದರೆ ಕೆಲವು ಅಧಿಕಾರದ ವಿಶ್ಲೇಷಣೆಗೆ ಇಂತಹ ವ್ಯತ್ಯಾಸಗಳು ಅತ್ಯಗತ್ಯ.

(ii) ಆದಾಗ್ಯೂ, ಲೂಕ್ಸನು ತನ್ನ ವಿಶ್ಲೇಷಣೆಯಲ್ಲಿ, ಅಧಿಕಾರ ಚಲಾಯಿಸುವುದು ಎಂದರೆ ವ್ಯಕ್ತಿಯನ್ನು ಅವನ ಆಸಕ್ತಿಗೆ ವ್ಯತಿರಿಕ್ತವಾಗಿ ಪ್ರಭಾವಗೊಳಿಸುವುದು ಎಂದು ತಿಳಿಸಲಿಚ್ಛಿಸಿದಲ್ಲಿ; 'ಬಿ' ಯ ನೈಜ ಆಸಕ್ತಿಯನ್ನು ಆಧರಿಸಿ 'ಎ'ಯು 'ಬಿ'ಯ ಮೇಲೆ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ ಎಂದು ಇದರ ಅರ್ಥವೇ? ಹಾಗಾದರೆ, ಇದು ಅಧಿಕಾರ ಚಲಾವಣೆಯ ಸಾಂಪ್ರದಾಯಿಕ ಪ್ರಸಂಗಗಳನ್ನು ತಳ್ಳಿಹಾಕುವಂತೆ ತೋರುತ್ತದೆ. ಉದಾಹರಣೆಗೆ ಕುಡುಕನಿಂದ ಚಾಕುವನ್ನು ಕಸಿದುಕೊಳ್ಳುವುದು, ಅಜಾಗರೂಕ ವ್ಯಕ್ತಿಯನ್ನು ಶಿಥಿಲಗೊಂಡ ಸೇತುವೆಯಿಂದ ಎಳೆದು ಹಾಕುವುದು, ಮಗುವನ್ನು ಕೀಟನಾಶಕ ಕುಡಿಯುವುದರಿಂದ ತಡೆಯುವುದು, ಮುಂತಾದುವು. ಲೂಕ್ಸನು ನಿಶ್ಚಿತವಾಗಿಯೂ ಅಂತಹ ಪ್ರಸಂಗಗಳನ್ನು (ಲೂಕ್ಸ್, 1974, ಪು. 33) 'ವ್ಯಕ್ತಿ ನಿಷ್ಠ ಆಸಕ್ತಿಗಳ' ಗೋಚರ ಸಂಘರ್ಷವನ್ನೊಳಗೊಂಡ 'ಅಲ್ಪಾವಧಿಯ ಅಧಿಕಾರ' ಎಂಬುದಾಗಿ ಗುರುತಿಸುತ್ತಾನೆ. ಹೇಗಾದರಾಗಲಿ, ಯಾವಾಗ 'ಬಿ'ಯು, ತನ್ನ 'ನೈಜ ಆಸಕ್ತಿ'ಗಳನ್ನು (ಮೇಲೆ ತಿಳಿಸಲಾದ ಮೂರು ನೇರ ಪ್ರಸಂಗಗಳು ಅಸ್ತಿತ್ವದಲ್ಲಿದ್ದಲ್ಲಿ) ಗುರುತಿಸುತ್ತಾನೆಯೋ, ಆಗ ಸಂಘರ್ಷ ಮತ್ತದರ ಜೊತೆಗೆ ಅಧಿಕಾರ – ಸಂಬಂಧವೂ ಕೊನೆಗೊಳ್ಳುತ್ತದೆ. ತನ್ನ ಸ್ವಾಯತ್ತ ಆಯ್ಕೆಯನ್ನು ನಿರ್ವಹಿಸಲು ಸಮರ್ಥನಾದ 'ಬಿ'ಯ ನೈಜ ಆಸಕ್ತಿಗಳನ್ನು 'ಎ' ಗುರುತಿಸತಕ್ಕದ್ದಲ್ಲ. ಅದು 'ಬಿ'ಗೇ ಬಿಟ್ಟದ್ದು ಎನ್ನುವುದು ಪೈತೃಕ ನೀತಿಯ ವಿರುದ್ಧ ನೀಡಲಾದ ರಕ್ಷಣೆಯೇ ಹೌದು.

(iii) ವಾಸ್ತವಿಕ ಜಗತ್ತಿಗೆ ಈ ವಿಶ್ಲೇಷಣೆಯನ್ನು ಅನ್ವಯಿಸುವಾಗ ಲೂಕ್ಸ್ ಅವರಿಗೆ ನೈಜ ಸಮಸ್ಯೆಯು ಎದುರಾಗುತ್ತದೆ. 'ಎ' ಏನನ್ನೂ ಮಾಡುವುದಿಲ್ಲ ಮತ್ತು 'ಬಿ'ಯ ಜೊತೆಗೆ ಯಾವ ಗೋಚರ ಸಂಘರ್ಷವೂ ಇಲ್ಲ ಎಂಬಂತಹ ಪ್ರಮುಖ ಪ್ರಸಂಗಗಳಲ್ಲಿ ಅಧಿಕಾರದ ನಿರ್ವಹಣೆಯನ್ನು ಗುರುತಿಸುವುದು ಹೇಗೆ? ಒಂದು ಅಪ್ರಸಂಗವನ್ನು ಅಧ್ಯಯನ ಮಾಡುವುದಾದರೂ ಹೇಗೆ? ಪ್ರಾಯೋಗಿಕವಾಗಿ ಇಂತಹ ಅಧಿಕಾರ ನಿರ್ವಹಣೆಗಳನ್ನು ಗುರುತಿಸುವಲ್ಲಿನ ಕ್ಲಿಷ್ಟತೆಯಿಂದಾಗಿ, ಅನೇಕ ಸಂಶೋಧಕರು ನೈಜವಾದ ಗೋಚರ ಸಂಘರ್ಷಗಳಿರುವ ಅಧಿಕಾರ ನಿರ್ವಹಣೆಗಳ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರೆಂದು ಲೂಕ್ಸ್ ತಿಳಿಸುತ್ತಾರೆ. ಅಪ್ರಾಸಂಗಿಕ ಪ್ರಸಂಗಗಳಲ್ಲಿ ಕೂಡಾ ಪ್ರಯೋಗಿಕವಾಗಿ ಸಮರ್ಥಿಸುವ ಮತ್ತು ನಿರಾಕರಿಸುವ ಪ್ರಾಕಲ್ಪನೆಗಳನ್ನು ರಚಿಸಲು ಸಾಧ್ಯವೆಂದು ಅವರು ವಾದಿಸುತ್ತಾರೆ. ಅದು ಸುಲಭವಲ್ಲವಾದರೂ, ತಾತ್ವಿಕವಾಗಿ ಅದರ ಸಾಧ್ಯತೆಯಿದೆ. 'ಬಿ'ಯು ಬೇರೆ ರೀತಿಯ ಆಲೋಚನೆ ಹಾಗೂ ಕ್ರಿಯೆಯಲ್ಲಿ ತೊಡಗುತ್ತಿದ್ದ ಎನ್ನುವ ತನ್ನ ನಿರೀಕ್ಷೆಯನ್ನು (ಎ) ಸಮರ್ಥಿಸತಕ್ಕದ್ದು. 'ಎ' ಯಾವ ರೀತಿಯಲ್ಲಿ 'ಬಿ'ಯನ್ನು ತಡೆದಿದ್ದಾನೆ ಅಥವಾ 'ಬಿ' ಹಾಗೆ ಮಾಡುವುದನ್ನು ತಡೆಯುವ ರೀತಿಯಲ್ಲಿ ವರ್ತಿಸಿದ್ದಾನೆ ಎಂಬುದನ್ನು 'ಬಿ' ನಿರ್ದಿಷ್ಟವಾಗಿ ಖಚಿತಪಡಿಸುವ ಅಗತ್ಯವಿದೆ.

ವಾಯುಮಾಲಿನ್ಯದ ಸಂಗತಿಯನ್ನು, ಅಮೇರಿಕಾದ ಕೆಲ ನಗರಗಳಲ್ಲಿ ಬೇರೆ ನಗರಗಳಿಗಿಂತ ಮೊದಲೇ ಅಥವಾ ಪರಿಣಾಮಕಾರಿಯಾಗಿ ಕೈಗೆತ್ತಿಕೊಳ್ಳಲಿಲ್ಲವೇಕೆ ಎಂದು ಪ್ರಶ್ನಿಸುವ ಪ್ರಾಯೋಗಿಕ ಅಧ್ಯಯನವೊಂದನ್ನು ಲೂಕ್ಸ್ ತಿಳಿಸುತ್ತಾರೆ (ಕ್ರೆನ್ಸನ್, 1971). ಲೂಕ್ಸ್ ಅವರನ್ನು ಉದ್ಧರಿಸುವುದಾದರೆ:

ಕ್ರೆನ್ಸನ್ ಅವರ ವಿಶ್ಲೇಷಣೆ ಮೇಲ್ಕಾಣಿಸಿದ ಎರಡೂ ಅಗತ್ಯಗಳನ್ನು ಪೂರೈಸುವುದರಿಂದಾಗಿ, ಪ್ರಭಾವಶಾಲಿಯಾಗಿದೆ. ಎಲ್ಲಿ ಜನತೆ ತಮ್ಮ ಆದ್ಯತೆಯನ್ನು ಸ್ಪಷ್ಟವಾಗಿ ತಿಳಿಸುವುದೂ ಇಲ್ಲವೋ, ಅಲ್ಲಿ ಬೇರೆಲ್ಲ ಅಂಶಗಳು ಸಮಾನವಾಗಿದ್ದಾಗ ಜನರನ್ನು

ಮಾಲಿನ್ಯಕ್ಕೊಳಪಡಿಸಲಾಗುವುದಿಲ್ಲ (ಮಾಲಿನ್ಯ ನಿಯಂತ್ರಣವೆಂದರೆ ನಿರುದ್ಯೋಗವೆಂಬ ನಿರ್ದಿಷ್ಟ ಅರ್ಥವೇ ಇರಬೇಕೆಂದಿಲ್ಲ ಎನ್ನುವ ಪೂರ್ವಕಲ್ಪನೆಯೊಂದಿಗೆ) ಎಂದು ನಿರೀಕ್ಷಿಸಲು ಉತ್ತಮ ಕಾರಣವಿದೆ; ಯು.ಎಸ್. ಸ್ಟೀಲ್, ತನ್ನ ನಿಷ್ಕ್ರಿಯತೆಯ ಮೂಲಕ ನಾಗರಿಕರ ವಿಷಪ್ರಾಶನಕ್ಕೊಳಗಾಗದಿರುವ ಆಸಕ್ತಿಗಳ ಹಕ್ಕನ್ನು ತಡೆಹಿಡಿಯಿತು (ಪೂರ್ಣತರ ವಿವರಣೆಗೆ ಸಾಂಸ್ಥಿಕ ಮತ್ತು ತಾತ್ವಿಕ ವಿಷಯಗಳ ಸಂಪೂರ್ಣ ವಿವರಣೆಯ ಅಗತ್ಯವಿದೆಯಾದರೂ) ಎನ್ನುವುದನ್ನು ತಿಳಿಸುವ ಮೂಲಕ ಸಾಮಾನ್ಯವಾಗಿ ಸಂಸ್ಥೆಗಳು ಅನುಸರಿಸುವ ಮಾರ್ಗಗಳ ಬಗೆಗೆ ಕಠಿಣ ಸಾಕ್ಷಿಗಳನ್ನು ನೀಡಲಾಗಿದೆ. ಹೀಗೆ ಅಧಿಕಾರ ಯಂತ್ರದ ಗುರುತಿಸುವಿಕೆ ಮತ್ತು ಪರ–ವಿರೋಧ ವಾದಗಳನ್ನು ಸಮರ್ಥಿಸಲಾಗಿದೆ (ಲೂಕ್ಸ್, 1974, ಪು. 45).

ಸಮಾಜದಲ್ಲಿ, ಸುಪ್ತ ಸಂಘರ್ಷಗಳನ್ನು ನಿಗ್ರಹಿಸುವ ಪ್ರಸಂಗಗಳನ್ನು ಗುರುತಿಸುವಲ್ಲಿನ ತೊಡಕುಗಳನ್ನು ಲೂಕ್ಸ್ ಅವಲೋಕಿಸುತ್ತಾರಾದರೂ, ಅವು ವಿನಾಶಕಾರಿಗಳೆಂಬುದನ್ನು ಅಲ್ಲಗಳೆಯುತ್ತಾರೆ.

ಯಾವುದೇ ವ್ಯಕ್ತಿ, ಅಥವ ಗುಂಪು ಅಥವ ಸಂಸ್ಥೆಯ ಅಧಿಕಾರ ಚಲಾವಣೆಯು ಸದಾ ಆಕ್ಷೇಪಣಾರ್ಹವಷ್ಟೇ ಅಲ್ಲ ವಿಷಾದನೀಯವೂ ಹೌದು. ಇದು ಯಾವಾಗಲೂ ಒಬ್ಬ ವ್ಯಕ್ತಿಯನ್ನು ಅವನ/ಅವಳ ಆಸಕ್ತಿಗೆ ವ್ಯತಿರಿಕ್ತವಾಗಿ ಪ್ರಭಾವಿಸುವುದನ್ನು ಒಳಗೊಂಡಿರುತ್ತದೆ. ಅಧಿಕಾರ ಸಂಬಂಧಗಳನ್ನು ಮಾನವನ ಬದುಕಿನಿಂದ ಸಂಪೂರ್ಣವಾಗಿ ತ್ಯಜಿಸಿದಲ್ಲಿ ಅದು ಆದರ್ಶಪೂರ್ಣವೇ ಸರಿ. ಆದರೆ ಅದು ಅಸಂಭವನೀಯ. ಲೂಕ್ಸ್ 'ಅಲ್ಪಾವಧಿ ಅಧಿಕಾರ' ಎಂದು ಹೆಸರಿಸುವ ಶಿಶುಗಳು ಮತ್ತು ಮಕ್ಕಳ ಮೇಲೆ ಚಲಾಯಿಸುವ ಆಧಿಕಾರದ ಸಂಕೀರ್ಣತೆಯನ್ನು ಕೈಬಿಟ್ಟರೂ, ಮೌಲ್ಯಗಳು ಮತ್ತು ವಯಸ್ಕರ ನಡುವಿನ ಸಂಪತ್ತುಗಳ ಹಂಚಿಕೆಯನ್ನು ಕುರಿತಂತೆ ಸಂಪೂರ್ಣ ಸಹಮತದ ಅನುಪಸ್ಥಿತಿಯಿಂದಾಗಿ;  ಕೆಲವು ಜನರು, ಅವರ ಆಸಕ್ತಿಗಳಿಗೆ (ಅಥವ ಅವರ ಕೆಲವು ಆಸಕ್ತಿಗಳಿಗೆ) ವ್ಯತಿರಿಕ್ತವಾಗಿ ಸಂಸ್ಥೆಗಳು ಮತ್ತು ಕಾರ್ಯನೀತಿಗಳಿಂದ ಕೆಲವೊಮ್ಮೆ ಪ್ರಭಾವಿತರಾಗುತ್ತಾರೆ.

ಅಧಿಕಾರ ಸಂಬಂಧಗಳನ್ನು ಮಾನವ ಜೀವನದಿಂದ ತೊಡೆದುಹಾಕುವುದು ಅಸಾಧ್ಯ. ಆದರೆ ಬೇರೆ ಬೇರೆ ಸಮಾಜ ವ್ಯವಸ್ಥೆಗಳಲ್ಲಿ ಅವು ಹೆಚ್ಚು ಅಥವಾ ಕಡಿಮೆ ಮಟ್ಟದಲ್ಲಿರಬಹುದು. ಪ್ರಜಾಪ್ರಭುತ್ವದಲ್ಲಿನ ಅಧಿಕಾರ ಚಲಾವಣೆಯು; ಇತರೆ ರಾಜಕೀಯ ವ್ಯವಸ್ಥೆಗಳಿಗಿಂತ ಕಡಿಮೆಯಿರುತ್ತದೆಂಬುದನ್ನು ಈ ಪ್ರಬಂಧದದಲ್ಲಿ ಪ್ರತಿಪಾದಿಸಲಾಗಿದೆ.

ನಾನು ಮೂಲತಃ ಎರಡು ನೆಲೆಗಳಿಂದ ಇದನ್ನು ಪ್ರತಿಪಾದಿಸುತ್ತೇನೆ.

(i) ಪ್ರಜಾಪ್ರಭುತ್ವದಲ್ಲಿ, ಅಂದರೆ ಸಹಭಾಗಿ ಪ್ರಜಾಪ್ರಭುತ್ವದಲ್ಲಿ; ಜನರು ತಮ್ಮ ಆಸಕ್ತ ವಿಷಯಗಳ ಮೇಲೆ ತಾವೇ ಹೆಚ್ಚಿನ ನಿಯಂತ್ರಣವನ್ನು ಹೊಂದಿರುತ್ತಾರೆ. ವ್ಯಕ್ತಿಗಳು; ರಾಜಕೀಯ ಕಾರ್ಯಕ್ಷೇತ್ರ, ತಮ್ಮ ಕಾರ್ಯಸ್ಥಳಗಳು, ಕ್ರೀಡಾ ಕೇಂದ್ರಗಳು, ಶಾಲೆಗಳು, ಆಸ್ಪತ್ರೆ ಇತ್ಯಾದಿಗಳ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸಿದಲ್ಲಿ ಅಥವ ನಿರ್ಣಯಗಳನ್ನು ಕೈಗೊಳ್ಳುವವರ ಮೇಲೆ ಹಿಡಿತವಿದ್ದಲ್ಲಿ, ಅವರ ಆಸಕ್ತಿಗಳನ್ನು ಸಲೀಸಾಗಿ ನಿರ್ಲಕ್ಷಿಸುವ ಅಥವಾ ಅವುಗಳನ್ನು ತಪ್ಪಾಗಿ ಗ್ರಹಿಸಲಾಗಿದೆ ಎಂದು ತಳ್ಳಿಹಾಕುವ ಸಾಧ್ಯತೆಗಳು ಕಡಿಮೆ. ಇದು ಜಾನ್ ಸ್ಟುವರ್ಟ ಮಿಲ್ಲರ ವಾದವೂ ಹೌದು. ಜನರು ತಮ್ಮ ಆಸಕ್ತಿ ಮತ್ತು ಹಕ್ಕುಗಳನ್ನು ಸಾಧಿಸಲು ಸಮರ್ಥರಿದ್ದು, ಸ್ವಭಾವತಃ ಅದನ್ನು ಬಗೆಹರಿಸಬಲ್ಲವರಾಗಿದ್ದಾರೆ (ಮಿಲ್, 1910, ಪು. 208). ಆಳುವ ಗಣ್ಯರು ಈ ಆಸಕ್ತಿಗಳನ್ನು ಕಡೆಗಣಿಸಲಾಗುವುದಿಲ್ಲ ಅಥವ ಅದನ್ನು ಇತರೆ ದೃಷ್ಟಿಕೋನದಿಂದ ಅವರು ನೋಡುವುದೂ ಇಲ್ಲ. ನನಗೆ ನನ್ನ ಕಾರ್ಯಸ್ಥಳದಲ್ಲಿನ ವ್ಯವಸ್ಥೆಗಳ ಮೇಲೆ ನಿಯಂತ್ರಣವಿದ್ದಲ್ಲಿ; ನನ್ನ ಮೇಲ್ವಿಚಾರಕ ಅಥವಾ ನಿರ್ವಾಹಕ ಅಥವಾ ಮೇಲಧಿಕಾರಿ ಪ್ರಾಯಶಃ ನನ್ನ ಗಮನಕ್ಕೆ

ತರದೇ, ನನ್ನ ಆಸಕ್ತಿಯ ವ್ಯತಿರಿಕ್ತವಾಗಿ, ಉದ್ದೇಶರಹಿತವಾಗಿ ನನ್ನ ಮೇಲೆ ಅಧಿಕಾರ ಚಲಾಯಿಸಿ ವ್ಯವಸ್ಥೆಗಳನ್ನು ತಮ್ಮ ಆಸಕ್ತಿಗನುಗುಣವಾಗಿ ನಿರ್ವಹಿಸುವ ಸಾಧ್ಯತೆಗಿಂತಲೂ, ನನ್ನ ಆಸಕ್ತಿಯ ರೀತಿಯಲ್ಲೇ ವ್ಯವಸ್ಥೆಗಳನ್ನು ರೂಪಿಸುವ ಸಾಧ್ಯತೆಗಳೇ ಹೆಚ್ಚು.

ಆದಾಗ್ಯೂ, ಈ ಅಂಶವನ್ನು ನಿಶ್ಚಿತವಾಗಿಯೂ ಪ್ರಶ್ನಿಸಬಹುದು. ವ್ಯಕ್ತಿಗಳು ಪ್ರಜಾಪ್ರಭುತ್ವದಲ್ಲಿಯೂ ಇನ್ನಿತರ ರಾಜಕೀಯ ವ್ಯವಸ್ಥೆಗಳಂತೆಯೆ ಅಧಿಕಾರ ಚಲಾವಣೆಗೆ ಒಳಗಾಗುತ್ತಾರೆ ಎಂದು ವಾದಿಸಬಹುದು. ತಮ್ಮ ಅಸಕ್ತಿಗಳಿಗೆ ವ್ಯತಿರಿಕ್ತವೆಂದು ಅನಿಸಿದಾಗ್ಯೂ ಅವರು ಭಾಗವಹಿಸಲೇಬೇಕಾಗುತ್ತದೆ. ಭಾಗವಹಿಸುವಿಕೆ ಸರ್ವವ್ಯಾಪಕವಾದುದರಿಂದ ಅವರ ಮೇಲಿರುವ ಒಳಗೊಳ್ಳುವ ಒತ್ತಡಗಳಿಂದ ತಪ್ಪಿಸಿಕೊಳ್ಳುವುದು ಕಠಿಣ. ದಬ್ಬಾಳಿಕೆಯ ನಿರಂಕುಶ ಪ್ರಭುತ್ವದಲ್ಲಿ ಅಗತ್ಯ ಬಿದ್ದಾಗ ಕೆಳ ತಗ್ಗಿಯೋ, ನೌಕರ ಶಾಹಿಯನ್ನು ಗೊಂದಲಕ್ಕೀಡು ಮಾಡಿಯೋ, ತಪ್ಪಿಸಿಕೊಳ್ಳುವುದು ನಿಜವಾಗಿಯೂ ಸುಲಭ. ಇಂತಹ ಆಕ್ಷೇಪಣೆಯನ್ನು ಮಾಡುವುದು ಈ ಮೊದಲು 'ಭಾಗವಹಿಸುವ ಕರ್ತವ್ಯ' ಎನ್ನುವಲ್ಲಿ ತಿಳಿಸಲಾದ ಅಂಶಗಳನ್ನು ನಿರ್ಲಕ್ಷಿಸಿದಂತೆ. (ಮೇಲೆ ನೋಡಿ: 17ನೆಯ ಹಾಗೂ ನಂತರದ ಪುಟ) ನಾನು ಆ ವಿಷಯಗಳನ್ನು ಮತ್ತೊಮ್ಮೆ ವಿವರವಾಗಿ ಪುನರಾವರ್ತಿಸದಿದ್ದರೂ, ಇಲ್ಲಿ ಮುಂದುವರಿಸಿದ ಅಧಿಕಾರದ ವಿಶ್ಲೇಷಣೆಯನ್ನು ಅಲ್ಲಿನ ಎರಡು ವಿಷಯಗಳಿಗೆ ಸಂಪರ್ಕಿಸಬೇಕು. ಮೊದಲನೆಯದಾಗಿ ನಂಬಿಕೆಯುಳ್ಳ ಪ್ರಜಾಪ್ರಭುತ್ವವಾದಿಗಳು ಅಧಿಕಾರ ನಿರ್ವಹಣೆಯಲ್ಲಿ ಭಾಗವಹಿಸುವಿಕೆಯನ್ನು ಸಾಮಾನ್ಯವಾಗಿ ಅವರ ಆಸಕ್ತಿಗಳಿಗೆ ವ್ಯತಿರಿಕ್ತವೆಂದು ಭಾವಿಸುವುದಿಲ್ಲ, ಏಕೆಂದರೆ ಅವರು ಇಲ್ಲಿ ಪ್ರಸ್ತುತಪಡಿಸಲಾಗಿರುವಂತೆ, ತಮ್ಮ ಸ್ವಂತದ ಮತ್ತು ಇತರರ ಸಮರ್ಥ ಸ್ವಾಯತ್ತ ಆಯ್ಕೆಗಳ ಸಮಾನ ಪ್ರೋತ್ಸಾಹದಲ್ಲಿ ತೀವ್ರ ಆಸಕ್ತಿಗಳನ್ನು ಹೊಂದಿರುತ್ತಾರೆ. [ತಮ್ಮ ಆಸಕ್ತಿಗಳ ಬಗ್ಗೆ ಸಾಮಾನ್ಯವಾಗಿ ಬೇರೆಯೇ ದೃಷ್ಟಿಕೋನವುಳ್ಳವರು, ಅಂದರೆ, ಯಾರು ತಮ್ಮ ಬದುಕನ್ನು ಸಂಪೂರ್ಣವಾಗಿ ಆಧ್ಯಾತ್ಮಿಕ ಅಸ್ತಿತ್ವವೊಂದು ನಿರ್ದೇಶಿಸುತ್ತಿದೆ ಎಂಬುದಾಗಿ ಭಾವಿಸುತ್ತಾರೋ ಅವರು, ಇಲ್ಲಿ ಸ್ಥೂಲವಾಗಿ ವಿವರಿಸಲ್ಪಟ್ಟ ಅರ್ಥದಲ್ಲಿ ಪ್ರಜಾಪ್ರಭುತ್ವದ ನಾಗರಿಕರಲ್ಲವೆಂಬುದು ಸುಸ್ಪಷ್ಟ. ಅವರು ಪ್ರಾಯಶಃ ಯಾವುದೋ ಧರ್ಮ ಸಾಮ್ರಾಜ್ಯ ಪ್ರತಿಷ್ಠಾಪಿಸಲು ಗುಂಪುಗೂಡುವವರು.] ಎರಡನೆಯದಾಗಿ, ಪ್ರಜಾಪ್ರಭುತ್ವ ನಾಗರಿಕನ ಸ್ವಾಯತ್ತತೆಯ ಆಸಕ್ತಿ ಬೇರೆ ಆಸಕ್ತಿಗಳ ಜೊತೆ ಸಂಘರ್ಷಿಸುತ್ತಿರುವವರೆಗೆ, ಅಥವಾ ಒಂದು ಕ್ಷೇತ್ರದಲ್ಲಿ ಸ್ವಾಯತ್ತತೆಯ ನಿರ್ವಹಣೆಯು ಮತ್ತೊಂದು ಕ್ಷೇತ್ರದಲ್ಲಿನ ಸ್ವಾಯತ್ತತೆಯ ನಿರ್ವಹಣೆಯೊಂದಿಗೆ ಸಂಘರ್ಷಿಸುತ್ತಿರುವವರೆಗೆ, ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ವ್ಯಕ್ತಿಯು ತನ್ನ ಕರ್ತವ್ಯ ಎಲ್ಲಿದೆ ಎನ್ನುವುದನ್ನು ತಾನೇ ನಿರ್ಧರಿಸಲು ಮುಕ್ತನಾಗಿರುತ್ತಾನೆ (ಹೋಲಿಸಿ ನೋಡಿ: ಎಥಿಕ್ಸ್ ಪುಸ್ತಕದಲ್ಲಿನ ಲೇಖಕನ ಪ್ರಸಂಗ ಮತ್ತು ಕರ್ತವ್ಯಗಳ ಸಂಘರ್ಷ). ಜನರು ತಮ್ಮ ಆಸಕ್ತಿಗಳಿಗೆ ವ್ಯತಿರಿಕ್ತವಾಗಿ ಭಾಗವಹಿಸಲು ಒತ್ತಾಯಿಸಲ್ಪಡುತ್ತಾರೆ ಎಂಬ ಆಕ್ಷೇಪಣೆಯನ್ನು; ಪ್ರಜಾಪ್ರಭುತ್ವವು ತನ್ನ ನಾಗರಿಕರ ಮೇಲೆ, ಬೇರೆಲ್ಲಾ ರಾಜಕೀಯ ವ್ಯವಸ್ಥೆಗಳಷ್ಟೇ ಅಥವ ಅದಕ್ಕಿಂತಲೂ ಅಧಿಕವಾದ ಅಧಿಕಾರವನ್ನು ಚಲಾಯಿಸುತ್ತದೆ ಎನ್ನುವ ಪ್ರಕರಣವನ್ನು ಸಮರ್ಥಿಸಲು ಮಂಡಿಸಲಾಗದು..

(ii) ಜನರ ಇಚ್ಛೆಗಳನ್ನು ಅವರ ಆಸಕ್ತಿಗೆ ವ್ಯತಿರಿಕ್ತವಾಗಿ ರೂಪಿಸುವುದನ್ನು ಮತ್ತು ಈ ನಿಟ್ಟಿನ ಕೈವಾಡವನ್ನು ಕಾನೂನುಬಾಹಿರಗೊಳಿಸಲಾಗುತ್ತದೆ ಎಂಬುದು; ಅಧಿಕಾರದ ಕೆಲವೇ ಚಲಾವಣೆಗಳಿರುತ್ತವೆಯೆಂದು ಪ್ರತಿಪಾದನೆಗೆ ಎರಡನೆಯ ಆಧಾರವಾಗಿದೆ. ಜನರ ಆಕಾಂಕ್ಷೆಗಳಿಗೆ ಆಕಾರವನ್ನು ಕೊಡವ ಪ್ರಕ್ರಿಯೆಯಲ್ಲಿನ ಸೂಕ್ಷ್ಮತೆಗಳು ಹೇಗಿರುತ್ತವೆ

ಎಂದರೆ ಅಂತಹ ಅಚ್ಚೊತ್ತುವಿಕೆಯನ್ನು ತೊಡೆದುಹಾಕುವ ಸಾಧ್ಯತೆಗಳು ಬಹುಶಃ ಸಂಭವನೀಯವಲ್ಲ. ಆದಾಗ್ಯೂ, ಅಧಿಕಾರ ನಿರ್ವಹಣೆಯ ವಿದ್ಯಮಾನವನ್ನು ಅರ್ಥಮಾಡಿಕೊಳ್ಳುವ ಶಿಕ್ಷಣವು, ವೈಯಕ್ತಿಕ ಮತ್ತು ಸಾಂಸ್ಥಿಕ ಮಾರ್ಗಗಳೆರಡರಲ್ಲೂ ಹೋರಾಡಲು ಸಮರ್ಥರಾಗಿದ್ದಾರೆ ಎನ್ನುವುದನ್ನು ಪ್ರದರ್ಶಿಸುವ ರೀತಿಯಲ್ಲಿ, ಜನರನ್ನು ಅನೇಕ ಮತ್ತು ಸೂಕ್ಷ್ಮ ರೀತಿಗಳಲ್ಲಿ ಜಾಗೃತಗೊಳಿಸಬಹುದು. ಅಧಿಕಾರದ ಕುತಂತ್ರ ಚಲಾವಣೆಯನ್ನು ಗುರುತಿಸಿ, ರದ್ದುಗೊಳಿಸಲು ಜನರು ತಲ್ಲೀನರಾದ ಇಂತಹ ಸಮಾಜಗಳಲ್ಲಿ, ಅವರ ವಿರುದ್ಧ ಸಾಂಸ್ಥಿಕ ಕೋಟೆ ಕಟ್ಟುವುದು– ಕಾವಲು ಸಮಿತಿಗಳನ್ನು ರಚಿಸುವುದು, ಸಾರ್ವಜನಿಕ ತನಿಖಾಧಿಕಾರಿಯನ್ನು ನೇಮಿಸುವುದು, ಕಾನೂನಿನ ಪುನರ್ವಿಮರ್ಶೆ ಮುಂತಾಗಿ – ಬೇರೆಲ್ಲ ವಿಷಯಗಳು ಸಮಾನವಾಗಿರುವಾಗ, ಅಧಿಕಾರ ಚಲಾವಣೆಯ ಪ್ರಮಾಣವು; ಜನರನ್ನು ಸಂತೋಷವಾಗಿ ಇಡಬೇಕೆಂಬ ಆಸಕ್ತಿಯುಳ್ಳ ಆಳುವ ಗಣ್ಯರ ಗುಂಪು ಇರುವಂತಹ ಸಮಾಜದಲ್ಲಿನ ಅಧಿಕಾರ ಚಲಾವಣೆಗಿಂತಲೂ ಕಡಿಮೆ ಇರತಕ್ಕದ್ದು. ಜನರಿಗೆ, ಅಧಿಕಾರದ ಸಂಕೀರ್ಣತೆ ಮತ್ತು ಯಾಂತ್ರಿಕ ವ್ಯವಸ್ಥೆಗಳನ್ನು ಭಾಗಶಃ ಅರ್ಥಮಾಡಿಸುವ ಗುರಿಯುಳ್ಳ ಶಿಕ್ಷಣವು ಪ್ರತಿಯೊಬ್ಬ ನೈತಿಕ ಮಧ್ಯವರ್ತಿಯೂ ಪ್ರಜಾಪ್ರಭುತ್ವವಾದಿಯಾಗುವಂತೆ ಆತನನ್ನು ಮುನ್ನಡೆಸಬೇಕೆಂದೇನಿಲ್ಲ. ನೈತಿಕ ಚೌಕಟ್ಟಿನಿಂದಲೇ ಹೊರಗಿದ್ದು, ಬೇರೆಯವರ ಮೇಲೆ ಸಾಧ್ಯವಾದಷ್ಟು ಅಧಿಕಾರವನ್ನು ಚಲಾಯಿಸಲು ಇಚ್ಛಿಸುವ ವ್ಯಕ್ತಿಯ ಕುರಿತು ನನಗೆ ಕಾಳಜಿಯಿಲ್ಲ, ಆದರೆ ಅಧಿಕಾರ ಚಲಾವಣೆ ಮತ್ತು ಆಸಕ್ತಿಗಳ ನಡುವಿನ ಸಂಬಂಧವನ್ನು ಪ್ರಶಂಸಿಸುವ, ಮತ್ತು ಅಧಿಕಾರವನ್ನು ಪ್ರಯೋಗಿಸುವವರು ಆಕ್ರಮಣ ಮಾಡಲಾಗದಂತಹ ಆಸಕ್ತಿಗಳನ್ನು ತಾನು ಹೊಂದಿದ್ದಲ್ಲಿ, ಅವರ ವ್ಯಾಪ್ತಿಯಿಂದ ಪರಿಣಾಮಕಾರಿಯಾಗಿ ಹೊರಗುಳಿಯಲಿದ್ದೇನೆ ಎಂಬುದನ್ನು ಅರ್ಥಮಾಡಿಕೊಳ್ಳಬಲ್ಲ ನೈತಿಕ ವ್ಯಕ್ತಿಯ ಬಗ್ಗೆ ನನಗೆ ಕಾಳಜಿಯಿದೆ. ಈಕೆಗೆ ಅವರ ವಿರುದ್ಧ ಸಂಪೂರ್ಣ ರಕ್ಷಣೆಯಿದೆಯಲ್ಲದೆ, ಯಾವುದೇ ಸಾಂಸ್ಥಿಕ ಕವಚಗಳ ಅಗತ್ಯವಿಲ್ಲ. ಪರಮಾವಧಿಯ ಪ್ರಕರಣವಾಗಿ, ನಾನು ಪ್ರಪಂಚದ ಬಗ್ಗೆ (ಅಕ್ಷರಶಃ) ಯಾವುದೇ ಆಸಕ್ತಿಗಳಿಲ್ಲದ, ಪರಲೋಕವನ್ನು ಆದಷ್ಟು ಬೇಗ ಸೇರಲು ಇಚ್ಛಿಸುವ, ಧಾರ್ಮಿಕ ಯೋಗಿಯ ಕುರಿತು ಆಲೋಚಿಸುತ್ತಿದ್ದೇನೆ. ಕೆಲ ಅಧಿಕಾರ ಚಲಾವಣೆಗಳು ಸ್ಪಷ್ಟವಾಗಿ ಆಕೆಯನ್ನು ಪ್ರಭಾವಿಸುತ್ತವೆ. ಆದಾಗ್ಯೂ, ನಾನಾಗಲೇ ತಿಳಿಸಿದಂತೆ, ಆಕೆಯ ಬೇರೆಲ್ಲ ಆಸಕ್ತಿಗಳ ಮೇಲೆ ಪ್ರಾಬಲ್ಯವನ್ನು ಸಾಧಿಸುವ ಅಥವಾ ಆಕೆಯ ಪೂರ್ಣ ಆಸಕ್ತಿಯನ್ನು ಸಂಯೋಜಿಸುವ, ಉತ್ತಮ ಬದುಕಿನ ಧಾರ್ಮಿಕ ಚಿತ್ರಣವುಳ್ಳ ವ್ಯಕ್ತಿಗೆ ಬೇಕಾದ ಸಮಂಜಸ ರಾಜಕೀಯ ವ್ಯವಸ್ಥೆಗಳ ಕುರಿತು ಈ ಪ್ರಬಂಧದಲ್ಲಿ ವಾದಿಸಲು ನನಗೆ ಆಸಕ್ತಿಯಿಲ್ಲ. ಉತ್ತಮ ಬದುಕಿನ ವಿಭಿನ್ನ ಪರಿಕಲ್ಪನೆಗಳಿರುವ ಜನರಿಗೆ, ಪ್ರಜಾಸತ್ತಾತ್ಮಕ ಸಂಸ್ಥೆಗಳು ಕಟ್ಟಳೆಯಿಲ್ಲದ ಅಧಿಕಾರದ ಚಲಾವಣೆಯ ವಿರುದ್ಧ ಅತ್ಯುತ್ತಮ ರಕ್ಷಣೆ ಒದಗಿಸುತ್ತವೆ.

ಪ್ರಜಾಪ್ರಭುತ್ವದಲ್ಲಿ ಕಡಿಮೆ ಅಧಿಕಾರ ಚಲಾವಣೆಯಿರುತ್ತದೆ ಎನ್ನುವ ನನ್ನ ಪ್ರತಿಪಾದನೆಯಲ್ಲಿ, ಕೆರೋಲ್ ಪಾಟ್ಮನ್ನರ ರಾಜಕೀಯ ಬಾಧ್ಯತೆಗಳ ಸಮಸ್ಯೆಗಳೊಂದಿಗೆ (The Problem of Political Obligation) ಸಹಮತವನ್ನು ಹೊಂದಿದ್ದೇನೆ ಎಂದು ಭಾವಿಸುತ್ತೇನೆ. ನಾನು ಆಕೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಲ್ಲಿ, ನಮ್ಮಿಬ್ಬರಲ್ಲಿರ ನಡುವಿನ ಒಂದೇ ಒಂದು ವ್ಯತ್ಯಾಸವೆಂದರೆ, 'ಸ್ವಯಂ–ಗ್ರಹೀತ ರಾಜಕೀಯ ಬಾಧ್ಯತೆಗಳಿರುವ' ರಾಜಕೀಯ ಸಮಾಜದಲ್ಲಿ, ಕೆಲವೇ ಕೆಲವು ಅಧಿಕಾರ ಚಲಾವಣೆಗಳಿರುತ್ತವೆ ಎಂದು ಆಕೆ ಆಲೋಚಿಸುತ್ತಾರೆ. ಅಧಿಕಾರ ಮತ್ತು

ಸಕ್ಷಮ ಪ್ರಾಧಿಕಾರದ ಕಲ್ಪನೆಗಳನ್ನು ಸರ್ವಥಾ ಭಿನ್ನವಾಗಿ ನೋಡುವುದರಿಂದ ಪ್ಯಾಟ್ಮನ್ ಈ ದೃಷ್ಟಿಕೋನವನ್ನು ಹೊಂದಿದ್ದಾರೆಂದು ನಾನು ಭಾವಿಸುತ್ತೇನೆ. ಅವರು ಹೇಳುವಂತೆ:

ಹಲವು ಬಾರಿ 'ರಾಜಕೀಯ' ಎನ್ನುವುದನ್ನು ಅಧಿಕಾರ ಸಂಬಂಧಗಳನ್ನು ಪ್ರಸ್ತಾಪಿಸುತ್ತದೆ. ಉದಾರವಾದಿ ಪ್ರಜಾಪ್ರಭುತ್ವ ಸರ್ಕಾರದ ಪ್ರಜಾಸತ್ತಾತ್ಮಕ ಪರಿವರ್ತನೆ 'ರಾಜಕೀಯ'ದ ಮುಕ್ತಾಯಕ್ಕೇ ಮುನ್ನುಡಿಯಾಗಬಹುದು. ಆದಾಗ್ಯೂ, ಸಾಮಾಜಿಕ ಬದುಕಿನ ಸಾಮೂಹಿಕ ಆಯಾಮವು ಮರೆಯಾಗಲಾರದು; ಪ್ರಜಾಸತ್ತಾತ್ಮಕ ರಾಜಕೀಯ ಪರಿವರ್ತನೆಯ ಉದ್ದೇಶ, ನಾಗರಿಕರು ಸಾಮೂಹಿಕವಾಗಿ ಅಧಿಕಾರ ನಿರ್ವಹಿಸುವಂತೆ, ಆದಷ್ಟು ಮಟ್ಟಿಗೆ ಅಧಿಕಾರ ಸಂಬಂಧಗಳನ್ನು ಸಕ್ಷಮ ಪ್ರಾಧಿಕಾರದ ಸಂಬಂಧಗಳಾಗಿ ಬದಲಿಸುವುದು (ಪ್ಯಾಟ್ಮನ್, 1979, ಪು. 175).

ಅಧಿಕಾರ ಸಂಬಂಧಗಳನ್ನು ಸಕ್ಷಮ ಪ್ರಾಧಿಕಾರ ಸಂಬಂಧಗಳಿಗೆ ಪರಿವರ್ತಿಸುವುದರ ಬಗ್ಗೆ ತಮ್ಮ ಮನಸ್ಸಿನಲ್ಲಿರುವುದನ್ನು ಪ್ಯಾಟ್ಮನ್ ಸ್ಪಷ್ಟಪಡಿಸುವುದಿಲ್ಲ. ನಾನು ಈ ಕೆಳಗಿನಂತೆ ಅದನ್ನು ಊಹಿಸುತ್ತೇನೆ. ಅಧಿಕಾರ ಮತ್ತು ಪ್ರಾಧಿಕಾರಗಳೆರಡೂ ಸಾಂದರ್ಭಿಕ ಕಲ್ಪನೆಗಳು. ಅಧಿಕಾರದ ಸಂದರ್ಭದಲ್ಲಿ, 'ಎ'ಯು 'ಬಿ'ಯನ್ನು ಯಾವುದೋ ಒಂದು ರೀತಿಯಲ್ಲಿ ಅವನ ಆಸಕ್ತಿಗಳಿಗೆ ವಿರೋಧವಾಗಿ ಪ್ರಭಾವಿಸುತ್ತಾನೆ. ಇದು 'ಬಿ'ಯ ಒಪ್ಪಿಗೆಯನ್ನು ಒಳಗೊಂಡಿರುವುದಿಲ್ಲ. ಪ್ರಾಧಿಕಾರದ ಸಂದರ್ಭಗಳಲ್ಲಿ, 'ಎ' ಯು 'ಬಿ'ಯ ಮೇಲೆ ಒಂದಲ್ಲ ಒಂದು ತೆರದಲ್ಲಿ ಅವನ ಆಸಕ್ತಿಗಳ ವಿರೋಧವಾಗಿ ಪ್ರಭಾವಿಸುತ್ತಾನೆ. ಆದರೆ ಇಲ್ಲಿ 'ಎ'ಗೆ ಹಾಗೆ ಮಾಡುವ ಅಧಿಕಾರವಿರುತ್ತದೆ. ನನ್ನ ಮತ್ತು ಪ್ಯಾಟ್ಮನ್ ಮನಸ್ಸಿನಲ್ಲಿರುವ ರೀತಿಯ ಪ್ರಜಾಸತ್ತಾತ್ಮಕ ಸಮಾಜದಲ್ಲಿ, 'ಬಿ'ಯ ಕ್ರಿಯೆ (ಇತ್ಯಾದಿ)ಗಳನ್ನು ನಿರ್ದೇಶಿಸುವ 'ಎ'ಯ ಹಕ್ಕು ಯಾವಾಗಲೂ 'ಬಿ'ನ ಸಮ್ಮತಿಯಿಂದಲೇ ಚಲಾಯಿಸಲ್ಪಡುತ್ತದೆ. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಸರ್ವಾಧಿಕಾರಿ ಅಧಿಕಾರವು ರಾಜಕೀಯ ಅಧಿಕಾರದ ಸಾಮೂಹಿಕ ಚಲಾವಣೆಯಾಗಿ ಪರಿವರ್ತನೆ ಹೊಂದುತ್ತದೆ. ಎಂಬುದಾಗಿ ಪ್ಯಾಟ್ಮನ್ ಅವರು ಇದರಲ್ಲಿನ ವ್ಯತ್ಯಾಸವನ್ನು ಗುರುತಿಸುತ್ತಾರೆ. ಪ್ಯಾಟ್ಮನ್ನರ ಪ್ರಕಾರ ಈ ಕೊನೆಯದ್ದು, ನಾಗರಿಕರ ಒಪ್ಪಿಗೆಯನ್ನು ಒಳಗೊಂಡಿದೆಯಾದ್ದರಿಂದ ಅದನ್ನು ಅಧಿಕಾರ ಚಲಾವಣೆ ಎಂದು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ. ಆದ್ದರಿಂದ ಅಧಿಕಾರವು ಪ್ರಾಧಿಕಾರವಾಗಿ ಬದಲಾಗಿರುವ ಕಾರಣ, ಅಧಿಕಾರ ಚಲಾವಣೆಯ ಪ್ರಸಂಗಗಳು ಕಡಿಮೆಯಿರುತ್ತವೆ.. ಏಕೆಂದರೆ ಅಧಿಕಾರ ಪ್ರಾಧಿಕಾರವಾಗಿ ಬದಲಾಗಿರುತ್ತದೆ. 'ಲೂಕ್ಸ್ ಅವರು, ಆಸಕ್ತಿಗಳ ಸಂಘರ್ಷವಿಲ್ಲದ ನ್ಯಾಯನಿಷ್ಠ ಅಧಿಕಾರ, ಅಧಿಕಾರದ ಒಂದು ರೀತಿಯೇ ಅಲ್ಲ' (ಲೂಕ್ಸ್, 1974, ಪು. 32) ಎಂದು ಹೇಳಲಿಚ್ಚಿಸುವುದರಿಂದ, ಬಹುಶಃ ಅವರೂ ಇದನ್ನು ಒಪ್ಪುತ್ತಾರೆಂದು ಭಾವಿಸುತ್ತೇನೆ. 'ಪ್ರಾಧಿಕಾರ'ವು ಅಧಿಕಾರವನ್ನು ಅವಲಂಬಿಸದಂತೆ ವರ್ತನೆಯನ್ನು ನಿಯಂತ್ರಿಸುವ ದಾರಿಗಳನ್ನು ಹೊರಗೆಡಹುವ ಅಗತ್ಯವಿದೆಯೆಂದು ಪೀಟರ್ ಸಹ ಇದೇ ಅಂಶವನ್ನು ತಿಳಿಸುತ್ತಾರೆ. (ಪೀಟರ್ಸ್, 1967, ಪು. 93).

ಆದಾಗ್ಯೂ, ಸಂಶಯದ ಶೇಷ ನನ್ನಲ್ಲಿ ಉಳಿದಿದೆ. ನಾವು ಅಧಿಕಾರ ಮತ್ತು ಪ್ರಾಧಿಕಾರಗಳಲ್ಲಿ ಈ ತೀಕ್ಷ್ಣವಾದ ವ್ಯತ್ಯಾಸವನ್ನು ಮಾಡಿದಲ್ಲಿ, ಪ್ರಜಾಸತ್ತಾತ್ಮಕ ಸಮಾಜದಲ್ಲಿ, ಅಧಿಕಾರ ಸಂಬಂಧಗಳೆಲ್ಲವೂ ಪ್ರಾಧಿಕಾರ ಸಂಬಂಧಗಳಾಗಿ ಮಾರ್ಪಾಟಾಗಿವೆ ಎಂಬ ನಮ್ಮ ವಾದವು; ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯ ಮೂಲಕವೇ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಚಲಾಯಿಸಬಹುದಾದ ಕೆಲವು ಸಂಭವನೀಯ ಅಧಿಕಾರದ ಚಲಾವಣೆಯನ್ನು ಕಡೆಗಣಿಸುವಂತೆ ನಮ್ಮನ್ನು ಪ್ರಚೋದಿಸಬಹುದು. ಪ್ರಜಾಸತ್ತಾತ್ಮಕ ಸಮಾಜದಲ್ಲಿರುವ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರ ನಡುವೆ

ಇರಬಹುದಾದ ಮೂರು ರೀತಿಯ ಸಂಘರ್ಷಗಳು ನಿರ್ದಿಷ್ಟವಾಗಿ ನನ್ನ ಮನಸ್ಸಿನಲ್ಲಿವೆ. ನಾನು ಇವುಗಳನ್ನು ಶಾಶ್ವತವಾದ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಗುಂಪುಗಳೆಂದೂ ಕಲ್ಪಿಸುತ್ತಿಲ್ಲ. ಹಾಗೇನಾದರೂ ಆದಲ್ಲಿ ಸಮಸ್ಯೆ ಉಲ್ಬಣಿಸುವುದು ಖಚಿತ. ನಾಗರಿಕರು ಕೆಲವು ಸಂಗತಿಗಳನ್ನು ಕುರಿತಂತೆ ಬಹುಮತದ ಆಧಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲು ಒಪ್ಪಿದ್ದಾರೆಂದು ಇಟ್ಟುಕೊಳ್ಳೋಣ. ಎರಡನೆಯ ಅಧ್ಯಾಯದಲ್ಲಿ ಇವನ್ನು ಚರ್ಚಿಸಲಾಗುತ್ತದೆಂಬುದರ ನಿರೀಕ್ಷೆಯಿಲ್ಲದೆ, ಅವುಗಳಲ್ಲಿನ ಒಂದು ವಿಷಯವು; ಕೆಲವು ಸಂಪನ್ಮೂಲಗಳ ಹಂಚಿಕೆ ಎಂದಿಟ್ಟುಕೊಳ್ಳೋಣ. ಒಂದು ಪುಟ್ಟ ಸಮುದಾಯದಲ್ಲಿ ವಿರಾಮ ಸೌಲಭ್ಯದ ಅವಕಾಶವನ್ನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳೋಣ. (5) ಈಜು ಕೊಳ ಅಥವಾ ರಂಗಭೂಮಿ, ಈ ಎರಡರಲ್ಲಿ ಒಂದಕ್ಕೆ ಹಣವಿದೆಯೇ ಹೊರತು ಎರಡಕ್ಕೂ ಅಲ್ಲ. ಅಲ್ಲದೆ, ಯಾವುದೇ ಸಂಪನ್ಮೂಲದ ಹಂಚಿಕೆಯಿಂದ ಇದಕ್ಕೆ ಸಾಕಷ್ಟು ಹಣಕಾಸನ್ನು ಒದಗಿಸಲಾಗದು. ಜನ ಮತ ಚಲಾಯಿಸಬೇಕು ಮತ್ತು ಅವರು ತಮ್ಮ ವೈಯಕ್ತಿಕ ಆದ್ಯತೆಯ ಮೇರೆಗೆ ಒಂದಲ್ಲದಿದ್ದರೆ ಮತ್ತೊಂದು ಸೌಲಭ್ಯಕ್ಕೆ ಮತ ಚಲಾಯಿಸಬಹುದು ಎಂಬುದಕ್ಕೆ ಸಮ್ಮತಿ ದೊರೆತಿದೆ. (ಈ ಹಂತದಲ್ಲಿ ಡ್ವಾರ್ಕಿನ್ನನ ವೈಯಕ್ತಿಕ ಮತ್ತು ಬಾಹ್ಯ ಆದ್ಯತೆಗಳ ವ್ಯತ್ಯಾಸವನ್ನು ಪರಿಚಯಿಸಿ ವಿಷಯದ ಸಂಕೀರ್ಣತೆ ಹೆಚ್ಚಿಸುವ ಅಗತ್ಯವಿಲ್ಲ (ನೋಡಿ: ಅಧ್ಯಾಯ 2, ಪುಟಗಳು. 55–6). ಹೆಚ್ಚು ಜನರು ಈಜುಕೊಳವನ್ನು ಮತ್ತು ಕಡಿಮೆ ಜನರು ರಂಗಭೂಮಿಯನ್ನು ಬಯಸುತ್ತಾರೆ ಎನ್ನುವ ಫಲಿತಾಂಶವು ದೊರೆತಿದ್ದು, ಬಹುಸಂಖ್ಯಾತರ ಅಭಿಪ್ರಾಯವು ಅಲ್ಪಸಂಖ್ಯಾತರ ಅಭಿಪ್ರಾಯವನ್ನು ಗೆದ್ದಿಲ್ಲವೆಂದು ಭಾವಿಸೋಣ. ಕಡಿಮೆ ಸಂಖ್ಯೆಯಲ್ಲಿರುವವರು ಈಗಲೂ ರಂಗಭೂಮಿಯನ್ನೆ ಬಯಸುತ್ತಾರೆ. ಆದರೆ ಅವರು ಪ್ರಜಾಪ್ರಭುತ್ವದ ಕಾರ್ಯವ್ಯವಸ್ಥೆಗೆ ಸಮ್ಮತಿಸಿದ್ದು, ಈ ಹಿಂದೆಯೇ ಕಾರ್ಯನೀತಿಯ ನಿರ್ಧಾರಗಳಿಗೆ ಈ ನಿರ್ದಿಷ್ಟ ಮಾರ್ಗವನ್ನೇ ಅನುಸರಿಸಲು ಒಪ್ಪಿರುವುದರಿಂದ ಬಹುಮತದೊಂದಿಗೆ ಹೋಗಲು ಅವರು ನಿರ್ಧರಿಸುತ್ತಾರೆ. ಇಂತಹ ಸನ್ನಿವೇಶಗಳಲ್ಲಿ, 'ಒಂದು ರೀತಿಯ ಒಮ್ಮತಕ್ಕೆ ಬರಲಾಗುತ್ತದೆ' ಎಂಬುದನ್ನು ಪ್ಯಾಟ್ಮನ್ ತಿಳಿಸಲಿಚ್ಛಿಸುತ್ತಾರೆ (ಪ್ಯಾಟ್ಮನ್, 1979, ಪು. 161). ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಒಟ್ಟಾಗಿ ಈಜುಕೊಳದ ಯೋಜನೆ ಕಾರ್ಯಗತ ಮಾಡುವ ಯೋಜನೆಯನ್ನು ಒಪ್ಪಿಕೊಂಡಲ್ಲಿ, ನಿಶ್ಚಿತವಾಗಿಯೂ ಇದು ಸನ್ನಿವೇಶವನ್ನು ವಿವರಿಸುವ ಒಂದು ಕ್ರಮವಾಗಿದೆ. ಆದರೆ ಇದೇ ಸನ್ನಿವೇಶವನ್ನು ನೋಡುವ ಇನ್ನೊಂದು ರೀತಿಯಿದೆ: ಸರಳವಾಗಿ ಹೇಳುವುದಾದರೆ, ಈ ಸನ್ನಿವೇಶದಲ್ಲಿ, ಬಹುಸಂಖ್ಯಾತರು ಎರಡು ಆಸಕ್ತಿಗಳನ್ನು ಪೂರೈಸಿಕೊಂಡಿದ್ದು, ಅಲ್ಪಸಂಖ್ಯಾತರು ಒಂದು ಆಸಕ್ತಿಯನ್ನು ಪೂರೈಸಿಕೊಂಡು ಇನ್ನೊಂದರಿಂದ ವಂಚಿತರಾಗಿದ್ದಾರೆ. ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಮತ್ತು ಬಹುಮತಕ್ಕೆ ಸಮ್ಮತಿಸಿದ ವಿಧಾನದಲ್ಲಿ ನಿರ್ಧಾರಗಳನ್ನು ಕೈಗೊಳ್ಳಬೇಕೆಂಬ ಹಾಗೂ ಈಜುಕೊಳವನ್ನು ಹೊಂದಬೇಕೆಂಬ ಬಹುಜನರ ಆಸಕ್ತಿಗಳಿಗೆ ಇದರಿಂದ ತೃಪ್ತಿ ದೊರೆಯಿತು ಎಂದು ನಾನು ಇದನ್ನು ಅರ್ಥೈಸುತ್ತೇನೆ. ಅಂತೆಯೇ, ಪ್ರಜಾಪ್ರಭುತ್ವವಾದಿ ಚೌಕಟ್ಟಿನಲ್ಲಿಯೇ ನಿರ್ಧಾರವನ್ನು ಕೈಗೊಳ್ಳಬೇಕೆಂಬ ಅಲ್ಪಸಂಖ್ಯಾತರ ಆಸಕ್ತಿಯೂ ಸಹ ನೆರವೇರಿತಾದರೂ, ರಂಗಭೂಮಿಯನ್ನು ಕುರಿತ ಅವರ ಆಸಕ್ತಿಯು ಪೂರೈಸಲ್ಪಡಲಿಲ್ಲ. ಅಧಿಕಾರವನ್ನು ಕುರಿತ ನಮ್ಮ ವಿಶ್ಲೇಷಣೆಯಂತೆ; ಈ ಒಂದು ರೂಢಿಯು (ಬಹುಮತ) ಅಲ್ಪ ಸಂಖ್ಯಾತರನ್ನು ಅವರ ಆಸಕ್ತಿಗಳ ವಿರುದ್ಧವಾಗಿ ಪ್ರಭಾವಿಸುತ್ತಿದೆ. ಒಂದು ದೃಷ್ಟಿಕೋನದಲ್ಲಿ ನೋಡಿದಾಗ, ಅಲ್ಪಸಂಖ್ಯಾತರು ಅಧಿಕಾರದ ಚಲಾವಣೆಗೆ ಒಳಗಾಗಿದ್ದಾರೆ. ನಿರ್ಧಾರವನ್ನು ಕೈಗೊಳ್ಳುವ ನಿಟ್ಟಿನ ಒಪ್ಪಂದದ ಬಗ್ಗೆ

ಯಾರಾದರೂ ಗಮನವನ್ನು ಕೇಂದ್ರೀಕರಿಸಿ, ಈ ಸಂದರ್ಭವನ್ನು 'ಒಂದು ರೀತಿಯ ಒಮ್ಮತ' ಎಂಬುದಾಗಿ ಎಣಿಸಿ, ಇದನ್ನು ವಿಭಿನ್ನ ರೀತಿಯ ಉದಾಹರಣೆಯಾಗಿ ನೋಡಬಹುದೆಂಬುದನ್ನು ನಾನು ಒಪ್ಪಿದರೂ, ಮತದಾನ ಪ್ರಕ್ರಿಯೆಯು ಅಲ್ಪಸಂಖ್ಯಾತರ ಆಸಕ್ತಿಗಳಿಗೆ ವಿರುದ್ಧವಾಗಿ ಅವರನ್ನು ಪ್ರಭಾವಿಸುತ್ತದೆ ಎನ್ನುವುದರ ಮೇಲೆ ಬೆಳಕು ಚೆಲ್ಲಿದಾಗ, ಅದನ್ನು 'ಒಂದು ರೀತಿಯ ಅಧಿಕಾರ ಚಲಾವಣೆ' ಎಂಬುದಾಗಿಯೂ ಭಾವಿಸಬಹುದಾಗಿದೆ ಎಂಬ ಅಂಶವೂ ನನಗೆ ಪ್ರಮುಖವಾಗಿ ಕಾಣುತ್ತದೆ. ಅಲ್ಪಸಂಖ್ಯಾತ ಸಮೂಹ ಶಾಶ್ವತವಾದದ್ದಾದರೆ ಪರಿಸ್ಥಿತಿ ನಿಶ್ಚಿತವಾಗಿ ಇನ್ನೂ ಹದಗೆಡುತ್ತದೆ. ಇದನ್ನು 'ಬಹುಸಂಖ್ಯಾತರ ಸರ್ವಾಧಿಕಾರ' ಎಂದು ಸಮರ್ಪಕವಾಗಿ ಹೆಸರಿಸಬಹುದು.

ಕೆಲವರು, ಬಹುಸಂಖ್ಯಾತ/ಅಲ್ಪಸಂಖ್ಯಾತರನ್ನು ಕುರಿತ ಈ ಎರಡನೆಯ ಸಂಗತಿಯನ್ನು ಪ್ರತಿಭಟಿಸಬಹುದು. ಅವರು ಸ್ವಯಂ ನಿರ್ವಹಿತ ಪ್ರಜಾಪ್ರಭುತ್ವಗಳಲ್ಲಿನ "ಶಾಶ್ವತ ಬಹುಸಂಖ್ಯಾತ'ರ ಸಾಧ್ಯತೆಯನ್ನೇ ತೊಡೆದುಹಾಕಲು ಇಚ್ಛಿಸಿ ಇಡೀ ಸಮುದಾಯದ ಒಳಿತನ್ನು ಗಮನದಲ್ಲಿಟ್ಟುಕೊಂಡು ಮಾಡಬಹುದಾದ ಕಾರ್ಯನೀತಿಯ ನಿರ್ಧಾರಗಳು ವ್ಯಕ್ತಿಯ ಆಸಕ್ತಿಗಳಿಗೆ ವಿರೋಧವಾಗಿರುವುದಿಲ್ಲ ಎಂದು ವಾದಿಸಬಹುದು. ನಾನು ಎರಡನೆಯ ಅಧ್ಯಾಯದಲ್ಲಿ ಈ ವಿಷಯಗಳನ್ನು ಚರ್ಚಿಸುತ್ತೇನಾದ್ದರಿಂದ, ಇಲ್ಲಿ ಇವನ್ನು ಚರ್ಚಿಸಲು ಬಯಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಕೂಡಾ ಸಾಂದರ್ಭಿಕವಾಗಿ ಮೇಲೆ ವಿವರಿಸಿದಂತಹ ನಿರ್ಧಾರಗಳಿರುತ್ತವೆ ಮತ್ತು ಅಂತಹ ಸಂದರ್ಭಗಳಿರುವವರೆಗೆ ಅಲ್ಪಸಂಖ್ಯಾತರು ಅಧಿಕಾರವನ್ನುಳ್ಳ ಪರಿಸ್ಥಿತಿಯಲ್ಲಿರುತ್ತಾರೆಂದು ಹೇಳಬಹುದೆಂದು ಸೂಚಿಸಲು ಬಯಸುತ್ತೇನೆ. ಪ್ರಜಾಪ್ರಭುತ್ವವಾದಿಗಳು ಹೀಗೆ ಸಂದರ್ಭಗಳನ್ನು ನೋಡುವ ದೃಷ್ಟಿಕೋನದ ಬಗೆಗೆ ಜಾಗೃತರಾಗಿರಬೇಕು ಮತ್ತು ಅಧಿಕಾರ ನಿರ್ವಹಣೆಯ ಅಸಮನ್ವಯತೆಯು ತರುವ ಇಂತಹ ಘಟನೆಗಳ ಆವರ್ತನಗಳನ್ನು ಸಾಧ್ಯವಾದಷ್ಟು ನಿಯಂತ್ರಿಸಬೇಕು, ಏಕೆಂದರೆ ಇವುಗಳನ್ನು ಸಂಪೂರ್ಣವಾಗಿ ತೊಡೆದುಹಾಕಲಾಗದು. ಕೆಲ ಸಂದರ್ಭಗಳಲ್ಲಿ, ಯಾವುದೇ ಸ್ವರೂಪದ ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವ ಸಮಾಜಗಳಿಗಿರುವ ವ್ಯತ್ಯಾಸದ ಬಗ್ಗೆ ಗಮನಸೆಳೆಯಲು; ಪ್ರಜಾಪ್ರಭುತ್ವದಲ್ಲಿರುವ ನಾಗರಿಕರು ರಾಜಕೀಯ ಅಧಿಕಾರಕ್ಕಿಂತ ಮಿಗಿಲಾಗಿ ರಾಜಕೀಯ ಪ್ರಾಧಿಕಾರವನ್ನು ನಿರ್ವಹಿಸುತ್ತಾರೆ ಎಂಬುದನ್ನು ತಿಳಿಸುವುದು ಪ್ರಯೋಜನಕಾರಿ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ನಿಭಾವಣೆಯನ್ನು ಹಂಚಿಕೊಳ್ಳಲಾಗಿದೆ ಅಥವಾ ನಿಯಂತ್ರಿಸಲ್ಪಟ್ಟಿದೆ. ಆದರೆ ಪ್ರಜಾಪ್ರಭುತ್ವ ಸಮಾಜವನ್ನು ಅಧಿಕಾರಯುತ ಸಮಾಜದಿಂದ ಸರ್ವಸಮ್ಮತ ಪ್ರಾಧಿಕಾರ ಸಮಾಜವಾಗಿ ಪರಿವರ್ತಿತವಾದ ಸಮಾಜ ಎಂದು ಭಾವಿಸುವುದು ಅಪಾಯಕಾರಿ. ಇದು ಅನಗತ್ಯ ಜಡತ್ವವನ್ನು ಸೃಷ್ಟಿಸಿ, ರಾಜಕೀಯ ಪ್ರಕ್ರಿಯೆಗಳಲ್ಲಿನ ಅಧಿಕಾರ ನಿರ್ವಹಣೆಯ ಬಗ್ಗೆ ನಾವು ಜಾಗೃತರಾಗಿರುವುದನ್ನು ಕಡಿಮೆ ಮಾಡಬಹುದು. ಏಕೆಂದರೆ ಅಧಿಕಾರ ಮತ್ತು ಪ್ರಾಧಿಕಾರ ಕಲ್ಪನೆಗಳ ಅನ್ವಯಗಳನ್ನು ಕುರಿತ ಮಾಪನವು ಅನಿರ್ಧಾರಿತವಾಗಿದೆ. (6) ಅದರ ಉಪಯೋಗವನ್ನು ಸಂದರ್ಭಕ್ಕೆ ತಕ್ಕಂತೆ ಭಾಗಶಃ ನಿರ್ಧರಿಸಲಾಗುತ್ತದೆಯಾದ್ದರಿಂದ, ನಾನು ಈ ಪ್ರಬಂಧದಲ್ಲಿ ಪ್ರಜಾಪ್ರಭುತ್ವವನ್ನು; ನಿರ್ದಿಷ್ಟ, ಸಮ್ಮತಿಸಿದ ವಿಧಾನಗಳಲ್ಲಿ ಅಧಿಕಾರ ನಿರ್ವಹಣೆಯನ್ನು ಹಂಚಿಕೊಳ್ಳುವ ಮತ್ತು ನಿಯಂತ್ರಿಸುವ ರಾಜಕೀಯ ವ್ಯವಸ್ಥೆ ಎಂಬುದಾಗಿ ವಿವರಿಸಲಿಚ್ಛಿಸುತ್ತೇನೆ. ಅಧಿಕಾರದ ಚಲಾವಣೆಯು ಜನರಿಗೆ ಹಾನಿಯನ್ನುಂಟುಮಾಡುತ್ತದೆ. ಅಧಿಕಾರವನ್ನೇ ನಿಯಂತ್ರಿಸುವ ಪ್ರಕ್ರಿಯೆಗಳಿಗೆ ಬದಲಾಗಿ ಅಧಿಕಾರದಿಂದಾಗುವ ಹಾನಿಯನ್ನು ತಡೆಗಟ್ಟುವ ಮತ್ತು ನಿಯಂತ್ರಿಸುವ ಬಗ್ಗೆ

ನಾನು ಇಲ್ಲಿ ತಿಳಿಸುತ್ತಿದ್ದೇನೆ. ಆದರೆ ಪ್ರಜಾಪ್ರಭುತ್ವವನ್ನು ಒಮ್ಮತದ ಅಧಿಕಾರವೆಂಬುದಾಗಿ ನಾವು ಗ್ರಹಿಸಿದಲ್ಲಿ, ನಾವು ಅಧಿಕಾರದ ನಿಯಂತ್ರಣವನ್ನು ಕುರಿತಂತೆ ಮಾತನಾಡಿದಂತಾಗುತ್ತದೆ.

## ಆರ್ಥಿಕ ಅಧಿಕಾರ ಮತ್ತು ಸಂಪತ್ತಿನ ಹಂಚಿಕೆ.

ನಾನು ಪ್ರಜಾಪ್ರಭುತ್ವದ ರಾಜಕೀಯ ಅಧಿಕಾರದಲ್ಲಿ, ಅಧಿಕಾರದ ನಿರ್ವಹಣೆ ಅಥವ ನಿಯಂತ್ರಣಗಳಲ್ಲಿ ಮೂಲಭೂತವಾದ ಸಮಾನತೆಯ ಪ್ರವೇಶಾಧಿಕಾರವನ್ನು ಒತ್ತಿ ಹೇಳಿದ್ದೇನೆ. ಅದನ್ನು ಅದೇ ರೀತಿಯ ಸಮಾನತಾವಾದದ ದೃಷ್ಟಿಕೋನದ ಸಂಪತ್ತಿನ ಮತ್ತು ವರಮಾನದ ಹಂಚಿಕೆಗೂ ಹೊಂದಿಸಬೇಕು. ನಾನು ಸಾಮಾನ್ಯ ತರದ ಕೇವಲ ಎರಡು ವಿಷಯಗಳನ್ನು ಇಲ್ಲಿ ತಿಳಿಸಲಿಚ್ಚಿಸುತ್ತೇನೆ. ಅದರಿಂದ ಉದ್ಭವವಾಗುವ ವಿಚಾರಗಳನ್ನು ವಿವರವಾಗಿ ಮುಂದುವರೆಸಿದಲ್ಲಿ, ಅದು ನನ್ನನ್ನು ಈ ಪ್ರಬಂಧದ ಪ್ರಧಾನ ವಿಷಯವಾದ ಶೈಕ್ಷಣಿಕ ಅಂಶಗಳಿಂದ ಅತಿ ದೂರಕ್ಕೆ ಕರೆದೊಯ್ಯಬಹುದು. ಯಾವುದೇ ಪ್ರಜಾಪ್ರಭುತ್ವದಲ್ಲಿ ವರಮಾನ ಮತ್ತು ಸಂಪತ್ತಿನ ಹಂಚಿಕೆಯಲ್ಲಿ ಸಮಾನತಾವಾದದ ಮಾರ್ಗವನ್ನು ಅನ್ವಯಿಸುವುದಕ್ಕೆ ಎರಡು ಕಾರಣಗಳಿವೆ. ಮೂಲಭೂತ ಉದಾರವಾದದ ಪೂರ್ವಕಲ್ಪನೆಯಂತೆ; ಯಾವುದೇ ವ್ಯಕ್ತಿಗೆ ಆತನ/ಆಕೆಯ ಸಮಾಜದಲ್ಲಿರುವ ಸಂಪನ್ಮೂಲದಲ್ಲಿ ಸಮಾನ ಭಾಗಕ್ಕೆ ಮತ್ತೊಬ್ಬರಿಗಿರುವಷ್ಟೇ ಹಕ್ಕಿದೆ. ಈ ತತ್ವದಿಂದ ನಿರ್ಗಮಿಸಿದಲ್ಲಿ, ಅದನ್ನು ಸಮರ್ಥಿಸಬೇಕಾಗುತ್ತದೆ. ಆದ್ದರಿಂದ ನಾಗರಿಕನ ಮೂಲಭೂತ ಕಲ್ಯಾಣವನ್ನು ಕುರಿತಂತೆ ಪ್ರತಿಯೊಬ್ಬನಿಗೂ, ಆಹಾರ, ಆಶ್ರಯ, ಬಟ್ಟೆ, ವೈದ್ಯಕೀಯ ಸೌಲಭ್ಯ, ಶಿಕ್ಷಣ ಮುಂತಾದ ತನ್ನ ಮೂಲಭೂತ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳುವ ಹಕ್ಕಿದೆ. ಆತ/ಆಕೆ ಯಾವುದೇ ರೀತಿಯ ಉತ್ತಮ ಬದುಕಿನ ಪರಿಕಲ್ಪನೆಗಳನ್ನು ವಾಸ್ತವೀಕರಿಸಿಕೊಳ್ಳಲು ಇವು ನಿಚ್ಚಳವಾಗಿ ಅಗತ್ಯವಾಗಿದೆ. ಆತ/ಆಕೆಯು ಅದನ್ನು ಪ್ರಶ್ನಿಸಲು ಹಾಗೂ ಪರ್ಯಾಲೋಚಿಸಲು ಬಯಸಿದರೂ ಸಹ ಇದು ಅಗತ್ಯ. ಈ ಹಂತದಲ್ಲಿ ಹಲವು ಓದುಗರು ನನ್ನ 'ಅಗತ್ಯ' ಎಂಬ ಪದದ ಉಪಯೋಗದ ಬಗ್ಗೆ ಪ್ರಶ್ನಿಸಲು, ಮತ್ತು ಇವುಗಳ ಕೊರತೆಯಿದ್ದರೂ ಇವುಗಳನ್ನು ಪರ್ಯಾಲೋಚಿಸುವ ಜನರ ಉದಾಹರಣೆ ನೀಡಲು ಪ್ರೇರಿತರಾಗಿರುತ್ತಾರೆಂಬುದು ನಿಸ್ಸಂಶಯ. ಹೆಣಗಾಟದಲ್ಲಿರುವ ಕಲಾವಿದರು, ಗಂಭೀರ ಖಾಯಿಲೆಗೊಳಗಾದವರು, ಯಾತನಾ ಶಿಬಿರಗಳಲ್ಲಿರುವವರು, ತಮ್ಮ ಮೂಲಭೂತ ಅಗತ್ಯಗಳ ಪೂರೈಕೆಯಾಗಿಲ್ಲದಿದ್ದಾಗ್ಯೂ ಮನುಷ್ಯನ ಉತ್ತಮ ಬದುಕಿನ ಪ್ರಶ್ನೆಯ ಬಗ್ಗೆ ಪರ್ಯಾಲೋಚಿಸುತ್ತಾರೆ ಎಂದು ಆಲೋಚಿಸುವುದು ಕಠಿಣವೇನಲ್ಲ. ಇಂತಹ ದೃಷ್ಟಾಂತಗಳನ್ನು ನಿರಾಕರಿಸಲು ಸಾಧ್ಯವಿಲ್ಲವಾದರೂ, ಈ ಬಹುತೇಕ ಜನರು ತಮ್ಮ ಕಲ್ಪನೆಗಳನ್ನು ವಾಸ್ತವೀಕರಿಸಿಕೊಳ್ಳಲಾಗಲಿಲ್ಲ. ಅದಕ್ಕಿಂತ ಮುಖ್ಯವಾಗಿ, ಪ್ರಜಾಪ್ರಭುತ್ವದಲ್ಲಿನ ನಾಗರಿಕರ ಮೂಲಭೂತ ಅಗತ್ಯಗಳ ನಮ್ಮ ಕಲ್ಪನೆಗಳು ಈ ವಿಶೇಷ ವ್ಯಕ್ತಿಗಳನ್ನು ಆಧರಿಸತಕ್ಕದ್ದೇ ಅಥವಾ 'ಸಾಮಾನ್ಯ ನಾಗರಿಕರನ್ನು' ಆಧರಿಸತಕ್ಕದ್ದೇ ಎಂದು ಯಾರಾದರೂ ಕೇಳಬಹುದು.

ವರಮಾನ ಮತ್ತು ಸಂಪತ್ತಿನ ಹಂಚಿಕೆಯ ಸಮಾನತಾವಾದದ ದೃಷ್ಟಿಕೋನಕ್ಕೆ ಎರಡನೆಯ ಕಾರಣವೆಂದರೆ; ರಾಜಕೀಯ ಅಧಿಕಾರದಲ್ಲಿ ಸಮಾನತೆಯನ್ನು ಪಡೆಯಬೇಕೆಂದರೆ, ಅದು ಆರ್ಥಿಕ ಅಧಿಕಾರದ ಅಸಮಾನ ಹಂಚಿಕೆಯಿಂದ ಹತಾಶವಾಗಲು ಬಿಡಬಾರದು. ರೂಸೊ, ರಾಲ್ಸ್, ಹೊಂಡೆರಿಕ್ ಮುಂತಾದ ಹೆಚ್ಚಿನ ಸಂಖ್ಯೆಯ ಸಾಂಪ್ರದಾಯಿಕ ಮತ್ತು ಆಧುನಿಕ ಲೇಖಕರು ಈ ಸುಪರಿಚಿತ ಅಂಶವನ್ನು ಗಮನಿಸಿದ್ದಾರೆ. ದಾಲನ ಈ ಉದ್ಧೃತ ಹೇಳಿಕೆಯಲ್ಲಿ ಇದನ್ನು ಸೊಗಸಾಗಿ ಸಾರಾಂಶೀಕರಿಸಲಾದೆ: 'ಅದನ್ನು ಅಳತೆ ಮಾಡಲು ಸಾಧ್ಯವಿದ್ದಲ್ಲಿ; ಚರ್ಚೆಗೆ

ಅನುಸೂಚಿತಗೊಂಡ ಪರ್ಯಾಯಗಳ ಮೇಲೆ ಮತ್ತು ರಾಷ್ಟ್ರೀಯ ಚುನಾವಣೆಯಲ್ಲಿ ಸದ್ಯದ ನಿರ್ಧಾರದ ಮೇಲೆ ಹೆನ್ರಿ ಲೂಸನಿಗೆ ನನಗಿಂತ ಸಾವಿರ ಅಥವಾ ಹತ್ತು ಸಾವಿರ ಪಟ್ಟು ಹೆಚ್ಚಿನ ನಿಯಂತ್ರಣವಿರುತ್ತಿತ್ತು ಎಂದು ನಾನು ಊಹಿಸುತ್ತೇನೆ (ದಾಲ್, 1956, ಪು. 72). ರಾಜಕೀಯ ಕಾರ್ಯನೀತಿಯ ಮೇಲಿನ ಇಂತಹ ಆರ್ಥಿಕ ಅಧಿಕಾರವನ್ನು ಪ್ರಜಾಪ್ರಭುತ್ವದಲ್ಲಿ ತೊಡೆದುಹಾಕತಕ್ಕದ್ದು. ಸಮಾನತಾವಾದದ ದೃಷ್ಟಿಕೋನದ ಈ ಎರಡನೆಯ ಕಾರಣವು ವರಮಾನ ಮತ್ತು ಸಂಪತ್ತುಗಳಲ್ಲಿ, ನಾಗರಿಕರ ನಡುವೆ ಇರುವ ಯಾವುದೇ ವ್ಯತ್ಯಾಸವನ್ನು ನಿರುಪಾಧಿಕವಾಗಿ ತಳ್ಳಿಹಾಕದು. (ಸಮಾನ ಉಪಚಾರದ ಬಗೆಗಿನ ಪೂರ್ವ ಕಲ್ಪನೆಯು ಅತಿಕ್ರಮಿಸಲ್ಪಡಬಹುದಾಗಿದ್ದು; ಎಲ್ಲರೂ ಸಮಾನವಾಗಿ ಪರಗಣಿಸಲ್ಪಡುತ್ತಾರಾದರೂ, ಉಪಚಾರಗಳನ್ನು ವಿಭಿನ್ನವಾಗಿ ಸಮರ್ಥಿಸಬಹುದು.) ಆದರೆ ಅದು ವರಮಾನ ವ್ಯತ್ಯಾಸದ ಸಮ್ಮತಿಸಲ್ಪಟ್ಟ ಮಟ್ಟವನ್ನು ಮಿತಿಯಲ್ಲಿಡುತ್ತದೆ. ಆದ್ದರಿಂದ ವರಮಾನ ವ್ಯತ್ಯಾಸಗಳ ಬಗೆಗೆ ಕಾರಣಗಳನ್ನು ನೀಡಬಹುದಾದರೆ, (ಉದಾ. ಪ್ರಾಯಶಃ ಪ್ರೇರಣಾತ್ಮಕ ಕಾರಣಗಳು: ಗಣಿಗಳ ಆಳಕ್ಕೆ ಹೋಗಲು, ಒಳಚರಂಡಿ ಸ್ವಚ್ಛಗೊಳಿಸಲು, ವೃದ್ಧರ ಆಸ್ಪತ್ರೆಗಳಲ್ಲಿ ವೈದ್ಯರಾಗಲು ಸಮಾಜವು ಜನರಿಗೆ ಹೆಚ್ಚು ವೇತನವನ್ನು ಪಾವತಿಸಬೇಕು), ಅವು ಹೆಚ್ಚಿನ ಪ್ರಮಾಣದಲ್ಲಿಲ್ಲದಿದ್ದಲ್ಲಿ ಇದು ಸಾಧ್ಯ. ಹೆಚ್ಚೆಂದರೆ ಎಷ್ಟು 'ಹೆಚ್ಚು' ಎಂದು ನಾನು ಹೇಳಲಾಗದು. ಅದು ಕೆಲಸವನ್ನು ನಿರ್ವಹಿಸಲು ಸಮಂಜಸವಾಗಿರುವಷ್ಟು ಚಿಕ್ಕದಾಗಿರಬೇಕು. ಪ್ರಜಾಪ್ರಭುತ್ವ ಸಮಾಜವು ಹೊಂದಿಕೆಯಾಗುವ ವರಮಾನ ಭಿನ್ನತೆಗಳನ್ನು ಪ್ರೋತ್ಸಾಹಧನವಾಗಿ ಬಳಸಲು ಬಯಸುತ್ತದೆ ಎಂದೂ ಭಾವಿಸಬಾರದು. ಒಂದು ಸೀಮಿತ ಮಿತಿಯೊಳಗೆ ವರಮಾನ ಮತ್ತು ಸಂಪತ್ತಿನ ಬಗೆಗಿನ ಸಮಾನತಾವಾದದ ದೃಷ್ಟಿಕೋನದ ಎರಡನೇ ಕಾರಣದೊಂದಿಗೆ ಇಂತಹ ಹೊಂದಾಣಿಕೆಗಳಿಗೆ ಇದು ಅನುವುಮಾಡಿಕೊಡುತ್ತದೆ.

ಯಾವುದೇ ಪ್ರಜಾಪ್ರಭುತ್ವ ವರಮಾನ ಮತ್ತು ಸಂಪತ್ತಿನ ಹಂಚಿಕೆಯ ಬಗ್ಗೆ ಹೊಂದಬೇಕಾದ, ಸಮಾನತಾವಾದದ ದ್ವಿಮುಖ ದೃಷ್ಟಿಕೋನವು ಮಾರ್ಗ, ಯಾವುದೇ ನಿರ್ದಿಷ್ಟ ಸಮಾಜದಲ್ಲಿ ಸಾರ್ವಜನಿಕ ಮತ್ತು ಖಾಸಗೀ ವಲಯಗಳ ನಡುವೆ ಆಸ್ತಿಗಳನ್ನು ಹೇಗೆ ವಿಭಾಗಿಸಬೇಕು ಎಂಬ ವಿಷಯವನ್ನು ಗಣನೀಯವಾಗಿ ತೆರೆದಿಡುತ್ತದೆ.. ಕನಿಷ್ಠ ಕಲ್ಯಾಣ ಕಾರ್ಯಗಳನ್ನು ಅಳವಡಿಸಲು ಸಂಪತ್ತನ್ನು ಒದಗಿಸಿದ ಮೇಲೆ, (ಸಮಕಾಲೀನ ಸಮಾಜಗಳಲ್ಲಿರುವಂತೆ ಪ್ರಾಸಂಗಿಕವಾಗಿ ಅದನ್ನು ನಿಮ್ನ ಕನಿಷ್ಠವೆಂಬಂತೆ ಭಾವಿಸಬಾರದು) ಉಳಿದದ್ದನ್ನು ಹೇಗೆ ಹಂಚಬೇಕು ಎನ್ನುವ ಪ್ರಶ್ನೆ ಉಳಿಯುತ್ತದೆ. ವಿಭಿನ್ನ ಪ್ರಜಾಪ್ರಭುತ್ವ ಸಮಾಜಗಳಲ್ಲಿ ವಿಭಿನ್ನವಾಗಿ ಪರಿಹರಿಸಲ್ಪಡಬಹುದಾದ ಅನೇಕ ಸಂಗತಿಗಳು ಈ ಹಂತದಲ್ಲಿ ಉದ್ಭವವಾಗುತ್ತವೆ. ಉದಾಹರಣೆಗೆ ಈ ಉಳಿಕೆ, ಹೆಚ್ಚಾಗಿ ವ್ಯಕ್ತಿಗಳಿಗೆ ತಲುಪಬೇಕೆ ಅಥವಾ ಸಾಮುದಾಯಿಕವಾಗಿ ಉಪಯುಕ್ತವಾದ ಸಾರ್ವಜನಿಕ ಕಾರ್ಯಯೋಜನೆಗಳಿಗೆ ವಿನಿಯೋಗವಾಗಬೇಕೆ? ಈ ಸಂಗತಿ ಇದು/ಅಥವಾ ಅದು ಎನ್ನುವ ಕ್ರಮದಲ್ಲಿ ತೀರ್ಮಾನವಾಗಬೇಕಿಲ್ಲ; ಈ ಉಳಿಕೆಯನ್ನು ವ್ಯಯಿಸುವ ಬಗ್ಗೆ ಸಮಾಜಗಳಲ್ಲಿ ಭಿನ್ನಾಭಿಪ್ರಾಯವಿರಬಹುದು. ಈ ಉಳಿಕೆಯನ್ನು ಮಧ್ಯಮ ವರಮಾನ ಪ್ರೋತ್ಸಾಹ ಯೋಜನೆಗಳಲ್ಲಿ ವ್ಯಯಿಸಬೇಕೆ ಬೇಡವೇ ಎಂಬ ಪ್ರಶ್ನೆಯೂ ಈಗಾಗಲೇ ಉದ್ಭವಿಸಿದೆ. ವಿಭಿನ್ನ ಚಾರಿತ್ರಿಕ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವ ಸಮಾಜಗಳು ವಿಭಿನ್ನ ರೀತಿಯಲ್ಲಿ ಈ ಪ್ರಶ್ನೆಗೆ ಉತ್ತರಿಸಬಹುದು.

ಯಾವುದೇ ಪ್ರಜಾಪ್ರಭುತ್ವವಾದಿ ಸಮಾಜದಲ್ಲಿ ಕೆಲ ಸಂಸ್ಥೆಗಳು ಮತ್ತು ಸಂಘಟನೆಗಳು ತಾವು ನಿರ್ವಹಿಸುವ ಕಾರ್ಯ ಮತ್ತು ಗುಣ ಲಕ್ಷಣಗಳ ಕಾರಣದಿಂದ ಸಮುದಾಯದಿಂದ ಸಾರ್ವಜನಿಕ ಮಾಲಿಕತ್ವಕ್ಕೆ ಒಳಪಡತಕ್ಕದ್ದು. ಪ್ರಜಾಪ್ರಭುತ್ವ

ಸಮುದಾಯಗಳು ಖಾಸಗೀ ಸೈನ್ಯ ಅಥವಾ ಖಾಸಗೀ ಪೋಲೀಸು ಪಡೆಗಳನ್ನು ಹೊಂದುವುದು ಸಾಧ್ಯವಿಲ್ಲ. ಆ ಸಂಸ್ಥೆಗಳನ್ನು ಬಿಟ್ಟು ಉಳಿದ ಸಂಪತ್ತುಗಳು ಮತ್ತು ಸಂಘಟನೆಗಳ ಮಾಲೀಕತ್ವವು ಸಾರ್ವಜನಿಕವಾಗಿರಬೇಕು ಎಂದು ತಾತ್ವಿಕವಾಗಿ ವಾದಿಸಲು ಸಾಧ್ಯವಿದೆಯೇ?

ಪ್ರಜಾಪ್ರಭುತ್ವವಾದಿಗಳು ಈ ಪ್ರಶ್ನೆಯನ್ನು ಅದನ್ನು ಪ್ರಶ್ನಿಸಿದ ರೀತಿಯಲ್ಲೇ ತಿರಸ್ಕರಿಸತಕ್ಕದ್ದೆಂದು ನಾನು ಆಲೋಚಿಸುತ್ತೇನೆ. ದಾಲ್ ಸೂಚಿಸುವಂತೆ, "ಆಸ್ತಿ" ಎನ್ನುವುದು ಹಕ್ಕುಗಳ ಒಂದು ಕಂತೆ. (ದಾಲ್, 1970, ಪು. 132) ಯುಗೋಸ್ಲಾವಿಯಾದಲ್ಲಿ ಆರ್ಥಿಕ ಉದ್ಯಮಗಳ ಮೇಲೆ ಮಾಲಿಕತ್ವದ ಹಕ್ಕುಗಳು ಇರುವಂತೆ ಈ ಹಕ್ಕುಗಳನ್ನೂ ಬೇರೆ ಬೇರೆ ರೀತಿಗಳಲ್ಲಿ ರವಾನಿಸಬಹುದು. ಒಮ್ಮೆ ಪ್ರಜಾಪ್ರಭುತ್ವ ವಾದಿಗಳು ಈ ದೃಷ್ಟಿಯಿಂದ ನೋಡತೊಡಗಿದರೆ, ಸಾರ್ವಜನಿಕ ಅಥವ ಖಾಸಗಿ ಮಾಲಿಕತ್ವ ಎನ್ನುವ ಸಾಂಪ್ರದಾಯಿಕ ವರ್ಗಗಳು ಮುರಿದು ಬೀಳುತ್ತವೆ. ಈ ಕಂತೆಯನ್ನು ಪ್ರತ್ಯೇಕವಾಗಿ; ಕೇಂದ್ರಸರ್ಕಾರ, ಸ್ಥಳೀಯ ಸಮುದಾಯಗಳು, ಸಂಸ್ಥೆಗಳು (ಔದ್ಯೋಗಿಕ ಉದ್ಯಮಗಳು, ಆಸ್ಪತ್ರೆಗಳು, ಗ್ರಂಥಾಲಯಗಳು, ಬ್ಯಾಂಕುಗಳು, ಇತ್ಯಾದಿ.) ಮತ್ತು ವ್ಯಕ್ತಿಗಳ ನಡುವಿನ ಹಕ್ಕುಗಳ ಸೂಕ್ತ ಹಂಚಿಕೆಯಾಗಿ ಪರಿಗಣಿಸುವುದು ಹೆಚ್ಚು ವಿವೇಚನಾಯುಕ್ತವಾದುದು. ಆದ್ದರಿಂದ ಸೈನ್ಯ, ಪೋಲೀಸು ಪಡೆ ಮುಂತಾದ ಯಾವ ಸಂಸ್ಥೆಗಳು ನೇರವಾಗಿ ಸರ್ಕಾರದ ನಿಯಂತ್ರಣದಲ್ಲಿರಬೇಕೋ ಅವುಗಳನ್ನು ಬಿಟ್ಟು, ಯಾವುದೋ ನಿರ್ದಿಷ್ಟ ಉದ್ಯಮಕ್ಕೆ ಸೇರಿದ ಹಕ್ಕುಗಳ ಕಂತೆಯು, ಸಮಾನ ಹಂಚಿಕೆ ಅಥವಾ ಸಮಾನ ಅಧಿಕಾರ ನಿಯಂತ್ರಣ ಮುಂತಾದ ಮೂಲಭೂತ ತತ್ವಗಳ ಆಧಾರದ ಮೇಲೆ ಹೇಗೆ ಹಂಚಲ್ಪಟ್ಟಿದೆ ಎಂದು ನೋಡಬಹುದು. ಮತ್ತೊಮ್ಮೆ ಇದನ್ನು ಮೂಲಭೂತ ತತ್ವವನ್ನು ವಾಸ್ತವೀಕರಿಸಲು ಬೇಕಾದ ಸಮರ್ಪಕ ಕಾರ್ಯತಂತ್ರವನ್ನು ಹುಡುಕುವ ವಿಧಾನವೆಂದು ಹೇಳಬಹುದು. ವಿಭಿನ್ನ ಸಮಾಜಗಳು ಅಗತ್ಯವಿಲ್ಲದಾಗ್ಯೂ; ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಸಮ್ಮತಿಸಲ್ಪಟ್ಟ ಅವರವರ ಮೌಲ್ಯಗಳ ಆಧಾರದಲ್ಲಿ ಕಂತೆಯನ್ನು ವಿಭಿನ್ನವಾಗಿ ವಿಭಾಗಿಸುತ್ತಾರೆ: ಹೀಗಾಗಿ ಗಮನಾರ್ಹ ಕೆಲಸ ಕಾರ್ಯಗಳಿಗೆ ಇಲ್ಲಿ ಅವಕಾಶವಿದೆ. ಉದಾಹರಣೆಗೆ ಕೆಲವರು ಖಾಸಗಿ ಯೋಜನೆಗಳನ್ನು ಬಿಟ್ಟು ಸಾರ್ವಜನಿಕ ಯೋಜನೆಗಳೆಡೆಗೆ ಒಲವನ್ನು ತೋರುವುದು ಇತ್ಯಾದಿ.

ಈ ಚರ್ಚೆಯು, ಯಥಾರ್ಥ ಹಾಗೂ ಚಾರಿತ್ರಿಕವಾಗಿ ನೆಲೆಗೊಂಡ ಸಮಾಜಗಳಲ್ಲಿ ಪ್ರಜಾಪ್ರಭುತ್ವವನ್ನು ಸಾಧಿಸಲು ಸೂಕ್ತವೆನಿಸುವ ಸಾಮಾನ್ಯ ಕಾರ್ಯತಂತ್ರಗಳನ್ನು ಪರಿಶೀಲಿಸುವುದಕ್ಕಾಗಿ ನಮ್ಮನ್ನು ಎರಡನೆಯ ಅಧ್ಯಾಯಕ್ಕೆ ಕರೆದೊಯ್ಯುತ್ತದೆ. ಶಿಕ್ಷಣದ ಸಂಘಟನೆ ಮತ್ತು ನಿಯಂತ್ರಣದ ಕುರಿತಾದ ಸಂಗತಿಗಳನ್ನು ನಿಭಾಯಿಸಲು ನಂತರದಲ್ಲಿ ಬಳಸಿಕೊಳ್ಳಬಹುದಾದ ಕಾರ್ಯನೀತಿಯನ್ನೂ ಸಹ ಇದು ಮುಂದಾಲೋಚಿಸುತ್ತದೆ.